# ದೇವರು ಕೊಡುವ ಸರ್ವಾಯುಧಗಳು

## ಎಲ್ಲಾ ವಯಸ್ಸಿನವರಿಗೆ ಶಿಕ್ಷಕರ ಪುಸ್ತಕ




"ಮಕ್ಕಳೇ ಪ್ರಮುಖರು" ವತಿಯಿಂದ ಸಂಡೇ ಸ್ಕೂಲ್ ಕಾರ್ಯಕ್ರಮ"

ವೆಬ್: [www.ChildrenAreImportant.com/armour/](http://www.ChildrenAreImportant.com/armour/)

"ಮಕ್ಕಳೇ ಪ್ರಮುಖರು" ತಂಡದ ಪ್ರತಿಯೊಬ್ಬರಿಗೂ ಕೃತಜ್ಞತೆಗಳು!

ಪ್ರಮುಖ ಸಂಪಾದಕರು: Kristina Krauss

ಕ್ರಿಯಾತ್ಮಕ ತಂಡ: Abril Palacios Camacho, Areli Zuriel Salinas Sanchez, Dwight Krauss, Jacob Kuruvilla, Jennifer Sánchez Nieto, Julio Sánchez Nieto, Mike Kangas, Monserrat Duran Díaz, Rubén Darío, Suki Kangas, Verónica Toj, and Vickie Kangas.

Thanks to Rubén Darío for the wonderful music in this program.

ಭಾಷಾಂತರ ತಂಡ: Ali Atuha, Aline Xavier, Annupama Wankhede, Anton Klymyk, Araz Mammadzadeh, Aroma Publications and Media, Arturo Jr Boron, Blessy Jacob, Carla Mayumi, Carmela Dawn Flores, Chrisbresnahan, David Raju, Ephraim Njuguna Mirobi, Finny Jacob, Geenav, HamidReza Azimi (hamid.azimi1364 at gm#ail com), Heyaudrey, I-clever.com, iqbalman, Jacob Kuruvilla, kamilturk, Karunguru Mwangi, kiran, Krauz1, Maitrayi Mondal, Marco Chu, Marcos Rocha, Mathew Das, Mitesh Mandaliya, mrramlama, Mrs.Geethashree NavaneethaKrishnan, Nassim Bougtaia, nicbenk, Paul Mwangi, Paul Septan, Rana922, Rubina Rai, Sabrina Benny John, Safdar Khan, shahroshan15, SubtitleMe, Talento-Unido, ueritom, Verdia Juliansyah Cancerika, Yeoh Jung Chin, and Zeina Mirella Barzaga Arencibia.

## ಪರಿಚಯ




ಸಹೋದರರೇ ಮತ್ತು ಸಹೋದರಿಯರೇ,

ಈ ಸಮಯದಲ್ಲಿ ನಾವು ನಿಮಗೆ ದೇವರ ಸೈನ್ಯದಲ್ಲಿರುವ ಮಿಲಟರಿ ಅಧಿಕಾರಿಯನ್ನು ಪರಿಚಯಪಡಿಸುತ್ತಿದ್ದೇವೆ! ನಿಮ್ಮ ಸಭೆಯಲ್ಲಿರುವ ಪ್ರತಿಯೊಬ್ಬರೂ "ದೇವರು ಕೊಡುವ ಸರ್ವಾಯುಧಗಳು" ಪುಸ್ತಕದ ವಿಷಯಗಳಲ್ಲಿ ಭಾಗಿಯಾಗಲು ಬಯಸುತ್ತಾರೆ. ಅವರು ಗಟೆಮಾಲ ಸಿಲ್ವಿಯಾ ಡಿಲೊ, ಮಾರಿಯೊ ವೆಲಾಸ್ಕುವಿಜ಼ ಮತ್ತು ಅವರ ತಂಡದಲ್ಲಿರುವವರು ನಿರ್ಮಿಸಿರುವ ಸೂಪರ್ ಫನ್ ರ್ಯಾಲಿ/ಗೇ ಡೇ ಮೂಲಕ ಪ್ರಾರಂಭಿಸಬಹುದು. ಹಾಗೆಯೇ ಸುಕಿ ಕಂಗಾಸ್ ಬರೆದಿರುವ ಹೊಸ ಡ್ರಾಮಾ/ಸ್ಕಿಟ್ ಗಳ ಮೂಲಕ ಸಂತೋಷವು ಮುಂದುವರೆಯುವದು. ಜೆಮ್ಮಿ ಸಾನ್ ಚೆಜ್ ರವರು ಮಿಲಿಟರಿ ಅಧಿಕಾರಿ ಅಪ್ ರೈಟ್ (ಮೈಕ್ ಕಂಗಾಸ್) ಮತ್ತು ಸಿಪಾಯಿಗಳಾದ ಸಿಪಾಯಿ ಗಿಗಲ್ (ಸುಕಿ ಕಂಗಾಸ್) ಮತ್ತು ಸಿಪಾಯಿ ಡ್ಯೂಟಿ (ಫ್ಲೋರ್ ಬೊಲ್ಡೊ) ಆನಂದವಾಗಿ ನಡೆಸುಕೊಡುವ ಕಾರ್ಯಕ್ರಮದ ವೀಡಿಯೊಗಳನ್ನು ಎಡಿಟ್ ಮಾಡುವಾಗ ನಗುವದನ್ನು ಕೇಳಿಸಿಕೊಳ್ಳುವದು ಹೆಚ್ಚು ಮನೋರಂಜನೆಯುಳ್ಳದ್ದಾಗಿದೆ. ಒಂದುವೇಳೆ ಸುಕಿಯವರ ಡ್ರಾಮಾಗಳು ನಿಮಗೆ ನಗು ತರಿಸದೆ ಹೋದರೆ, ನಂತರ ನೀವು ಇಡೀ ಪ್ಯಾಕೇಜ್ ನ ಹೊಸ ರಚನೆಯನ್ನು ನೋಡಬಹುದು. ಶಿಕ್ಷಕರ ಪುಸ್ತಕದ ಮುಖಪುಟ ನನಗೆ ಬಹಳ ಇಷ್ಟವಾಗಿದೆ, ಅದರಲ್ಲಿರುವ ಎಲ್ಲಾ ತಮಾಷೆಯ ಚಿತ್ರಗಳು ಮತ್ತು ಮಿಲಿಟರಿ ಅಧಿಕಾರಿ ಅಪ್ ರೈಟ್ ಈ ಎಲ್ಲಾ ಸಿಪಾಯಿಗಳೊಂದಿಗೆ ಏನು ಮಾಡಬಹುದೆಂದು ನೋಡುವದು ಸಂತೋಷಕರವಾಗಿದೆ! (ಬಹುಶಃ ಇದು ನಿಮ್ಮ ತರಗತಿಯ ಹಾಗೆ ಅನ್ನಿಸುತ್ತದೆ?)

ನಿಮ್ಮ ವಿದ್ಯಾರ್ಥಿಗಳು ದೇವರು ಕೊಡುವ ಸರ್ವಾಯುಧಗಳನ್ನು ಕಂಠಪಾಠ ಮಾಡುವದು ಮಾತ್ರವಲ್ಲ ಬದಲಾಗಿ ಅದಕ್ಕನುಸಾರ ಜೀವಿಸುತ್ತಾರೆ ಎಂಬ ದೃಢತೆ ನನಗಿದೆ. ಸುಕಿ ರವರ ಹೊಸ ಬ್ಯಾಡ್ಜ್ ಗಳೊಂದಿಗೆ ಒಳ್ಳೆಯ ರಾಂಕ್ ಪಡೆಯಲು ಮಕ್ಕಳು ಉತ್ಸುಕರಾಗಿರುತ್ತಾರೆ ಮತ್ತು ಪ್ರತಿಯಿಬಬ್ಬ ಶಿಕ್ಷರ ಭುಜಗಳು ಅವುಗಳಿಂದ ಕಂಗೊಳಿಸುತ್ತಿರುತ್ತವೆ. ಈ ಕ್ರಾಫ್ಟ್ ಗಳನ್ನು ಮಾಡುವಾಗ ಮಕ್ಕಳಿಗೆ ಖುಷಿಯಾಗುವದು ಮಾತ್ರವಲ್ಲ, ಶಿಕ್ಷಕರೂ ಇದರಲ್ಲಿ ಭಾಗಿಯಾಗಲು ಬಯಸುತ್ತಾರೆ, ಯಾಕಂದರೆ ಫ್ಲೋರ್ ಬೊಲ್ಡೊ ಅವುಗಳನ್ನು ಅಷ್ಟೊಂದು ಸುಂದರವಾಗಿ ಮಾಡಿದ್ದಾರೆ. ನನ್ನ ಸತ್ಯವೇದಕ್ಕೆ ನನಗೆ ನನ್ನದೇ ಆದ ಬುಕ್ ಮಾರ್ಕ್ ಬೇಕಾಗಿದೆ! ವಿದ್ಯಾರ್ಥಿಗಳ ಹೊಸ ಪುಸ್ತಕವು ಅತ್ಯಂತ ಸುಂದರವಾಗಿದೆ, ಮಾನ್ಸೆ ಡುರೆನ ಅದನ್ನು ಸಿದ್ಧಪಡಿಸಿದ್ದಾರೆ, ಕಲೆಗಾರ ಡಗ್ಲಸ್ 1985 ಹೊಸ ರಚನೆ ಹಾಗೂ ಹೊಸ ಚಿತ್ರಗಳನ್ನು ಕೊಟ್ಟಿದ್ದಾರೆ ಮತ್ತು ಶಿಕ್ಷಕರಿಗೂ ತಮ್ಮ ಹೊಸ ಜಟಿಲ ಮಾರ್ಗಗಳನ್ನು ಬಗೆಹರಿಸಲು ಅಡ್ವಾನ್ಸಡ್ ವಿಧ್ಯಾರ್ಥಿ ಪುಸ್ತಕ ಬೇಕಾಗಬಹುದು ಅನ್ನಿಸುತ್ತದೆ!

ಈ ಕಾರ್ಯಕ್ರಮವು ಕೇವಲ ಮೋಜುಗಳಿಗೆ ಮಾತ್ರ ಸೀಮಿತವಲ್ಲ! ಪುಸ್ತಕಗಳ ಪ್ರತಿಯೊಂದು ಭಾಗದಲ್ಲಿಯೂ ಸಂದೇಶಗಳಿವೆ, ಹೊಸ ಪಾಠಗಳಿಂದ ನಾನು ಆಳವಾದ ವಿಷಯಗಳನ್ನು ಬರೆದಿರುವದರಿಂದ ಪ್ರಶ್ನೆ ಮತ್ತು ಉತ್ತರಗಳಲ್ಲಿ ಅದನ್ನು ನೋಡಬಹುದು ಅಲ್ಲದೆ ವಾರ ಮಧ್ಯದ ಅಸೈನ್ಮೆಂಟ್ ಗಳನ್ನು ವಿಕ್ಕಿ ಕಂಗಾಸ್ ಬರೆದಿದ್ದಾರೆ. ಮೈಕ್ ಕಂಗಾಸ್ ರವರು ಬರೆದಿರುವ ಹಾಡುಗಳಲ್ಲಿರುವ ಸಂದೇಶಗಳು ನೇರವಾಗಿ ಹೃದಯಕ್ಕೆ ಮುಟ್ಟುತ್ತವೆ ಹಾಗೂ ಫ್ಲೋರ್ ಬೊಲ್ಡೊರವರು ಪುಸ್ತಕದ ಹಿಂದೆ ವಾಟ್ಸಪ್ ನಿಂದ ಅಧುನಿಕ ಸಂದೇಶಗಳನ್ನು ಬರೆದಿದ್ದಾರೆ ಇವುಗಳನ್ನು ಕೇಳಲು ಮತ್ತು ಓದಲು ಮರೆಯಬೇಡಿರಿ.

ಸಂಗೀತದ ಬಗ್ಗ ಮಾತನಾಡುವದಾದರೆ, ನನ್ನಂದಿಗೆ ಇಂಗ್ಲೀಷ್ ಮತ್ತು ಸ್ಪಾನಿಶ್ ನಲ್ಲಿ ಹಾಡಿರುವ ಪ್ರತಿಯೊಬ್ಬರ ಹಸರುಗಳನ್ನು ನಾನು ಹೇಳಲು ಬಯಸುತ್ತೇನೆ, ಆದ್ದರಿಂದ ಸರ್ವಾಯುಧಗಳಲ್ಲಿರುವ 10 ಹಾಡುಗಳು ಸುಂದರವಾಗಿ ಬಂದಿವೆ, ತಮಾಷಯಾಗಿವೆ ಮತ್ತು ಬಲವಾದ ಸಂದೇಶವನ್ನು ಕೊಡುತ್ತವೆ. ಇಂಗ್ಲೀಷ್ ಸಿಡಿ ಬಿಡುಗಡೆಗೆ ಸಹಾಯ ಮಾಡಿದ ಆಂಡಿ ಕಂಗಾಸ್, ಜೆಸ್ಸಿಕಾ ಮಾಶೆಲ್ ಮತ್ತು ಆಸ್ಟಿನ್ ಮಾಶೆಲ್ ರಿಗೆ ಅನೇಕಾನೇಕ ಕೃತಜ್ಞೆಗಳು ಹಾಗೂ ನನ್ನೊಂದಿಗ ಸ್ಪಾನಿಶ್ ನಲ್ಲಿ ಹಾಡಿರುವ ಮೈಕ್ ಕಂಗಾಸ್

ಮತ್ತು ಫ್ಲೊರ್ ಬೊಲ್ಡೊ ರಿಗೂ ಕೃತಜ್ಞತಗಳನ್ನು ಸಲ್ಲಿಸುತ್ತೇನೆ. ಆದರ ಸುಕಿ ತನ್ನ ಕ್ರಿಯಾತ್ಮಕ ಆಕ್ಷನ್ ಗಳ ಮೂಲಕ ಹಾಡುಗಳಿಗೆ ಹೆಚ್ಚು ಜೀವವನ್ನು ತುಂಬಿದರು ಮತ್ತು ಇಡೀ ತಂಡದವರಾದ ಡೇವಿಡ್, ಜೂಲಿಯೊ, ಫ್ಲೊರ್, ಮಾನ್ಸೆ, ಜೆನ್ನಿ ಮತ್ತು ಸುಕಿ ಸೇರಿಕೊಳ್ಳುವದು ನನ್ನ ಅಚ್ಚುಮೆಚ್ಚಿನ ಹಾಡಾಗಿದೆ.


ನಿಜವಾಗಿಯೂ ಇದು ತಂಡದ ಪರಿಶ್ರಮವಾಗಿದ್ದು, ಪ್ರಾರ್ಥೆಯೊಂದಿಗೆ ಪ್ರಾರಂಭವಾಗಿ, ಜೂಲಿಯೊ ಸಾನ್ ಚೆಜ್ ಮೆಕ್ಸಿಕೊ ಹಾಗೂ ಗುಟೆಮಾಲಾದಲ್ಲಿ ಮುದ್ರಣ ಮಾರಾಟಕ್ಕಾಗಿ ಮುದ್ರಣದ ಕಡೆಯ ಮಾಹಿತಿಯನ್ನು ಮುಗಿಸವ ತನಕ ಮತ್ತು ಮೈಕ್ ಕಂಗಾಸ್ ಎಲ್ಲಾ ಭಾಷಗಳ  ಪುಸ್ತಕವನ್ನು ನೀವು ಉಚಿತವಾಗಿ ಡೌನ್ ಲೋಡ್ ಮಾಡಲು ವೆಬ್ ಸೈಟ್ ಗೆ ಡೌನ್ ಲೋಡ್ ಮಾಡುವ ತನಕ ಎಲ್ಲಾ ಕಾರ್ಯಗಳನ್ನು ಒಟ್ಟಾಗಿ ಮಾಡಲಾಗಿದೆ. ಇದಲ್ಲದೆ  ಫೇಸ್ ಬುಕ್ ಕಾರ್ಯಗಳ ಮೇಲ್ವಿಚಾರಕರಾಗಿರವ ವೆರೊನಿಕ ಟೊಜ್ ಗುಟೆಮೆಲಾದಲ್ಲಿ ಮತ್ತು ಭಾರತದಲ್ಲಿ ಭಾಷಾಂತರಗಳ ಮೇಲ್ವಿಚಾರಕರಾಗಿರುವ ಬ್ಲೆಸಿ ಜೇಕಬ್ ರವರಗೂ ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ. ಮತ್ತು ಎಲ್ಲವುಗಳನ್ನು ಸಂಕಲನ ಮಾಡಲು ನನಗ ಸಹಾಯ ಮಾಡಿದ ಫ್ಲೊರ್ ಬೊಲ್ಡೊರವರಗೂ ಕೃತಜ್ಞತಗಳನ್ನು ಸಲ್ಲಿಸತ್ತೇನೆ.

ಕಾರ್ಯಕ್ರಮವನ್ನು ನಿಮ್ಮ ಪ್ರೀತಿಯಿಂದ ಅಭಿವೃದ್ಧಿಪಡಿಸಿ, ಕ್ರಿಯಾತ್ಮಕವಾಗಿ ಸೇವೆ ಮಾಡುತ್ತಿರುವದಕ್ಕಾಗಿ ತಂಡದವರೆಲ್ಲರಿಗೆ ಅಭಿನಂದನೆಗಳು. ನೀವಿಲ್ಲದೆ ಏನನ್ನೂ ಮುಗಿಸಲು ಆಗುತ್ತಿರಲಿಲ್ಲ. ಯುದ್ಧದ ಮುಂದಿರುವ ಪ್ರತಿಯೊಬ್ಬ ಶಿಕ್ಷಕಿಗೂ ಕೃತಜ್ಞತೆಗಳು ಯಾಕಂದರೆ ಅವರೇ ಈ ತರಗತಿಗಳನ್ನು ನಡೆಸುತ್ತಾ ಲೋಕದಲ್ಲಿ ಬದಲಾವಣೆಗಳನ್ನು ತರುವವರಾಗಿದ್ದಾರೆ. ನಾವು ಈ ಪುಸ್ತಕಗಳನ್ನು ಮಾಡುತ್ತಿರುವದು ಇವುಗಳನ್ನು ಧೂಳು ಹಿಡಿಸುವದಕ್ಕಾಗಿಯಲ್ಲಿ ಬದಲಾಗಿ ಮುಂದಿನ ಸಂತತಿಯನ್ನು ತರಬೇತುಗೊಳಿಸುವದಕ್ಕಾಗಿಯಾಗಿದೆ. ಶಿಕ್ಷಕರಾದ ನೀವಿಲ್ಲದೆ ಹೋದರೆ, ನಮ್ಮ ತಂಡದ ಏನೂ ಮಾಡಲು ಆಗುವದಿಲ್ಲ. ಮಕ್ಕಳ ಮೇಲೆ ನಿಮಗಿರುವ ಪ್ರೀತಿ, ನಿಮ್ಮ ಸಮರ್ಪಣೆ ಹಾಗೂ ತಾಳ್ಮೆಯ ಮೂಲಕ ನೀವು ಕೊಡುತ್ತಿರುವ ಆತ್ಮೀಕ ಫಲಗಳಿಗಾಗಿ ನಿಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.
ದೇವರು ನಿಮ್ಮೆಲ್ಲರಿಗೆ ಎರಡರಷ್ಟು ಆಶೀರ್ವಾದವನ್ನು ಕೊಡಲಿ!

Kristina Krauss
ಮಕ್ಕಳೇ ಪ್ರಮುಖರು

# ಈ ಪುಸ್ತಕವನ್ನು ಉಪಯೋಗಿಸವದು ಹೇಗೆ

## ನಿರ್ದಿಷ್ಟತೆಗಳು



ವಿದ್ಯಾರ್ಥಿ



ಶಿಕ್ಷಕ


ಈ ಕಾರ್ಯಕ್ರಮದಲ್ಲಿರುವ ವಿಶೇಷತೆ ಏನೆಂದರೆ ಮಕ್ಕಳು ಮತ್ತು ಶಿಕ್ಷಕರು ಪದಕಗಳನ್ನು ಗಳಿಸಿಕೊಳ್ಳಬಹುದಾಗಿದೆ. ಪ್ರತಿಯೊಂದು ತರಗತಿಯನ್ನು ಪ್ರಾರಂಭಿಸುವ ಮೊದಲು, ನೀವು ಮಿನಿ ಅವಾರ್ಡ್ ಸಮಾರಂಭವನ್ನು ಏರ್ಪಡಿಸಬೇಕು ಮತ್ತು ಪದಕಗಳನ್ನು ಕೊಡಬೇಕು. (ತರಗತಿಗೂ ಮೊದಲೇ ಒಂದುವೇಳೆ ನೀವು ಸಿದ್ಧತೆಗಳನ್ನು ಮುಗಿಸದೆ ಹೋದರೆ, ಹಾಡುಗಳ ಸಮಯದಲ್ಲಿ ಸಿದ್ಧತೆಗಳನ್ನು ಮಾಡಬಹುದು). ಪ್ರತಿ ವಾರ ನಾಲ್ಕು ಬ್ಯಾಡ್ಜ್ ಗಳನ್ನು ಗೆಲ್ಲಬಹುದು. ನಂತರ ವಿದ್ಯಾರ್ಥಿಗಳು ಬರುವಾಗ, ಹೋಮ್ ವರ್ಕ್ ನ ನೋಟ್ಸ್ ತೆಗೆದುಕೊಳ್ಳಿರಿ: ಅಪೊಸ್ತಲರ ಕೃತ್ಯಗಳಿಂದ ಓದಿರುವ ಅಧ್ಯಾಯಗಳು ಮತ್ತು "ಬೂಟ್ ಕ್ಯಾಂಪ್" ಕಾರ್ಯಗಳನ್ನು ಅವರು ವಾರದ ಮಧ್ಯದಲ್ಲಿ ಮಾಡಬೇಕು. ಹಾಗೆಯೇ ಅವರ ವಾರದ ಹಾಜರಾತಿಯನ್ನೂ ಗಮನಿಸಿರಿ. ಅಂತಿಮವಾಗಿ, ಕಂಠಪಾಠ ವಾಕ್ಯವನ್ನು ಹೇಳುವಂತೆ ಅವರಿಗೆ ಹೇಳಿರಿ (ನಾವು ದೇವರು ಕೊಡುವ ಸರ್ವಾಯುಧಗಳ ವಚನಭಾಗವನ್ನು ಕಲಿತುಕೊಳ್ಳುತ್ತೇವೆ) ಆದ್ದರಂದ ಅವರು ಸ್ಟಾರ್ ಗಳನ್ನು ಗೆಲ್ಲಬಹುದು. ಯಾರು ಯಾವುದನ್ನು ಗೆದ್ದಿದ್ದಾರೆ ಎಂಬ ದಾಖಲೆ ಸರಿಯಾಗಿರಲಿ ಮತ್ತು ಪ್ರತಿವಾರ ನಡೆಸುವ ಸಣ್ಣ ಸಮಾರಂಭದಲ್ಲಿ ಅವರಿಗ ಪದಕಗಳನ್ನು ವಿತರಿಸಿರಿ.

- ತರಗತಿಯ ಹಾಜರಾತಿ
- ಲೈಫ್ ಹೋಮ್ ವರ್ಕ್ ಕಾರ್ಯ
- ಹೋಮ್ ವರ್ಕ್ ಕಾರ್ಯಗಳನ್ನು ಓದುವದು
- ಸರ್ವಾಯುಧಗಳ ವಾಕ್ಯಗಳ ಕಂಠಪಾಠ

ಪುಸ್ತಕದ ಕೊನೆಯಲ್ಲಿ ಒಂದು ಹಾಳೆಯಿದೆ ಅದರಲ್ಲಿ ಅವರಿಗೆ ದೊರೆತಿರುವ ಪದಕಗಳನ್ನು ನೀವು ಬರೆಯಬಹುದು.

## ಹಾಜರಾತಿ

ಪ್ರತಿಯೊಂದು ಮಗು ಪ್ರತಿಯೊಂದು ತರಗತಿಗೆ ಬರುವಾಗ ಒಂದು ಮುಖ್ಯ ಪದಕ ಸಿಗುತ್ತದೆ. ನೀವು ಮಕ್ಕಳಿಗೆ ಎರಡು ಭುಜಗಳಿಗೆ ಹಾಕಿಕೊಳ್ಳಲು 2 ಪದಕಗಳು ಅಥವಾ ಒಂದು ಭುಜಕ್ಕೆ ಹಾಕಿಕೊಳ್ಳಲು 1 ಪದಕ ಕೊಡಬಹುದು.







ಭಾಗಶಃ ಸಹಾಯದ ಉದಾಹರಣೆಗಳು ಅಥವಾ ಕೇವಲ ಕೆಲವು ದಿನಗಳು ಮಾತ್ರ.
ಗೆರೆಗಳಿರುವವುಗಳನ್ನು ಒಟ್ಟಾಗಿ ಇಡಿರಿ.



## ಓದುವದು ಮತ್ತು ಕಂಠಪಾಠ ಮಾಡುವದು




ಪ್ರತಿಯೊಂದು ಪಾಠದಲ್ಲಿ ಕೊಡಲಾಗಿರುವ ಅಪೊಸ್ತಲರ ಭಾಗವನ್ನು ಓದುವಾಗಿ ಮತ್ತು ಆ ದಿನದ ವಾಕ್ಯವನ್ನು ಕಂಠಪಾಠ ಮಾಡುವಾಗ ಮಕ್ಕಳು ಒಂದೊಂದು ಸ್ಟಾರ್ ಸಂಪಾದಿಸಬಹುದು. ಒಂದುವೇಳೆ ಅವರು ಅಪೊಸ್ತಲರ ಕೃತ್ಯಗಳ ಇಡೀ ಪುಸ್ತಕವನ್ನು ಓದುವದಾದರೆ ಮತ್ತು 10 ವಾಕ್ಯಗಳನ್ನು ಕಂಠಪಾಠ ಮಾಡುವದಾದರೆ, ಅವರ ಪದಕಗಳು ಪೂರ್ಣಗಳ್ಳುತ್ತವೆ. ಈ ಪದಕವನ್ನು ಮಕ್ಕಳ ಬಲಭಾಗಕ್ಕೆ ಹಾಕಿರಿ. (ಒಂದುವೇಳೆ ಅವರು ಹಿಂದಿನ 9 ತರಗತಿಗಳಲ್ಲಿ ಸಾಧಿಸರುವದಾದರ 10ನೇ ವಾರವನ್ನು ಸಂಪಾದಿಸಿಕೊಳ್ಳಬಹುದು.)



## ಬೂಟ್ ಕ್ಯಾಂಪ್/ಲೈಫ್ ಅಸೈನ್ಮೆಂಟ್

ಪ್ರತಿಯೊಂದು ಪಾಠದಲ್ಲಿಯೂ ಹೋಮ್ ವರ್ಕ್ ಅಸೈನ್ಮೆಂಟ್ ಇರುತ್ತದೆ ಅದು ಅವರು ವಾರದ ಮಧ್ಯದಲ್ಲಿ ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಮಕ್ಕಳು ಒಂದು ಟಾಸ್ಕ್ ಪೂರ್ಣಗೊಳಿಸುವಾಗ ಒಂದು "ರಿಬ್ಬನ್" (ಪೇಪರ್ ರೆಕ್ಟಾಂಗಲ್) ಪಡೆಯುತ್ತಾರೆ. ರೆಕ್ಟಾಂಗಲ್ ಗಳನ್ನು ದಾರ, ಟೇಪ್ ನಿಂದ ಜೋಡಿಸಿರಿ ಅಥವಾ ಹಾಳೆಗಳ ಚೂರಿನಿಂದ ಅವುಗಳಿಗೆ ಗೋಂದು ಅಂಟಿಸಿರಿ. ಮಗುವಿನ ಎಡಭಾಗಕ್ಕೆ ಅದನ್ನು ಹಾಕಿರಿ.



## ಸಮಯ: (1½ ತಾಸುಗಳು)

(10 ನಿಮಿಷಗಳು) ತರಗತಿಗೆ ಮೊದಲು:

- ಮಕ್ಕಳು ಬರುವಾಗ, ಅವರ ಸಾಧನೆಗಳನ್ನು ಬರೆದುಕೊಳ್ಳಿರಿ, ಆಗ ಅವರು ಪ್ರತಿವಾರ 4 ಪದಕಗಳನ್ನು ಗೆಲ್ಲಲು ಸಹಾಯವಾಗುತ್ತದೆ.
- ತರಗತಿ ಹಾಜರಾತಿ
- ಲೈಫ್ ಹೋಮ್ ವರ್ಕ್: "ಬೂಟ್ ಕ್ಯಾಂಪ್"
- ಓದುವ ಹೋಮ್ ವರ್ಕ್: ಅಪೊಸ್ತಲರ ಕೃತ್ಯಗಳು
- ಸರ್ವಾಯುಧಗಳ ವಚನಗಳ ಕಂಠಪಾಠ

(25 ನಿಮಿಷಗಳು) ಪ್ರಾರಂಭ:

- ಆಕ್ಷನ್ ನೊಂದಿಗೆ ಹಾಡುಗಳು
- ಅವಾರ್ಡ್ ಸಮಾರಂಭ / ಪದಕಗಳು
- ಪಾಠದ ಶೀರ್ಷಿಕೆ
- ನಾಟಕ / ಸ್ಕಿಟ್




(15 ನಿಮಿಷಗಳು) ಪಾಠ:

- ಮುಖ್ಯ ಪಾಠ
- ಕಂಠಪಾಠ ವಚನ

(20 ನಿಮಿಷಗಳು) ವಿದ್ಯಾರ್ಥಿ ಪುಸ್ತಕಗಳು:

- ಪದಬಂಧಗಳು ಮತ್ತು ಚಟುವಟಿಕೆಗಳು
- ಪವರ್ ಪಾಯಿಂಟ್ / ತೀರ್ಮಾನ
- ಪ್ರಶ್ನೆಗಳು / ಚರ್ಚೆ
- ಅಸೈನ್ ಲೈಫ್ ಮತ್ತು ಓದುವ ಹೋಮ್ ವರ್ಕ್

(20 ನಿಮಿಷಗಳು) ಚಟುವಟಿಕೆಗಳು:

- ಆಟ
- ಕರಕುಶಲ

## ನಾಟಕಗಳು



ಪ್ರತಿವಾರ ಮಿಲಟರಿ ಅಧಿಕಾರಿಯು ಇಬ್ಬರು ಸಿಪಾಯಿಗಳಿಗೆ ದೇವರು ಕೊಡುವ ಸರ್ವಾಯುಧಗಳ ಬಗ್ಗೆ ಬೂಟ್ ಕ್ಯಾಂಪ್ ನಲ್ಲಿ ಹೇಳಿಕೊಡುವರು. ಪ್ರತಿಯೊಂದು ನಾಟಕದಲ್ಲಿ ಹೊಸ ಸಿಪಾಯಿಗಳು ಮಕ್ಕಳಿಗಿರುವ ಸಂಡೇ ಸ್ಕೂಲ್ ಪಾಠಕ್ಕೆ ಆಯಾ ದಿನದ ಸಮಾಂತರವಿರುವ ಪಾಠವನ್ನು ಕಲಿತುಕೊಳ್ಳುತ್ತಾರೆ

ಪಾತ್ರಧಾರಿಗಳು:

- ಸಿಪಾಯಿ ಗಿಗ್ಗಲ್

ಯಾವಾಗಲೂ ಗೊಂದಲದಲ್ಲಿರುತ್ತಾನೆ ಮತ್ತು ಸರ್ವಾಯುಧಗಳನ್ನು ಮರೆತುಹೋಗುತ್ತಾನೆ.

- ಸಪಾಯಿ ಡ್ಯೂಟಿ

ಸೂಚನೆಗಳನ್ನು ಚೆನ್ನಾಗಿ ಪಾಲಿಸುತ್ತಾನೆ.

- ಮಿಲಿಟರಿ ಅಧಿಕಾರಿ ಅಪ್ರೈಟ್

ಇಬ್ಬರು ಹೊಸ ಸಿಪಾಯಿಗಳಿಗೆ ತರಬೇತಿ ಕೊಡುತ್ತಾರೆ

ಇವುಗಳನ್ನು ಕಲಿತುಕೊಳ್ಳಲು, ಈ ನಾಟಕಗಳೆಲ್ಲವೂ DVD ಅಥವಾ You Tube ನಲ್ಲಿ ಲಭ್ಯವಿದೆ. ನೀವು ನಿಮ್ಮವರನ್ನು ಪಾತ್ರಧಾರಿಗಳನ್ನಾಗಿ ತೋರಿಸಲು ಈ ವೀಡಿಯೊಗಳನ್ನು ಪ್ರೇರಣೆಯಾಗಿ ತೆಗೆದುಕೊಳ್ಳಬಹುದು ಅಥವಾ ಮಕ್ಕಳಿಗೇ ವೀಡಿಯೊಗಳನ್ನು ನೇರವಾಗಿ ತೋರಿಸಬಹುದು.

ನಾಟಕದ ಈ ವೀಡಿಯೊಗಳಲ್ಲಿ ನಿಜವಾದ ಭಾಷೆಗಳ ಉಪಯೋಗವಿಲ್ಲ ಆದ್ದರಿಂದ ನೀವು ನಿಮ್ಮ ಕ್ಷೇತ್ರ ಯಾವುದೇ ಭಾಷೆ ಮಾತನಾಡುವವರಾಗಿದ್ದರೂ ಇದನ್ನು ಉಪಯೋಗಿಸಬಹುದು.

ನಿಮ್ಮ You Tube ಚಾನೆಲ್ ನಲ್ಲಿ ನಾಟಕಗಳನ್ನು ನೋಡಬಹುದು.

[www.youtube.com/c/Childrenareimportant](www.youtube.com/c/Childrenareimportant)

## ಕಾರ್ಡ್ ಬೋರ್ಡ್ ಸರ್ವಾಯುಧಗಳು ಮತ್ತು ಅವುಗಳ ಸರಳವಾದ ರಚನೆ

ನಮ್ಮ ನಾಟಕಗಳಿಗೆ, ನಾವು ಕಾರ್ಡ್ ಬೋರ್ಡ್ ಡಬ್ಬಿಗಳು, ರಿಬ್ಬನ್ ಮತ್ತು ಸಾಣಿಗೆ/ಹರಿವಾಣಗಳ ಸಹಾಯದಿಂದ ದುಬಾರಿಯಲ್ಲದ ಸರ್ವಾಯುಧಗಳನ್ನು ತಯಾರಿಸುವವರಾಗಿದ್ದೇವೆ. ಬಲೂನ್ ಗಳಿಂದ ಉದ್ದವಾದ ಸರ್ವಾಯುಧಗಳ ಸೂಟ್ ಮಾಡುವದು ಹೇಗೆ ಎಂಬದನ್ನು ತಿಳಿಯಲು ಹೆಚ್ಚುವರಿ ಆಲೋಚನೆಗಳ ವಿಭಾಗದಲ್ಲಿ ಸೂಚನೆಗಳು ಹಾಗೂ ಇತರೆ ಆಲೋಚನೆಗಳನ್ನು ತಿಳಿದುಕೊಳ್ಳಿರಿ.





ರಕ್ಷಣೆಯೆಂಬ ಶಿರಸ್ತ್ರಾಣ

ಜರಡಿ ಅಥವಾ ಬಾಣಲೆ/ಹರಿವಾಣ

ರಿಬ್ಬನ್

ತಲೆಗೆ ಮೃದುವಾಗಿರಲು ಟವಲ್







ನೀತಿಯೆಂಬ ವಜ್ರಕವಚ

ದೊಡ್ಡ ಕಾರ್ಡ್ ಬೋರ್ಡ್ ಬಾಕ್ಸ್

ರಿಬ್ಬನ್ ಮತ್ತು ಗ್ಲೂ/ಸಿಲಿಕೊನ್

ಹೊಲಿಗೆ ಹಾಕಿದರೆ  ಕಾರ್ಡ್ ಬೋರ್ಡ್ ಮತ್ತು ಸ್ತರಗಳು ಬಿಗಿಯಾಗಿರುತ್ತವೆ









ನಂಬಿಕೆಯೆಂಬ ಗುರಾಣಿ

ದೊಡ್ಡ ಬಾಕ್ಸ್ ನ ಒಂದು ಭಾಗ

ಪಾರದರ್ಶಕ ಪ್ಲಾಸ್ಟಿಕ್ ಬ್ಯಾಗ್

ಸಿಲಿಕೊನ್ ಗ್ಲೂ


ಕರ್ಲಿ ರಿಬ್ಬನ್/ಸ್ಟ್ರಿಂಗ್

ಪ್ರರ್ಥನೆ/ಸಂಪರ್ಕ ಸಾಧಿಸಲು ಬಳಸುವ ಸಾಧನ


1 ಚಿಕ್ಕ ಬಾಕ್ಸ್

ಸ್ವಲ್ಪ ವೈಯರ್


ಬಾಕ್ಸ್ ಅನ್ನು ತಿರುವು ಮಾಡಲು:











ಸತ್ಯವೆಂಬ ನಡುಕಟ್ಟು

ನಿಮ್ಮ ನಡುಕಟ್ಟಿಗೆ ನೀವು ಉಪಯುಕ್ತ ಸಾಧನಗಳನ್ನು ಸಿಕ್ಕಿಸಬಹುದು, ಕವಣೆ, ಬೈನಾಕುಲರ್ಸ್, ಹಗ್ಗ ಮತ್ತು ತತ್ರಾಣಿ.






ಚೂರುಗಳು

ಪ್ರತಿಯೊಂದು ಚೂರು ಸ್ವಲ್ಪ ಕಾರ್ಡ್ ಬೋರ್ಡ್ ಮತ್ತು ಸಿಲಿಕೋನ್/ಗ್ಲೂ ಬಯಸುತ್ತದೆ.







ಕವಣೆ








ಹಗ್ಗ








ಬೈನಾಕುಲರ್ಸ್




ಕಾರ್ಡ್ ಬೋರ್ಡ್ ಬಾಕ್ಸ್ ನಂತೆಯೇ ಕೆಳಗಿನ ಭಾಗವನ್ನು ಮುಚ್ಚಿರಿ.






ಕ್ಯಾಂಟೀನ್/ತತ್ರಾಣಿ


2 ಬಳಸಿ ಬಿಸಾಡಬಹುದಾದ ಪ್ಲೇಟ್ ಮತ್ತು ಟಾಯ್ಲೆಟ್ ಪೇಪರ್ ಟ್ಯೂಬ್ ನಿಂದ ಕ್ಯಾಂಟೀಣ್ ಮಾಡುವದು ಹೇಗೆ ಎಂಬದನ್ನು ತಿಳಿಯಲು ಹೆಚ್ಚುವರಿ ಅಲೋಚನೆಗಳ ಭಾಗವನ್ನು ನೋಡಿರಿ.







ಈ ಚೂರುಗಳನ್ನು ಸಹಜವಾದ ನಡುಕಟ್ಟಿನ ಮೇಲೆ ಹಾಕಿರಿ.



ಸೀನೊಗ್ರಫಿ

10 ನಾಟಕಗಳಿಗಾಗಿ:

ಏಣಿ

2 ಕಾರ್ಡ್ ಬೋರ್ಡ್ ಬಾಕ್ಸ್

ಟೇಬಲ್

ವಾಟರ್ ಕಂಟೇನರ್

ಹಾಳೆಯ ಸಣ್ಣ ಚೂರುಗಳು



## ಹೆಚ್ಚುವರಿ ಆಲೋಚನೆಗಳು




ನಿ ಬಲೂನ್ ಗೋಪುರಗಳು

ಕಂದು, ಹಸಿರು, ಕಪ್ಪು ಮತ್ತು ಬಿಳಿ ಬಣ್ಣದ ಬಲೂನ್ ಗಳಿಂದ ಎರಡು ಗೋಪುರಗಳನ್ನು ಅಥವಾ ಸ್ತಂಭಗಳನ್ನು ನಿರ್ಮಿಸೋಣ.

ನಾಲ್ಕು ಬಣ್ಣಗಳ ಮಿನಿ ಸ್ತಂಭವನ್ನು ಕಟ್ಟೋಣ.

ಎರಡು ಜೋಡಿಗಳನ್ನು ಮಾಡಿರಿ (2 ಬಲೂನ್ ಕಟ್ಟಿರಿ) 1 ಹಸಿರು ಮತ್ತು 1 ಕಪ್ಪು ಹಾಗೂ 1 ಬಿಳಿ ಮತ್ತು 1 ಕಂದು ಬಣ್ಣದ ಬಲೂನ್.

ಸಲಹೆ: ಅವುಗಳನ್ನು ಬಲೂನಿನ ಮಧ್ಯಭಾಗಕ್ಕೆ ಕಟ್ಟುವದನ್ನು ಮರೆಯಬೇಡಿರಿ ಆಗ ಉತ್ತಮವಾದ ರೂಪವನ್ನು ಪಡೆಯಬಹುದು. ಈಗ ಜೋಡಿಗಳನ್ನು ಎದುರುಬದುರಾಗಿ ತಿರುಗಿಸಿರಿ. ಇದೇ ರೀತಿ ಇನ್ನೂ 8 ಸಲ ಮಾಡುವಾಗ ಒಟ್ಟು 9 ಬಲೂನ್ ಗುಂಪುಗಳಾಗುತ್ತವೆ. ಹಸಿರು ಬಣ್ಣವನ್ನು ಸೂಚಕವಾಗಿ x ಆಕಾರದಲ್ಲಿ ಮೊದಲನೆಯ ಗುಂಪನ್ನು ಇಡಿರಿ. ಈಗ ಉಳಿದವುಗಳನ್ನು + ರೀತಿಯಲ್ಲಿ ಜೋಡಿಸಿಕೊಂಡು ಹೋಗಿರಿ, ಇವುಗಳು ಸಡಿಲಗೊಳ್ಳದಂತೆ ಮಧ್ಯದಲ್ಲಿ ಕರ್ಲಿ ರಿಬ್ಬನ್ ಹಾಕಿರಿ. ಇದೇ ಪ್ರಕಾರ ಇತರೆ ಗುಂಪುಗಳನ್ನು ಮುಂದುವರೆಸುತ್ತಾ, ಪ್ರತಿಬಾರಿ ಅವುಗಳನ್ನು ತಿರುಗಿಸಿರಿ: x,+,x,+ ಇತ್ಯಾದಿ.




ಸಲಹೆ: ನಿಮ್ಮ ಮಿನಿ ಗೋಪುರದ ಮೇಲ್ಭಾಗದಲ್ಲಿ ಮೆಟಲ್ ಬಣ್ಣದ ಬಲೂನ್ ಇಟ್ಟು, ಅಂತಿಮಗೊಳಿಸಿರಿ.

ಮಿನಿ ಬಲೂನ್ ಗೋಪುರ ಮಾಡುವದು ಹೇಗೆ ಎಂಬ ಸೂಚನೆಗಳೊಂದಿಗೆ ನಾವು ವೀಡಿಯೋ ಮಾಡಿದ್ದೇವೆ.

https://youtu.be/hut9db-AL0I

ಅಥವಾ ನಿಮ್ಮ ಯೂ ಟ್ಯೂಬ್ ಚಾನೆಲ್ ನಲ್ಲಿ ಹುಡುಕಿರಿ:

http://youtube.com/c/Childrenareimportant



ಪೇಪರ್ ಹಾಳೆಯಿಂದ ಮಾಡಬಹುದಾದ ಆಲಂಕಾರಿಗ ಸಂಕೇತಗಳು

ಅವಶ್ಯವಿರುವ ಸಾಮಗ್ರಿಗಳು ಹಸಿರು, ಕಂದು, ಬೂದು, ಕಪ್ಪು ಬಣ್ಣದ ಲೆಟರ್ ಅಳತೆಯ ಹಾಳೆಗಳು, ಕತ್ತರಿ, ಪೆನ್ಸಿಲ್, ರೂಲರ್ ಮತ್ತು ದಾರ. ನಾವು ತ್ರಿಕೋನ ರೂಪವನ್ನು ಮಾಡುವವರಾಗಿದ್ದೇವೆ. ನಿಮ್ಮ ಹಾಳೆಯನ್ನು ಅಡ್ಡವಾಗಿ ಇಟ್ಟುಕೊಳ್ಳಿರಿ, ಲಟರ್ ಅಳತಯ ಹಾಳೆಯನ್ನು ಮಧ್ಯಕ್ಕೆ ಮಡಚಿರಿ, ಹಾಳೆಯನ್ನು ಕತ್ತರಿಸಿರಿ ಮತ್ತು ಮೋಲ್ಡ್ ಮಾಡಲು ಅರ್ಧವನ್ನು ಮಾತ್ರ ಉಪಯೋಗಿಸಿರಿ, ರೂಲರ್ ನಿಂದ ಹಾಳೆಯ ಅಗಲವನ್ನು

ಅಳತೆ ಮಾಡಿ ಮಧ್ಯದಲ್ಲಿ ಗುರುತು ಹಾಕಿರಿ. ಉದಾಹರಣೆಗೆ, 14cm ಅಳತ ಮಾಡಿದರೆ 7cm ಬಳು ಗುರುತು ಹಾಕಿರಿ. ಈಗ ಆ ಗುರುತಿನಿಂದ ಎಡಭಾಗದಲ್ಲಿರುವ ಮೇಲಿನ ತುದಿಗೆ ಗೆರೆ ಎಳೆಯಿರಿ ಮತ್ತು ಇದೇ ಪ್ರಕಾರ ಬಲಭಾಗದ ಮೇಲಿರುವ ತುದಿಗೂ ಮಾಡಿರಿ. ಈಗ ತ್ರಿಕೋನದ ಆಕಾರವು ದೊರೆಯುತ್ತದೆ. ಹೆಚ್ಚಾಗಿರುವ ಭಾಗವನ್ನು ಕತ್ತರಿಸಿರಿ ಮತ್ತು ನಿಮಗೆ ಮಾದರಿಯು ದೊರೆಯುತ್ತದೆ. ಬಣ್ಣದ ಹಾಳೆಗಳಲ್ಲಿ ನೀವು ಹಲವು ತ್ರಿಕೋನಗಳನ್ನು ಮಾಡಿದ ನಂತರ, ಅವುಗಳನ್ನು ಮತ್ತಷ್ಟು ಉತ್ತಮಗೊಳಿಸಬಹುದು.
ಈಗ ತ್ರಿಕೋನಗಳನ್ನು ದಾರಕ್ಕೆ ಅಂಟಿಸಿರಿ. ನಡುವೆ ಸ್ಥಳ ಬಿಡಬೇಡಿರಿ.




ಕಾರ್ಡ್ ಬೋರ್ಡ್ ಬಾಕ್ಸ್ ಗಳು
ವಿವಿಧ ಅಳತೆಯ ಕಾರ್ಡ್ ಬೋರ್ಡ್ ಬಾಕ್ಸ್ ಗಳು, ಪರ್ಮನೆಂಟ್ ಮಾರ್ಕರ್, ಕ್ರಾಫ್ಟ್ ಪೇಪರ್ ಅಥವಾ ಕಂದು ಬಣ್ಣದ ಪೇಪರ್ ಮತ್ತು ಟೇಪ್ ತನ್ನಿರಿ.
ಪೇಪರಿನಿಂದ ಕಾರ್ಡ್ ಬೋರ್ಡ್ ಬಾಕ್ಸ್ ಮುಚ್ಚಿರಿ. "ರಕ್ಷಣೆಯ ಶಿರಸ್ತ್ರಾಣ" ಅಥವಾ "ಸುವಾರ್ತಾ ಪಾದರಕ್ಷೆಗಳು" ಎಂಬ ಸಾಲುಗಳನ್ನು ಬರೆದು ಬಾಕ್ಸ್ ಗಳನ್ನು ಅಲಂಕಾರ ಮಾಡಿರಿ ಹಾಗೂ ತರಗತಿಯ ದೃಶ್ಯವನ್ನು ಅಲಂಕಾರ ಮಾಡಲು ಕೆಲವು ಬಾಕ್ಸ್ ಗಳನ್ನು ಉಳಿಸಿಕೊಳ್ಳಿರಿ.

ಪ್ಯಾರಾಶೂಟ್ ಸಿಪಾಯಿಗಳು
ಪ್ಲಾಸಿಟ್ ಸಿಪಾಯಿಗಳು, ಕಾಫಿ ಫಿಲ್ಟರ್ಸ್, ಕಾರ್ಡ್ ಬೋರ್ಡ್, ಟೇಪ್ ಮತ್ತು ರಿಬ್ಬನ್/ಸ್ಟ್ರಿಂಗ್ ಬೇಕಾಗುತ್ತವೆ.
ಕರ್ಲಿ ರಿಬ್ಬನಿನೊಂದಿಗೆ ಕಾಫಿ ಫಿಲ್ಟರ್ ಅನ್ನು ಪ್ಲಾಸ್ಟಿಕ್ ಸಿಪಾಯಿಗೆ ಕನೆಕ್ಟ್ ಮಾಡಿರಿ. ಫಿಲ್ಟರ್ ನ ಮೇಲ್ಭಾಗದಲ್ಲಿ ನೀವು ಟೇಪ್ ನ ಮತ್ತೊಂದು ಸ್ಟ್ರಿಪ್ ಪೇಸ್ಟ್ ಮಾಡುವದಾದರೆ ನಿಮ್ಮ ಮನೆಯ ಬಾಗಿಲಿಗೆ ಅದನ್ನು ಹಾಕಬಹುದು ಅಥವಾ ಎಲ್ಲಿ ಅಲಂಕರಿಸಬೇಕೆಂದು ಬಯಸುತ್ತೀರೋ ಅಲ್ಲಿ ಹಾಕಬಹುದು. ಸಂಪ್ರದಾಯಬದ್ಧ "ಸರ್ವಾಯುಧಗಳಿಗೆ" ಬದಲಾಗಿ ಈ ಸಿಪಾಯಿಗಳು ವಿವಿಧ ಪದಗಳನ್ನು ಹಿಡಿದುಕೊಳ್ಳುವದರಿಂದ ಈ ಕಾರ್ಯಕ್ರಮದಲ್ಲಿರುವ ಪಾಠಗಳಿಗೆ ಹೊಂದಿಕೊಳ್ಳುತ್ತವೆ: ನಂಬಿಕೆ, ಸತ್ಯ, ಸಮಾಧಾನ, ರಕ್ಷಣೆ ಇತ್ಯಾದಿ.






ಪೇಪರ್ ಪ್ಲೇಟ್ ಮತ್ತು ಟ್ಯೂಬ್ ಗಳ ಮೂಲಕ ಕ್ಯಾಂಟೀನ್
ಉಪಯೋಗಿಸಿ ಬಿಸಾಡಬಹುದಾದ ಎರಡು ಪ್ಲೇಟ್ ಅಥವಾ ಎರಡು ಕಾರ್ಡ್ ಬೋರ್ಡ್ ವೃತ್ತಗಳು ಹೆಚ್ಚುಕಡಿಮೆ 10cm ವೃತ್ತವಿರುವಂಥದ್ದು, ಗ್ಲೂ, ಕತ್ತರಿ, ಕಂದು ಮತ್ತು ಹಸಿರು ಬಣ್ಣದ ಪೇಂಟ್ ಅಥವಾ ಹಸಿರು ಹಾಗೂ ಕಂದು ಬಣದಲ್ಲಿ ವಿವಿಧ ಛಾಯೆಗಳಿರುವ ಹರಿದ ಹಾಳೆಗಳು, ಸ್ಯಾನಿಟರಿ ಪೇಪರ್ ಟ್ಯೂಬ್ (ಒಂದು ಟ್ಯೂಬ್ ಇಬ್ಬರು ಮಕ್ಕಳಿಗೆ ಸಾಕಾಗುತ್ತದೆ) ಅಥವಾ ನೀವು ಪ್ಲಾಸ್ಟಿಕ್ ಬಾಟಲ್ ಮತ್ತು ಕರ್ಲಿ ರಿಬ್ಬನ್ ಸಹ ಉಪಯೋಗಿಸಬಹುದು.

ಸೂಚನೆಗಳು: ಪ್ರತಿಯೊಂದು ಪೇಪರ್ ಪ್ಲೇಟ್ ಮೇಲೆ ಪೇಪರ್ ಟ್ಯೂಬ್ ನ ಅಳತೆಗನುಸಾರ U ಅಕ್ಷರವನ್ನು ಬರೆಯಿರಿ, ಅವುಗಳು ಒಂದೇ ಅಳತೆಯಲ್ಲಿವೆಯೇ ಎಂಬದನ್ನು ದೃಢಪಡಿಸಿಕೊಳ್ಳಿರಿ ಮತ್ತು ಅವುಗಳನ್ನು ಕತ್ತರಿಸಿರಿ. "U" ಆಕಾರದಲ್ಲಿ ಕತ್ತರಿಸಿರುವ ಜಾಗಕ್ಕೆ ಪೇಪರ್ ಟ್ಯೂಬ್ ಅನ್ನು ಪ್ಲೇಟ್ ಗೆ ಅಂಟಿಸಿರಿ. ಮತ್ತೊಂದು ಪ್ಲೇಟ್ ಮೇಲ್ಭಾಗಕ್ಕೆ ಸೇರಿಸಿರಿ ಮತ್ತು ಅವುಗಳನ್ನು ಒಟ್ಟಾಗಿ ಗ್ಲೂನಿಂದ ಅಂಟಿಸಿರಿ.

ಇದನ್ನು ನೀವು ಎರಡು ರೀತಿಯಲ್ಲಿ ಅಲಂಕರಿಸಬಹುದು. ಒಂದು ಆಯ್ಕೆ ಹಸಿರು ಮತ್ತು ಕಂದು ಬಣ್ಣದ ಪೇಂಟ್. ಮತ್ತೊಂದು ಆಯ್ಕೆ ಎಂದರೆ ಹಸಿರು ಮತ್ತು ಕಂದು ಬಣ್ಣದ ಹಾಳೆಯನ್ನು ವಿವಿಧ ಛಾಯೆಗಳಲ್ಲಿ ಹರಿಯುವದು ನಂತರ ಅವುಗಳನ್ನು ಪ್ಲೇಟ್ ನ ಮೂಲೆಗಳಿಗೆ ಅಂಟಿಸುವದು. ಎರಡೂ ಕಡೆಗಳಿಗೆ ಸಣ್ಣ ರಂಧ್ರಗಳನ್ನು ಮಾಡಿರಿ ಮತ್ತು ಅಲ್ಲಿಗೆ ಕರ್ಲಿ ರಿಬ್ಬನ್ ಅಥವಾ ಸ್ಟ್ರಿಂಗ್ ಕಟ್ಟಿರಿ.

## ಲಭ್ಯವಿರುವ ಸಾಮಗ್ರಿಗಳು




ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನ ಗುಂಪಿನವರಿಗೆ 10 ಪಾಠಗಳು

ವಿದ್ಯಾರ್ಥಿಗಳ ಪುಸ್ತಕಗಳು


ಸುಲಭ – ವಯಸ್ಸು 4-6

ಮಧ್ಯಮ – ವಯಸ್ಸು 7-9

ಕಷ್ಟ – ವಯಸ್ಸು 10-12

ಅಡ್ವಾನ್ಸಡ್ – ವಯಸ್ಸು 13+




ಪೋಸ್ಟರ್ ಮತ್ತು ಫ್ಲೈಯರ್

ಹೆಚ್ಚು ಮಕ್ಕಳನ್ನು ಆಹ್ವಾನಿಸಿರಿ!






ಪ್ರಮಾಣಪತ್ರ

ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ಮಕ್ಕಳಿಗೂ ಕೊಡಿರಿ





ಪದಕಗಳು/ನಿರ್ದಿಷ್ಟತೆಗಳು

- ತರಗತಿ ಹಾಜರಾತಿ
- ವಾರದ ಮಧ್ಯದಲ್ಲಿ ಲೈಫ್ ಹೋಮ್ ವರ್ಕ್
- ಓದುವ ಹೋಮ್ ವರ್ಕ್: ಅಪೊಸ್ತಲರ ಕೃತ್ಯಗಳು
- ಕಂಠಪಾಠ: ದೇವರು ಕೊಡುವ ಸರ್ವಾಯುಧಗಳ ವಾಕ್ಯಗಳು

ಕರಕುಶಲ


ನಿಮ್ಮ ತರಗತಿಯ ಚಟುವಟಿಕೆಗಳಿಗೆ 3 ಕರಕುಶಲ ಸಹಾಯಕಗಳು






ಆಕ್ಷನ್ ಸಾಂಗ್ಸ್

10 ಪಾಠಗಳಲ್ಲಿ ಪ್ರತಿಯೊಂದಕ್ಕೂ ಮೂಲ ಹಾಡು ಇದೆ




**DRAMAS**

A super silly drama for each of the 10 lessons (wordless/ without language)




ಸಾಮಾಜಿಕ ಜಾಲತಾಣ

ನಿಮ್ಮ ಮಕ್ಕಳ ಸೇವೆಗಾಗಿ ಹೆಚ್ಚಿನ ಆಲೋಚನೆಗಳು ಹಾಗೂ ಪ್ರೇರಣೆಗಳಿಗಾಗಿ ನಮ್ಮ ಸಾಮಾಜಿಕ ಜಾಲತಾಣವನ್ನು ಸಂಪರ್ಕಿಸಿರಿ.


YouTube facebook. WhatsApp

ವೆಬ್ ಸೈಟ್

ಈ ಎಲ್ಲಾ ವಿಷಯಗಳನ್ನು ನಮ್ಮ ವೆಬ್ ಸೈಟ್ ನಲ್ಲಿ ನೀವು ಡೌನ್ ಲೋಡ್ ಮಾಡಿಕೊಳ್ಳಬಹುದು, ಶಿಕ್ಷಕರು ಮತ್ತು ನಾಯಕರಿಗೆ ಕೊಡಲಾಗಿರುವ ತರಬೇತಿ ವಿಷಯಗಳನ್ನೂ ಡೌನ್ ಲೋಡ್ ಮಾಡಿಕೊಳ್ಳಬಹುದು.




ಇವುಗಳನ್ನು ಪ್ರಿಂಟ್ ತೆಗೆದುಕೊಳ್ಳುವದು ಹೇಗೆ:



# ಪಾಠ 1

## ಶೀರ್ಷಿಕೆ – ಪಾಠ 1


ಕಣ್ಣಿಗೆ ಕಾಣದ ಲೋಕ

## ಸತ್ಯವೇದ ಕಥೆ – ಪಾಠ 1

ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣನಾದನು

ಅಪೊ 1:1-11

## ಪದಕಗಳು – ಪಾಠ 1



ಪ್ರತಿಯೊಂದು ಮಕ್ಕಳು 2 ಪದಕಳನ್ನು ಪಡೆಯಬಹುದು, ಒಂದು ಹಾಜರಾತಿಗೆ ಮತ್ತು ಇನ್ನೊಂದು ಓದುವದು ಹಾಗೂ ಕಂಠಪಾಠ ಮಾಡುವದಕ್ಕೆ.

ಇಂದಿನ ಹಾಜರಾತಿಯ ಪದಕ:



ಮುಂದಿನ ವಾರದ ಪ್ರಾರಂಭದಲ್ಲಿ, ಮಕ್ಕಳು ಓದುವದಕ್ಕೆ, ಕಂಠಪಾಠ ಮಾಡುವದಕ್ಕೆ ಮತ್ತು ಹೊಮ್ ವರ್ಕ್ ಅಸೈನ್ಮೆಂಟ್ ಪೂರ್ತಿಗೊಳಿಸುವದಕ್ಕೆ ಬಹುಮಾನ ಗೆಲ್ಲುವದನ್ನು ಪ್ರಾರಂಭಿಸಬಹುದು.

## ನಾಟಕ – ಪಾಠ 1

ಸಿಪಾಯಿ ಗಿಗಲ್ ಮತ್ತು ಸಿಪಾಯಿ ಡ್ಯೂಟಿ ಮಿಲಿಟರಿಗೆ ಸೇರಿಕೊಂಡರು. ವೈರಿಗಳು ಯಾರೂ ಎದುರಾಗುವದಿಲ್ಲ, ಆದ್ದರಿಂದ ಕೂಲ್ ಗೇರ್ ಧರಿಸಿಕೊಂಡು, ಬಲಗೊಳ್ಳಬೇಕು ಹಾಗೂ ಸಿನಿಮಾದಲ್ಲಿ ಬರುವವರ ಹಾಗೆ ಕಾಣಿಸಿಕೊಳ್ಳಬೇಕು ಎಂಬದು ಸಿಪಾಯಿ ಗಿಗಲ್ ಬಯಕೆಯಾಗಿತ್ತು. ಮಿಲಿಟರಿ ಅಧಿಕಾರಿ ಅಪ್ರೈಟ್ ವೈರಿಗಳೊಂದಿಗೆ

ಹೋರಾಡುವದರ ಬಗ್ಗೆ ಭಾಷಣ ಮಾಡಿದ ನಂತರ ಪ್ರಾಥಮಿಕ ಕಾರ್ಯಗಳನ್ನು ನಡೆಸಿದರು.

## ಕಂಠಪಾಠ ವಚನ – ಪಾಠ 1

"ಕಡೇ ಮಾತೇನಂದರೆ, ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ. ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸಿರುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ."

ಎಫೆಸ 6:10-11

## ಮುಖ್ಯ ಪಾಠ – ಪಾಠ 1

**ಅಪೊ 1:1-11**

ನಮ್ಮ ಸುತ್ತಲೂ ಕಣ್ಣಿಗೆ ಕಾಣದಂಥ ಒಂದು ಲೋಕವಿದೆ, ಅದನ್ನು ನೋಡಲು ನಮ್ಮಿಂದ ಆಗುವದಿಲ್ಲವಾದರೂ ಅದು ಸತ್ಯವಾಗಿದೆ. ಗಾಳಿಯನ್ನು ನೋಡಲು ನಮ್ಮಿಂದ ಆಗುವದಿಲ್ಲ ಆದರೆ ಗಾಳಿ ಬೀಸುವಾಗ ಮರದ ಎಲೆಗಳು ಅಲ್ಲಾಡುವದನ್ನು ನಾವು ನೋಡುತ್ತೇವೆ, ಅದರಂತೆಯೇ ಆತ್ಮೀಕ ಲೋಕವು ಇರುತ್ತದೆ. ಹಳೆಯ ಒಡಂಬಡಿಕೆಯ ಪ್ರವಾದಿಗಳಲ್ಲಿ ಒಬ್ಬನಾದ ಎಲೀಷನು, ಕಣ್ಣಿಗೆ ಕಾಣದವುಗಳನ್ನು ನೋಡುವದರ ಬಗ್ಗೆ ನಮಗೆ ಉತ್ತಮ ಉದಾಹರಣೆಯನ್ನು ತೋರಿಸಿದ್ದಾನೆ. ಅರಾಮ್ಯರು ಮತ್ತು ಇಸ್ರಾಯೇಲ್ಯರ ನಡುವೆ ದೊಡ್ಡ ಯುದ್ಧ ಪ್ರಾರಂಭವಾಗುವದಕ್ಕಿತ್ತು. (2 ಅರಸು 6:8-23) ಒಂದುದಿನ ರಾತ್ರಿ, ವೈರಿ ಪಡೆಯ ಸಿಪಾಯಿಗಳು ಪಟ್ಟಣಕ್ಕೆ ಮುತ್ತಿಗೆ ಹಾಕಿದರು ಮತ್ತು ಎಲೀಷನ ಸೇವಕನು ಅವರನ್ನು ನೋಡಿ ಬಹಳವಾಗಿ ಹೆದರಿಕೊಂಡನು. ಆದರೆ ಪ್ರವಾದಿಯು ತನ್ನ ಸೇವಕನಿಗೆ ಹೆದರಬೇಡ ಯಾಕಂದರೆ ವೈರಿಗಳ ಜೊತೆಯಲ್ಲಿರುವವರಿಗಿಂತ ನಮ್ಮ ಜೊತೆಯಲ್ಲಿ ಹೆಚ್ಚಿನವರಿದ್ದಾರೆ ಎಂದು ಹೇಳಿದನು. ನಂತರ ಎಲೀಷನು ತನ್ನ ಸೇವಕನ ಕಣ್ಣುಗಳು ತೆರೆಯಲ್ಪಡಲಿ ಎಂದು ಪ್ರಾರ್ಥನೆ ಮಾಡಿದನು, ಆಗ ಅವನಿಗೆ ಬೆಟ್ಟದ ಸುತ್ತಲೂ ಕುದುರೆಗಳು ಹಾಗೂ ಬೆಂಕಿಯ ರಥಗಳು ನಿಂತಿರುವದು ಕಾಣಿಸಿದವು! ದೇವರು ತನ್ನ ಪ್ರವಾದಿಯನ್ನು ಕಾಪಾಡಲು ದೊಡ್ಡ ಪ್ರಮಾಣದಲ್ಲಿ ಕಣ್ಣಿಗೆ ಕಾಣದ ಸೈನ್ಯವನ್ನು ಇರಿಸಿದ್ದನು.

ನಮ್ಮ ಸುತ್ತಲು ಆತ್ಮೀಕ ಯುದ್ಧ ನಡೆಯುತ್ತಿದೆ, ಆದರೆ ಅದನ್ನು ನೋಡಲು ನಮ್ಮಿಂದ ಆಗುತ್ತಿಲ್ಲ. ಸೈತಾನನು ಜೀವಿಸುತ್ತಿದ್ದಾನೆ ಮತ್ತು ನಾವು ಆತ್ಮೀಕ ರಾಜ್ಯದ ವಾಸ್ತವವನ್ನು ಕಡೆಗಣಿಸುವಂತೆ ಮಾಡಲು ಸರ್ವಪ್ರಯತ್ನಗಳನ್ನು ನಡೆಸುತ್ತಿದ್ದಾನೆ ಎಂಬದನ್ನು ಸತ್ಯವೇದವು ಸ್ಪಷ್ಟಪಡಿಸುತ್ತದೆ. ಅಪೊಸ್ತಲರ ಕೃತ್ಯಗಳ ಇಂದಿನ ನಮ್ಮ ಸತ್ಯವೇದದ ಕಥೆಯಲ್ಲಿ, ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣವಾದನು. ದಯವಿಟ್ಟು ನನ್ನ ಮಾತುಗಳನ್ನು ನಂಬಿರಿ ಪರಲೋಕ ಮತ್ತು ಭೂಲೋಕ ಇದೆ. ಸತ್ಯವಾದ ಈ ಚಾರಿತ್ರಿಕ ಘಟನೆಯಲ್ಲಿ, ಯೇಸು ಕ್ರಿಸ್ತನು ಆರೋಹಣವಾದ ನಂತರ, ಇಬ್ಬರು ದೇವದೂತರು ಶಿಷ್ಯರಿಗೆ ಕಾಣಿಸಿಕೊಂಡರು! ದೇವದೂತರು ನಮಗೆ ಸಹಾಯ ಮಾಡುವದು ಅಥವಾ ಸೈತಾನನು ನಮ್ಮ ಮೇಲೆ ಆಕ್ರಮಣ ಮಾಡುವದನ್ನು ಊಹಿಸಿಕೊಳ್ಳಲು ನಮಗೆ ಕಷ್ಟವಾಗುತ್ತದೆ, ಆದರೆ ಈ ಕಾರ್ಯಗಳು ನಮ್ಮ ಕಣ್ಣಿಗೆ ಕಾಣುವ ಕಾರ್ಯಗಳಿಗಿಂತ ಸತ್ಯವಾಗಿವೆ. ದೇವರು ಕೊಡುವ ಸರ್ವಾಯುಧಗಳ ಅಧ್ಯಯನಕ್ಕೆ ಹಾರೋಣ ಮತ್ತು ಕಣ್ಣಿಗೆ ಕಾಣದಿರುವ ಈ ಲೋಕದ ಬಗ್ಗೆ ಕಲಿತುಕೊಳ್ಳೋಣ. ನಮಗ ಇಷ್ಟವಾಗಲಿ ಇಷ್ಟವಾಗದಿರಲಿ ನಾವು ಯುದ್ಧದಲ್ಲಿದ್ದೇವೆ. ಆದ್ದರಂದ ವೈರಿಗೆ ವಿರುದ್ಧವಾಗಿ ಹೋರಾಡುವಾಗ ದೇವರು ಕೊಡುವ ಸರ್ವಾಯುಧಗಳನ್ನು ಧರಿಸಿಕೊಳ್ಳೋಣ!

## ಬೂಟ್ ಕ್ಯಾಂಪ್ – ಪಾಠ 1

**ಅಸೈನ್ಮೆಂಟ್ – ಪಾಠ 1**

ದೇವದೂತನು ನಿಮಗೆ ಯಾವುದೋ ರೀತಿಯಲ್ಲಿ ಸಹಾಯ ಮಾಡುತ್ತಿರುವ ನಿಮ್ಮ ಚಿತ್ರವನ್ನು ಬಿಡಿಸಿರಿ. ನಿಮಗೆ ಎದುರಾಗುವ ಯಾವುದಾದರೂ ಅಪಾಯಕಾರಿ ಸ್ಥಳ ಮತ್ತು ಗಾಬರಿಪಡಿಸುವ ಪರಿಸ್ಥಿತಿಯ ಬಗ್ಗೆ ಯೋಚಿಸಿರಿ.

**ಹೋಮ್ ವರ್ಕ್ (ದೊಡ್ಡ ಮಕ್ಕಳಿಗೆ) - ಪಾಠ 1**

ಅಪೊ 1-4 ಅಧ್ಯಾಯಗಳು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 1

"ನಾನು ಕಣ್ಣಿಗೆ ಕಾಣದಿರುವ ಲೋಕವನ್ನು ನಂಬುವ ತೀರ್ಮಾನ ತೆಗೆದುಕೊಳ್ಳುತ್ತೇನೆ ಮತ್ತು ದೇವರು ಕೊಡುವ ಸರ್ವಾಯುಧಗಳನ್ನು ಸಂಪೂರ್ಣವಾಗಿ ಧರಿಸಿಕೊಳ್ಳುತ್ತೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 1

1. ಕಣ್ಣಿಗೆ ಕಾಣದ ಒಳ್ಳೆದರ ಮತ್ತು ಕೆಟ್ಟದರ ಲೋಕವಿದೆ ಎಂಬದಕ್ಕೆ ನೀವು ನೋಡಿರುವ ಪುರಾವೆಗಳು ಯಾವುವು?
   ಅಪಘಾತ ಅಥವಾ ಕಾಯಿಲೆಯ ನಿಮಿತ್ತ ಘೋರವಾಗಿ ಗಾಯಗೊಳ್ಳಬೇಕಾಗಿದ್ದರೂ ಶಾಶ್ವತವಾದ ಯಾವುದೇ ತೊಂದರೆ ಒಳಗಾಗದೆ ಪಾರಾದವರ ಕಥೆಗಳನ್ನು ಹೇಳುವಂತೆ ನಿಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡಿಸಿರಿ. ಹೊರಗಿನ ಸಹಾಯವಿಲ್ಲದೆ ನಾವು ಸ್ವಂತವಾಗಿ ಆಯ್ಕೆಗಳನ್ನು ಮಾಡುವಂತೆ ಕನಸುಗಳು ಮತ್ತು "ಭಾವನೆಗಳು" ನಮ್ಮನ್ನು ಮುನ್ನಡೆಸುತ್ತವೆ. ಸಾಂದರ್ಭಿಕವಾಗಿ ಇದರಿಂದ ಪ್ರಯೋಜನವಾಗದಿರುವಾಗ ಭಯ ನಮ್ಮನ್ನು ಆವರಿಸಿಕೊಳ್ಳುತ್ತದೆ ಮತ್ತು ನಮ್ಮನ್ನು ಒಂಟಿಯಾಗಿ ಬಿಡುವಂತೆ ನಾವು ಸೈತಾನನಿಗೆ ಹೇಳುತ್ತೇವೆ ಹಾಗೂ ಪುನಃ ಸಮಾಧಾನದಲ್ಲಿರುವ ಹಾಗೆ ನಮಗೆ ಅನ್ನಿಸುತ್ತದೆ.

2. ಇತರರು ತಪ್ಪುಗಳನ್ನು ಮಾಡಿರುವದು ಮತ್ತು ದೇವರ ಸರ್ವಾಯುಧಗಳಿಂದ ರಕ್ಷಣೆ ದೊರೆಯದಿರುವದನ್ನು ನೀವು ನೋಡಿದ್ದೀರೋ?
   ಕೆಲವು ಕಥೆಗಳನ್ನು ಹಂಚಿಕೊಳ್ಳಿರಿ.
   ವಿದ್ಯಾಥಿಗಳು ತಾವು ಕಂಡಿರುವ ವಿಷಯಗಳ ಅನುಭವವನ್ನು ಹಂಚಿಕೊಳ್ಳುವದು ಮತ್ತು ಸರ್ವಾಯುಧಗಳಿಲ್ಲದೆ ಹೋದರೆ ಸುಲಭವಾಗಿ ತಪ್ಪುಗಳನ್ನು ಅಥವಾ ಪಾಪಗಳನ್ನು ಮಾಡಬಹುದು ಎಂಬದನ್ನು ಮನವರಿಕೆ ಮಾಡಿಕೊಳ್ಳುವದು ಇದರ ಉದ್ದೇಶವಾಗಿದೆ. ನಿಜವಾದ ಹೆಸರುಗಳನ್ನು ಉಪಯೋಗಿಸಬೇಡಿರಿ! ತಮಗೆ ಪರಿಚಯವಿರುವವರಲ್ಲಿ ಯಾರಾದರೂ ಯೇಸು ಕ್ರಿಸ್ತನನ್ನು ಪ್ರೀತಿಸುವವರಾಗಿ ಮೊದಲು ಸಭೆಗೆ ಹೋಗುವವರಾಗಿದ್ದು ಈಗ ಬಿಟ್ಟಿರುವದಾದರೆ ಅವರ ಬಗ್ಗೆ ಮಾತನಾಡಲು ಮಕ್ಕಳನ್ನು ಪೋತ್ಸಾಹಪಡಿಸಿರಿ.

3. ನಮ್ಮ ಸುತ್ತಲು ನಡೆಯುತ್ತಿರುವ ಆತ್ಮೀಕ ಹೋರಾಟವು ಹೇಗಿದೆ ಎಂದು ನಿಮಗೆ ಅನ್ನಿಸತ್ತದೆ?
   ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ದೇವದೂತರು ಮತ್ತು ದೂತರ ಉದಾಹರಣೆಗಳ ಬಗ್ಗೆ ಮಾತನಾಡಿರಿ.
   (ಉದಾಹರಣೆಗೆ: ದಾನಿಯೇಲ 7, 9-21, 10:5-14)

4. ಯೇಸು ಕ್ರಿಸ್ತನು ಹೋಗುತ್ತಿರುವ ಹಾಗೆಯೇ ಹಿಂದಿರುಗಿ ಬರುವನು ಎಂಬ ವಾಗ್ದಾನವನ್ನು ಕೊಟ್ಟವರು ಯಾರು?
   (ಬಿಳೀ ವಸ್ತ್ರಗಳನ್ನು ಧರಿಸಿಕೊಂಡಿದ್ದ ಇಬ್ಬರು ಪುರುಷರು, ಬಹುಶಃ ದೇವದೂತರು)

5. ಅಪೊ 1:8 ವಾಕ್ಯದ ಬಿಟ್ಟ ಸ್ಥಳವನ್ನು ತುಂಬಿಸಿರಿ:

   ______________________________________________

   ನನಗೆ ಸಾಕ್ಷಿಗಳಾಗಿರಬೇಕು. ಇದು ಇಂದು ನಮಗೆ ಯಾವ ಅರ್ಥವನ್ನು ಕೊಡುತ್ತದೆ? (ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ. ನಾವು ಸಾಕ್ಷಿಗಳಾಗಿರಬೇಕು ಅಂದರೆ ಎಲ್ಲಿಗೇ ಹೋದರೂ ಜನರಗೆ ಯೇಸು ಕ್ರಿಸ್ತನ ಬಗ್ಗೆ ಹೇಳಬೇಕು.)

## ಆಟ: ಕ್ರಾಂತಿ – ಪಾಠ – 1

ವಸ್ತುಗಳು

ಪೇಪರ್ ಹಾಳೆಗಳು, ಪೆನ್, ಬಲೂನ್ಸ್ ಮತ್ತು ಸಂಗೀತ (ಆಯ್ಕೆ)

ಸಿದ್ಧತೆ

ಮುಂದಿನ 9 ಪಾಠಗಳ ಶೀರ್ಷಿಕೆಗಳನ್ನು ಪೇಪರ್ ಹಾಳೆಗಳ ಮೇಲೆ ಬರೆಯಿರಿ. ಬಲೂನ್ ಗೆ ಗಾಳಿ ಊದಿರಿ ಮತ್ತು ಪಾಠದ ಹೆಸರಿರುವ ಹಾಳೆಯನ್ನು ಬಲೂನ್ ಮುಚ್ಚುವ ಮೊದಲು ಅದರ ಒಳಗೆ ಇಡಿರಿ.

ಆಟ ಆಡುವದು

1. ಮಕ್ಕಳು ವೃತ್ತವನ್ನು ಮಾಡಬೇಕು ಮತ್ತು 1 ಬಲೂನ್ ವೃತ್ತದ ಸುತ್ತಲೂ ಎಲ್ಲರಿಗೂ ಪಾಸ್ ಮಾಡಬೇಕು. (ಮೊದಲನೆಯ ವಿದ್ಯಾರ್ಥಿ ಅದನ್ನು ತಲೆಯಿಂದ ಪಾಸ್ ಮಾಡಬೇಕು, ಎರಡನೆಯವನು ಕಾಲುಗಳ ನಡುವೆ ಪಾಸ್ ಮಾಡಬೇಕು, ಇತ್ಯಾದಿ). ಶಿಕ್ಷಕಿ ಕೂಗುವ ಅಥವಾ ಗಟ್ಟಿಯಾಗಿ ವಿಶಲ್ ಊದುವ ತನಕ ಹೀಗೆಯೇ ಮಾಡಬೇಕು. (ಆಯ್ಕೆ: ಅವರು ಬಲೂನ್ ಪಾಸ್ ಮಾಡುವಾಗ ಸಂತೋಷದ ಹಾಡು ಹಾಕಿರಿ).
2. ಟೀಚರ್ ಕೂಗುವಾಗ, ಬಲೂನ್ ಯಾವ ಮಗುವಿನ ಕೈಯಲ್ಲಿ ಇರುತ್ತದೆಯೋ ಆ ಮಗು ಮಧ್ಯಕ್ಕೆ ಬರಬೇಕು ಮತ್ತು ಒಂದೇ ಕಾಲಿನಲ್ಲಿ ಬಲೂನ್ ತುಳಿದು ಒಡೆದು ಹಾಕಬೇಕು. ಹಾಗೂ ವಿದ್ಯಾರ್ಥಿಯು ಪೇಪರ್ ಹೊರಗೆ ತೆಗೆಯಬೇಕು ಮತ್ತು ಎಲ್ಲರಿಗೂ ಕೇಳಿಸುವಂತೆ ಓದಬೇಕು. ಉಳಿದಿರು ಬಲೂನ್ ಗಳು ಮುಗಿಯುವ ತನಕ ಹೀಗೆಯೇ ಆಟವನ್ನು ಮುಂದುವರೆಸಬೇಕು.


ಆಯ್ಕೆಗಳು

1. ಒಂದುವೇಳೆ ನಿಮಗೆ ಹೆಚ್ಚು ವಿದ್ಯಾರ್ಥಿಗಳು ಇರುವದಾದರೆ, ನೀವು ಹಲವು ವೃತ್ತಗಳನ್ನು ರೂಪಿಸಬಹುದು ಅಥವಾ ಒಂದು ಸಮಯಕ್ಕೆ ಹೆಚ್ಚು ಬಲೂನ್ ಗಳನ್ನು ಪಾಸ್ ಮಾಡಬಹುದು.
2. ಶೀರ್ಷಿಕೆಗಳಿರುವ ಹಾಳೆಗಳೊಂದಿಗೆ, ಬಲೂನ್ ಒಳಗೆ ಕ್ಯಾಂಡಿಗಳು ಅಥವಾ ವಿವಿಧ ಸೂಚನೆಗಳನ್ನೂ ಹಾಕಬಹುದು (ಸಭೆಯ ಸುತ್ತಲು ಒಮ್ಮೆ ಓಡುವದು, ಇತ್ಯಾದಿ)

## ಒಗಟಿನ ಉತ್ತರಗಳು – ಪಾಠ 1

| | | | | | | | | | | |
|---|---|---|---|---|---|---|---|---|---|---|
| ತಂ | ಧಿ | ಸು | ಬೋ | ಗ | ತಂ | ಪ | ರ | ಲೋ | ಕ | ಜ್ಯ |
| ಯೆ | ಜ್ಯ | ತ್ರಾ | ಧ | ನ | ಕ್ಷಾ | ಕಾ | ಎ | ಳು | ಸು | ಮೇ |
| ನ | ರೂ | ಬೋ | ನೆ | ಸ್ತ | ಧಿ | ರಾ | ಅ | ತ್ರಾ | ಗ | ಘ |
| ಅ | ತ್ರಾ | ಸ | ಜ್ಯ | ಅ | ಜ್ಯ | ಯೇ | ಸು | ದೀ | ತ್ಯ | ಧಿ |
| ಪೊ | ತಂ | ಸು | ಲೇ | ರಾ | ಕ್ಷಾ | ಗ | ಳು | ಕ್ಷಾ | ತ್ರಾ | ನು |
| ಸ್ತ | ಧಿ | ಸ | ರ | ಮ್ | ನ | ಜ್ಯ | ಧಿ | ಸ್ನಾ | ಅ | ತಂ |
| ಲ | ನ | ವ | ಜೀ | ಅ | ಸು | ತ್ರಾ | ದಿ | ನ | ಗ | ಳು |
| ರು | ದೇ | ಸಾ | ಳು | ವ | ಕ್ಷಾ | ದ | ರಾ | ಸ್ತ | ಜ್ಯ | ರು |
| ಧಿ | ಗ | ಕ್ತಿ | ಜ್ಯ | ತ್ರಾ | ತಂ | ಅ | ಸು | ಕ್ಷಾ | ನೀ | ನ |





# ಪಾಠ 2

### ಶೀರ್ಷಿಕೆ – ಪಾಠ 2

ಕತ್ತಲೆಯ ವಿರುದ್ಧ ಹೋರಾಡುವದು


### ಸತ್ಯವೇದ ಕಥೆ – ಪಾಠ 2

ಸೆರೆಮನೆಯಲ್ಲಿ ಪೌಲ ಮತ್ತು ಸೀಲನು

ಅಪೊ 16:16-31

### ಪದಕಗಳು – ಪಾಠ 2

ಇಂದಿನ ಹಾಜರಾತಿಯ ಪದಕ:




ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಂದು ಮಗುವಿಗೆ ಈ ರಿಬ್ಬನ್ ಕೊಡಲಾಗುವದು:



ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿದ ಪ್ರತಿಯೊಂದು ಮಗುವಿಗೆ ಸ್ಟಾರ್ ಕೊಡಲಾಗುವದು.

ಕಳೆದ ವಾರದ ಕಂಠಪಾಠ ವಾಕ್ಯವನ್ನು ಹೇಳುವ ಪ್ರತಿಯೊಂದು ಮಗುವಿಗೆ ಸ್ಟಾರ್ ಕೊಡಲಾಗುವದು.

### ನಾಟಕ – ಪಾಠ 2

ಸಿಪಾಯಿ ಗಿಗಲ್ ಮತ್ತು ಸಿಪಾಯಿ ಡ್ಯೂಟಿ ಇಬ್ಬರೂ ವಾದ ಮಾಡುತ್ತಿದ್ದರು.

### ಕಂಠಪಾಠ ವಚನ – ಪಾಠ 2

ನಮ್ಮ ಹೋರಾಟ ಕೇವಲ ನರಮಾನವರೊಂದಿಗಲ್ಲ, ದಿಗಂತದಲ್ಲಿರುವ ಅಧಿಕಾರಿಗಳ ಹಾಗೂ ಆಧಿಪತ್ಯಗಳ ವಿರುದ್ಧ; ಪ್ರಸ್ತುತ ಅಂಧಕಾರಲೋಕಾಧಿಪತಿಗಳ ಹಾಗೂ ಅಶರೀರ ದುಷ್ಟಗಣಗಳ ವಿರುದ್ಧ.

ಎಫೆಸಿಯರಿಗೆ 6:12

## ಮುಖ್ಯ ಪಾಠ – ಪಾಠ 2

**ಅಪೊ 16:16-31**

ನಾವು ಮಾನವರಿಗೆ ವಿರುದ್ಧವಾಗಿ ಹೋರಾಡುವದಿಲ್ಲ ಬದಲಾಗಿ ದುರಾತ್ಮನು ಹಾಗೂ ಅವನ ಕತ್ತಲೆಯ ರಾಜತ್ವಗಳ ವಿರುದ್ಧ ಹೋರಾಡುವವರಾಗಿದ್ದೇವೆ. ಸೈತಾನನಿಗೆ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಉಂಟು ಮಾಡುವದೆಂದರೆ ಬಹಳ ಇಷ್ಟ ಮತ್ತು ಜನರು ಒಬ್ಬರನ್ನೊಬ್ಬರು ನೋಯಿಸುವವರಾಗುವಂತೆ ಅವನು ಮಾಡುತ್ತಾನೆ, ನಮ್ಮ ಹೋರಾಟವು ಯಾವಾಗಲೂ ಅವನಿಗೆ ವಿರುದ್ಧವಾದದ್ದು ಎಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಹಾಗೆಯೇ ನಾವು ಒಬ್ಬರಿಗೆ ವಿರುದ್ಧವಾಗಿ ಒಬ್ಬರು ಹೋರಾಡಬಾರದು ಎಂಬದನ್ನೂ ಮರೆಯಬಾರದು ಯಾಕಂದರೆ ಹಾಗೆ ಮಾಡುವದರಿಂದ ಸುಲಭವಾಗಿ ವೈರಿಯ ಬಲೆಯೊಳಗೆ ನಾವು ಸಿಕ್ಕಿಕೊಳ್ಳುತ್ತೇವೆ. ನಾವು ತಪ್ಪುಗಳನ್ನು ಮಾಡುತ್ತೇವಾದರೂ, ದೇವರು ಎಲ್ಲರನ್ನು ಪ್ರೀತಿಸುತ್ತಾನೆ. ನಾವು ನಮ್ಮ ಸ್ವಂತ ಜೀವಿತಗಳಲ್ಲಿ ತಪ್ಪುಗಳನ್ನು ಮಾಡುವಾಗಲೂ ದೇವರು ನಮಗೆ ಕರುಣೆ ತೋರುವದರಿಂದ ನಾವು ಆತನಿಗೆ ಕೃತಜ್ಞತೆಯುಳ್ಳವರಾಗಿರಬೇಕು ಮತ್ತು ಯಾವಾಗಲೂ ಇತರರಿಗೆ ಕರುಣೆಯನ್ನು ತೋರಿಸಬೇಕು. ಕೆಲವೊಮ್ಮೆ ವೈರಿಯು ನಮ್ಮ ಮಾತುಗಳು ಅಥವಾ ಕ್ರಿಯೆಗಳನ್ನು ತಿರುಚುತ್ತಾನೆ, ಆಗ ನಾವು ಇತರರ ಮೇಲೆ ಕೋಪಿಸಿಕೊಳ್ಳುತ್ತೇವೆ. ಆದರೂ, ದೇವರು ಎಲ್ಲರನ್ನೂ ಪ್ರೀತಿಸುವದರಿಂದ ನಾವೂ ಎಲ್ಲರನ್ನೂ ಪ್ರೀತಿಸಬೇಕು.

ಅಪೊಸ್ತಲರ ಕೃತ್ಯಗಳ ಇಂದಿನ ಸತ್ಯವೇದದ ಕಥೆಯಲ್ಲಿ, ಪೌಲ ಮತ್ತು ಸೀಲನನ್ನು ಸೆರೆಮನೆಗೆ ಹಾಕಲಾಗಿದೆ. ಅವರು ಯಾವುದೇ ತಪ್ಪುಗಳನ್ನು ಮಾಡದಿದ್ದರೂ, ಸೆರೆಮನೆಯ ಯಜಮಾನನು ಅವರೊಂದಿಗೆ ಕ್ರೂರವಾಗಿ  ನಡೆದುಕೊಂಡಿದ್ದನು. ದೇವರು ಅವರಿಗೆ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸಿದಾಗ, ಅವರು ಸೆರೆಮನೆಯ  ಯಜಮಾನನ ಮೇಲೆ ಸೇಡು ತೀರಿಸಕೊಳ್ಳಲಿಲ್ಲ ಬದಲಾಗಿ ಕರಣೆ ತೋರಿಸಿದರು ಮತ್ತು ಅವನನ್ನು ಹಾಗೂ ಅವನ ಇಡೀ ಕುಟುಂಬದವರನ್ನು ಕರ್ತನ ಕಡೆಗೆ ನಡೆಸಿದರು! ಪೌಲ ಮತ್ತು ಸೀಲನು ತಮ್ಮ ಕಾಲುಗಳಿಗೆ ಕೋಳವನ್ನು ಹಾಕಿಸಿದ ಸೆರೆಮನೆಯ ಯಜಮಾನನಿಗೆ ಕೇಡು ಬಯಸಿರಬಹುದಾಗಿತ್ತು, ಆದರೆ ಅವರು ತಮ್ಮ ಹೋರಾಟವು ಜನರಿಗೆ ವಿರುದ್ಧವಲ್ಲ ಬದಲಾಗಿ ದುರಾತ್ಮನಿಗೆ ವಿರುದ್ಧ ಎಂದು ಮನವರಿಕೆ ಮಾಡಿಕೊಂಡರು. ಆತ್ಮೀಕ ಅಂಧಕಾರಕದ ವಿರುದ್ಧ ಹೋರಾಡಲು ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳುವಾಗ, ನಮ್ಮ ಹೋರಾಟ ಜೊತೆಯಲ್ಲಿರುವ ಮಾನವರ ವಿರುದ್ಧವಲ್ಲ ಎಂಬದನ್ನು ನಾವು ನೆನಪು ಮಾಡಿಕೊಳ್ಳಬೇಕು!

## ಬೂಟ್ ಕ್ಯಾಂಪ್ – ಪಾಠ 2

**ಅಸೈನ್ಮೆಂಟ್ -  ಪಾಠ 2**

ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರ ಕ್ರಿಯೆಗಳು ಮತ್ತು ಮಾತುಗಳ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ ಹಾಗೂ ಆತ್ಮೀಕ ಆಕ್ರಮಣಗಳನ್ನು ಅರಿತುಕೊಳ್ಳಿರಿ. ಒಬ್ಬರು ಇನ್ನೊಬ್ಬರ ಮೇಲೆ ಹಠ ಸಾಧಿಸುತ್ತಿರುವದನ್ನು ನೀವು ನೋಡುವಾಗ ಅಥವಾ ಅದರ ಬಗ್ಗೆ ಕೇಳಿದಾಗ, ಸೈತಾನನು ಎಷ್ಟು ಖುಷಿಪಡುತ್ತಾನೆ ಮತ್ತು ದೇವರು ಎಷ್ಟು ದುಃಖಪಡುತ್ತಾನೆ ಎಂಬದನ್ನು ಅರಿತುಕೊಳ್ಳಿರಿ. ಹೆಸರುಗಳನ್ನು ತೆಗೆದುಕೊಳ್ಳದೆ, ನಡೆದ ಸಂಗತಿಯನ್ನು ನಿಮ್ಮ ಶಿಕ್ಷಕಿಗೆ ಹೇಳಲು ಸಿದ್ಧತೆ ಮಾಡಿಕೊಳ್ಳಿರಿ.



**ಹೋಮ್ ವರ್ಕ್ (ಹಿರಿಯ ವಿದ್ಯಾರ್ಥಿಗಳು) – ಪಾಠ 2**

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 2

“ನಾನು ವೈರಿಗೆ ವಿರುದ್ಧವಾಗಿ ಹೋರಾಡುತ್ತೇನೆಯೇ ಹೊರತು ನನ್ನ ಸುತ್ತಮುತ್ತಲಿನಲ್ಲಿರುವ ಜನರ ವಿರುದ್ಧವಲ್ಲ ಎಂಬ ಆಯ್ಕೆ ಮಾಡಿಕೊಂಡಿದ್ದೇನೆ.”

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 2

**1.** ಈ ಮಾತುಗಳ ಅರ್ಥ ಏನು? “ರಾಜತ್ವಗಳು, ಅಧಿಕಾರಗಳು, ಅಂಧಕಾರದ ಲೋಕಾಧಿಪತಿಗಳು ಮತ್ತು ಆಕಾಶ ಮಂಡಲದಲ್ಲಿರುವ ದುರಾತ್ಮ ಸೇನೆಗಳು.” ಎಫೆಸ 6:12
ಇಲ್ಲಿನ ಆಲೋಚನೆ ಏನೆಂದರೆ ನಾವು ಯುದ್ಧದಲ್ಲಿದ್ದೇವೆ ಮತ್ತು ದುರಾತ್ಮನು ಹಾಗೂ ಅವನ ಸೈನ್ಯದವರು ನಿಜವಾಗಿ ಇದ್ದಾರೆ, ಆದರೆ ನಮ್ಮ ಕಣ್ಣುಗಳಿಗೆ ಕಾಣಿಸುವದಿಲ್ಲ ಎಂಬದನ್ನು ಅವರು ಅರಿತುಕೊಳ್ಳುವದಾಗಿದೆ. 1 ಪೇತ್ರ 5:8; ಪ್ರಕಟನೆ 12:9

**2.** ನಾವು ಅಂಧಕಾರದ ಲೋಕಾಧಿಪತಿಗಳಿಗೆ ವಿರುದ್ಧವಾಗಿ ಹೋರಾಡದೆ ಮನುಷ್ಯರಿಗೆ ವಿರುದ್ಧವಾಗಿ ಹೋರಾಡುವದರಿಂದ ಆಗುವ ಪರಿಣಾಮಗಳ ಕೆಲವು ಉದಾಹರಣೆಗಳು ಯಾವುವು?
ಉದಾಹರಣೆಗೆ: ನೀವು ದೇವರ ವಾಕ್ಯವನ್ನು ಓದುತ್ತಿರುವಾಗ ಅಥವಾ ಬೋಧಿಸುತ್ತಿರುವಾಗ ಒಬ್ಬನು ನಿಮ್ಮನ್ನು ಹಾಸ್ಯ ಮಾಡುತ್ತಿರಬಹುದು. ನಾವು ಸಾತ್ವಿಕತೆಯ ಸ್ವಭಾವವುಳ್ಳವರಾಗಿರಬಹುದು ಆದರೆ ಜನರು ನಮ್ಮನ್ನು ದುರ್ಬಲರೆಂಬದಾಗಿ ಅಂದುಕೊಳ್ಳುತ್ತಾರೆ. ಉದಾಹರಣೆಗೆ ತಿಳಿಸಲು ಮಕ್ಕಳಿಗೆ ಅವಕಾಶ ಕೊಡಿರಿ.

**3.** ನಾವು ದೇವರು ದಯಪಾಲಿಸಿರುವ ಸರ್ವಾಯುಧಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ದೇವರು ಯಾಕೆ ಬಯಸುತ್ತಾನೆ?
ಆತನು ಯಾವಾಗಲೂ ನಮ್ಮ ಜೊತೆಯಲ್ಲಿದ್ದಾನೆ ಮತ್ತು ಲೋಕದಲ್ಲಿ ನಾವು ಏಕಾಂಗಿಯಾಗಿ ಎದುರಿಸುತ್ತಾ ನಿಲ್ಲುವದನ್ನು ಬಯಸುವದಿಲ್ಲ ಎಂಬದನ್ನು ನಾವು ತಿಳಿಯಬೇಕೆಂದು ಆತನು ಬಯಸುತ್ತಾನೆ. ದುರಾತ್ಮನಿಗೆ ವಿರುದ್ಧವಾಗಿ ನಿಲ್ಲಲು ನಮಗೆ ಬೇಕಾದವುಗಳನ್ನು ಕೊಡುವ ಮೂಲಕ ಆತನು ನಮ್ಮನ್ನು ಸಜ್ಜುಗೊಳಿಸುತ್ತಾನೆ. ಆತನು ನಮಗೆ “ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ” ಎಂದು ಹೇಳಿದ್ದಾನೆ ಯಾಕಂದರೆ ನಾವು ಆತನ ಸಹಾಯವನ್ನು ತಿರಸ್ಕರಿಸಿ ಎಲ್ಲವನ್ನೂ ನಮ್ಮ ಸ್ವಂತ ಬಲದಲ್ಲಿ ಮಾಡಲು ಮುಂದಾಗುವ ಸಾಧ್ಯತೆಯಿದೆ.

**4.** ಪೌಲ ಮತ್ತು ಸೀಲನನ್ನು ಸೆರೆಮನೆಗೆ ಹಾಕುವ ಮೊದಲು ಅವರಿಗೆ ಉಂಟಾದ ವೇದನೆಗಳು ಯಾವುವು?
ಎಲ್ಲರ ಎದುರಿನಲ್ಲಿ ಅವರನ್ನು ಚಡಿಗಳಿಂದ ಹೊಡೆಸಿದರು. ಅಪೊ 16:22-23,37

**5.** “ನಾನು ರಕ್ಷಣೆ ಹೊಂದಲು ಏನು ಮಾಡಬೇಕು” ಎಂಬದಾಗಿ ಸೆರೆಮನೆಯ ಯಜಮಾನನು ಕೇಳಿದ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಏನು?
ಅವರು ಅವನಿಗೆ, “ ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ” ಎಂದು ಹೇಳಿದರು. ಅಪೊ 16:31

## ಆಟ: ಯುದ್ಧ – ಪಾಠ 2

ಸಾಮಗ್ರಿಗಳು
6 ವಿದ್ಯಾರ್ಥಿಗಳಿರುವ ಪ್ರತಿಯೊಂದು ಗುಂಪಿಗೆ ನೂಲಿನ ಚಿಕ್ಕ ಉಂಡೆ.

ಆಟ ಆಡುವದು




1. 4-6 ಗುಂಪುಗಳನ್ನು ಮಾಡಲು ಮಕ್ಕಳನ್ನು ಲೆಕ್ಕ ಮಾಡಿರಿ ಮತ್ತು ಅವರನ್ನು ಸಾಲಾಗಿ ನಿಲ್ಲಿಸಿರಿ, ಆದರೆ ಒಂದು ಗುಂಪಿಗೂ ಮತ್ತೊಂದು ಗುಂಪಿಗೂ ನಡುವೆ ಹೆಚ್ಚು ಸ್ಥಳವಿರಬೇಕು.
2. ಸೈತಾನನು ಕೆಲವೊಮ್ಮೆ ನಮ್ಮನ್ನು ಕಟ್ಟಿಹಾಕಲು ಜನರನ್ನು ಉಪಯೋಗಿಸಿಕೊಳ್ಳುತ್ತಾನೆ, ಆದರೆ ಯಾವುದೇ ಪರಿಸ್ಥಿತಿಯಲ್ಲಾದರೂ ನಾವು ಸೈತಾನನಿಗೆ ವಿರುದ್ಧವಾಗಿ ಹೋರಾಡುತ್ತಿದ್ದೇವೆ ಎಂಬದನ್ನು ಮಕ್ಕಳೊಂದಿಗೆ ಚರ್ಚಿಸಿರಿ. ಈ ಆಟದಲ್ಲಿ ನಮ್ಮನ್ನು ನಾವೇ ಬಂಧಿಸಿಕೊಳ್ಳುವವರಾಗಿದೇವೆ ಆದರೂ ನಮ್ಮನ್ನು ನಾವೇ ಬಿಡುಗಡೆಗೊಳಿಸಿಕೊಳ್ಳಬೇಕು, ಅಂದರೆ ನಾವು ನೂಲನ್ನು ತೆಗೆಯಬೇಕು ಹಾಗೂ ಇತರರೊಂದಿಗೆ ಜಗಳವಾಡದ ಹಾಗೆ ನೋಡಿಕೊಳ್ಳಬೇಕು.
3. ಪ್ರತಿಯೊಂದು ಸಾಲಿನಲ್ಲಿ ನಿಂತಿರುವ ಮೊದಲನೆಯ ವಿದ್ಯಾರ್ಥಿಗೆ ನೂಲಿನ ಚಿಕ್ಕ ಉಂಡೆಯನ್ನು ಕೊಡಿರಿ. ಮೊದಲನೆಯ ವಿದ್ಯಾರ್ಥಿಯು ನೂಲಿನ ತುದಿಯನ್ನು ಹಿಡಿದುಕೊಂಡು ಉಂಡೆಯನ್ನು ಪಾಸ್ ಮಾಡಬೇಕು, ಕಡೆಯಲ್ಲಿ ನಿಂತಿರುವ ವಿದ್ಯಾರ್ಥಿ ಅದನ್ನು ತನ್ನ ಬೆನ್ನ ಹಿಂದಿನಿಂದ ಪಾಸ್ ಮಾಡುತ್ತಾ ಮತ್ತೆ ಮೊದಲನೆಯ ವಿದ್ಯಾರ್ಥಿಗ ತಲುಪಿಸಬೇಕು.
4. ತಂಡಗಳವರಿಗೆ ಕೊಡಲಾಗಿರುವ ನೂಲಿನ ಉಂಡೆ ಮುಗಿದ ನಂತರ, ವೈರಿಯ ಬಲೆಯಿಂದ ಅವರು ತಪ್ಪಿಸಿಕೊಳ್ಳಬೇಕು ಮತ್ತು ತಮ್ಮನ್ನು ನೂಲಿನಿಂದ ಬಿಡಿಸಿಕೊಳ್ಳಬೇಕು. ಯಾವ ತಂಡ ಮೊದಲು ತನ್ನನ್ನು ಬಿಡಿಸಿಕೊಳ್ಳುತ್ತದೆಯೋ ಅವರು ಗೆಲ್ಲುತ್ತಾರೆ.

ಆಯ್ಕೆ


ತಮ್ಮಲ್ಲಿ ಜಗಳವಾಡಿಕೊಳ್ಳದೆ ಬಿಡಿಸಿಕೊಳ್ಳುವ ಗುಂಪಿಗೆ ನೀವು ಬಹುಮಾನ ಕೊಡಬಹುದು ಅಥವಾ ಅವರನ್ನು ಪ್ರಶಂಸೆ ಮಾಡಬಹುದು.

## ಒಗಟಿನ ಉತ್ತರಗಳು – ಪಾಠ 2

| | | | | | | | | | | |
|---|---|---|---|---|---|---|---|---|---|---|
| ಸ | ಸೀ | ಲ | ಯ | ನು | ತೆ | ಪ್ರಾ | ಜ | ಕಂ | ರು | ಸೀ |
| ಸೀ | ರ | ಸೇ | ಜ | ಕಂ | ಬಾ | ಯ | ರ್ಥ | ಕ | ನು | ಪು |
| ಜ | ಖೈ | ಪ | ತೆ | ಹಾ | ಗಿ | ಸೀ | ವ | ನೆ | ಗುಂ | ಲ |
| ಯ | ಕಂ | ದಿ | ಳಿ | ಡು | ಲು | ಸೇ | ಜ | ರ | ಕ್ಷ | ಣೆ |
| ಭೂ | ನು | ಸೀ | ಗ | ಗ | ಗ | ಯ | ನ | ತೆ | ದಾ | ದಿ |
| ತೆ | ಲ | ರ್ಥ | ಜ | ಳು | ಳು | ಜ | ಸೀ | ದಿ | ಸ | ಗುಂ |
| ಸೆ | ರೆ | ಮ | ನೆ | ಯ | ಯ | ಜ | ಮಾ | ನ | ನು | ಪ |
| ಸೇ | ಯ | ಸೀ | ಕ್ಷ | ಜ | ನು | ಣೆ | ಪೌ | ಲ | ನು | ರ್ಥ |
| ಕ್ಷ | ರ್ಥ | ಭ | ದ್ರ | ತೆ | ಸೇ | ಲ | ಸೀ | ಣೆ | ತೆ | ಜ |





# ಪಾಠ 3

## ಶೀರ್ಷಿಕೆ – ಪಾಠ 3


ಜಯಶಾಲಿಗಳಾಗಿ ನಿಲ್ಲಿರಿ

## ಸತ್ಯವೇದ ಕಥೆ – ಪಾಠ 3

ಸ್ತೆಫೆನನ ಮರಣ

ಅಪೊ 6:8-15, 7:51-60


## ಪದಕಗಳು – ಪಾಠ 3



ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:






ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 3

ಮಿಲಿಟರಿ ಅಧಿಕಾರಿ ಅಪ್ರೈಟ್ ಸಿಪಾಯಿ ಗಿಗಲ್ ಮತ್ತು ಸಿಪಾಯಿ ಡ್ಯೂಟಿಗೆ ಅವಧಾನದಲ್ಲಿ ನಿಲ್ಲುವಂತೆ ಸೂಚಿಸಿದರು. ನಂತರ ಮಿಲಿಟರಿ ಅಧಿಕಾರಿ ಅಪ್ರೈಟ್ ಸಿಪಾಯಿಗಳ ಹಿಂದಿನಿಂದ ಗಟ್ಟಿಯಾಗಿ ಕೂಗಿದರು. ಅವರು ಜಿಗಿದು ಓಡಿ ಹೋದರು. ಎರಡನೆಯ ಸಲ ಅವರು ಗಾಬರಿಗೊಂಡು ಒಬ್ಬರ ಮೇಲೆ ಒಬ್ಬರು ಜಿಗಿಯಲಾರಂಭಿಸಿದರು. ಮೂರನೆಯ ಸಲ ಮಿಲಿಟರಿ ಅಧಿಕಾರಿಯು ಜೋರಾದ ಶಬ್ದ ಮಾಡಲು ಬಾಣಲೆಗಳನ್ನು ಉಪಯೋಗಿಸಿದರು. ಅಂತಿಮವಾಗಿ, ಸಿಪಾಯಿಗಳು ಮಿಲಿಟರಿ ಅಧಿಕಾರಿಯ ಸೂಚನೆಯ ಮೇಳೆ ಅವಧಾನದಲ್ಲಿ ನಿಂತುಕೊಂಡರು.

## ಕಂಠಪಾಠ ವಚನ – ಪಾಠ 3

"ಎಂದೇ, ದೇವರು ಕೊಡುವ ಸಕಲ ಶಸ್ತ್ರಾಸ್ತ್ರಗಳೊಂದಿಗೆ ಸುಸಜ್ಜಿತರಾಗಿರಿ. ಆ ದುರ್ದಿನದಂದು ವೈರಿಗಳನ್ನು ಎದುರಿಸಲು ಆಗ ನೀವು ಶಕ್ತರಾಗುತ್ತೀರಿ. ಮಾತ್ರವಲ್ಲ, ಕಟ್ಟಕಡೆಯವರೆಗೆ ಹಿಮ್ಮೆಟ್ಟದೆ ನಿಲ್ಲುತ್ತೀರಿ" ಎಫೆಸಿಯರಿಗೆ 6:13

## ಮುಖ್ಯ ಪಾಠ – ಪಾಠ 3

**ಅಪೊ 6:8-15, 7:51-60**

ನಾವು ದೇವರು ದಯಪಾಲಿಸುವ ಸರ್ವಾಯುಧಗಳು ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಓದುವಾಗ, ನಾವು ನಮ್ಮ ಜೀವಿತಗಳಿಗೆ ಸರ್ವಾಯುಧಗಳನ್ನು ಧರಿಸಿಕೊಳ್ಳಬೇಕು ಎಂಬದನ್ನು ಮನವರಿಕೆ ಮಾಡಿಕೊಳ್ಳುವದು ಪ್ರಾಮುಖ್ಯವಾಗಿದೆ. ನೀವು ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಲು ಪ್ರಾರ್ಥನೆ ಮಾಡಲು ಆಗುವದಿಲ್ಲ. ನೀವು ನಿಮ್ಮ ಬಾಯಿಂದ ಸತ್ಯವನ್ನು ಹೇಳುತ್ತಾ, ದೇವರ ಕುರಿತಾದ ಸತ್ಯವನ್ನು ಹೃದಯದಿಂದ ನಂಬುವಾಗ, ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡ ಹಾಗಾಗುವದು. ಹಾಗೆಯೇ ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳುವ ಸಲುವಾಗಿಯೂ ಪ್ರಾರ್ಥನೆ ಮಾಡಿದರೆ ಆಗುವದಿಲ್ಲ. ಮಾನವರು ಹೇಳುವದನ್ನು ನಂಬದೆ ದೇವರು ಹೇಳುವದನ್ನು ನಂಬುತ್ತಾ ನೀವು ನಂಬಿಕೆಯಿಂದ ಜೀವಿಸುವಾಗ, ನಂಬಿಕೆಯೆಂಬ ಗುರಾಣಿಯನ್ನು ನಿಮ್ಮ ಕೈಯಲ್ಲಿ ಹಿಡಿದುಕೊಂಡಿರುವಿರಿ ಮತ್ತು ವೈರಿಯ ವಿರುದ್ಧ ನಿಮ್ಮನ್ನು ರಕ್ಷಿಸಿಕೊಳ್ಳಲು ಅದನ್ನು ಉಪಯೋಗಿಸಿಕೊಳ್ಳುತ್ತಿರುವಿರಿ. ಜಯಶಾಲಿಗಳಾಗಿ ನಿಲ್ಲಬೇಕೆಂದರೂ ಇದೇ ತತ್ವ ಅನ್ವಯವಾಗುತ್ತದೆ. ಜಯಶಾಲಿಗಳಾಗಿ ನಿಲ್ಲಲು ನೀವು ನಿರ್ದಿಷ್ಟವಾದ ಪದಗಳನ್ನು ಪ್ರಾರ್ಥನೆಯಲ್ಲು ಉಪಯೋಗಿಸಲು ಆಗುವದಿಲ್ಲ. ನೀವು ದೇವರಲ್ಲಿ ನಂಬಿಕೆಯುಳ್ಳವರಾಗಿ, ಸೋಲನ್ನು ಒಪ್ಪಿಕೊಳ್ಳಲು ನಿರಾಕರಿಸುವಾಗ, ಜಯಶಾಲಿಗಳಾಗಿ ನಿಲ್ಲಲು ಸಾಧ್ಯವಾಗುತ್ತದೆ.


ಅಪೊಸ್ತಲರ ಕೃತ್ಯಗಳಿಂದ ತೆಗೆದುಕೊಳ್ಳಲಾಗಿರುವ ಇಂದಿನ ಸತ್ಯವೇದದ ಕಥೆಯಲ್ಲಿ ಸ್ತೆಫೆನನು ಇದಕ್ಕೆ ದೊಡ್ಡ ಉದಾಹರಣೆಯಾಗಿದ್ದಾನೆ. ಅವನು ನೀತಿವಂತನು ಮತ್ತು ಜ್ಞಾನವಂತನಾಗಿದ್ದನು, ಅವನು ಎಡಬಿಡದೆ ಸರ್ವಾಯುಧಗಳನ್ನು ಧರಿಸಿಕೊಂಡಿದ್ದನು. ಧಾರ್ಮೀಕ ಹಿಂಸೆಗಳು ಅವನಿಗೆ ವಿರುದ್ಧವಾಗಿ ಕಾಣಿಸಿಕೊಂಡಾಗ, ಮರಣವು ನಿಶ್ಚಯವಾದಾಗಲೂ, ತಾನು ನಂಬಿದ್ದ ವಿಷಯವನ್ನು ಬಲವಾಗಿ ಹಿಡಿದುಕೊಂಡನು.

ಸ್ತೆಫೆನನು ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರುತ್ತಿದ್ದನು ಆದ್ದರಿಂದ ಧಾರ್ಮಿಕ ನಾಯಕರು ಅವನ ಮೇಲೆ ಕೋಪಗೊಂಡು ಅವನಿಗೆ ವಿರುದ್ಧವಾಗಿ ಜನರನ್ನು ಕೆರಳಿಸಿದರು ಮತ್ತು ಅಂತಿಮವಾಗಿ ಕಲ್ಲೆಸೆದು ಅವನನ್ನು ಕೊಂದು ಬಿಟ್ಟರು. ಸತ್ಯವೇದದ ಈ ಕಥೆಯಾದ್ಯಂತ, ಸ್ತೆಫನನು ತಾನು ನಂಬಿದ್ದ ವಿಷಯವನ್ನು ಬಲವಾಗಿ ಹಿಡಿದುಕೊಂಡಿದ್ದನು ಮತ್ತು ಸಾರ್ವಜನಿಕರ ಅಭಿಪ್ರಾಯದ ಪ್ರಕಾರ ತನ್ನ ಅಭಿಪ್ರಾಯವನ್ನು ಅವನು ಬದಲಾಯಿಸಿಕೊಳ್ಳಲಿಲ್ಲ. ನೀವು ದೇವರಲ್ಲಿ ನಂಬಿಕೆಯುಳ್ಳವರಾಗಿ ಅದರ ನಿಮಿತ್ತ ಹಿಂಸೆಗಳನ್ನು ಎದುರಿಸಲು ಸಿದ್ಧರಾಗಿದ್ದರೆ, ಜಯಶಾಲಿಗಳಾಗಿ ನಿಲ್ಲುವಿರಿ ಮತ್ತು ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳುವದರಿಂದ ದೃಢವಾಗಿರುವಿರಿ.

## ಬೂಟ್ ಕ್ಯಾಂಪ್ – ಪಾಠ 3

**ಅಸೈನ್ಮೆಂಟ್ – ಪಾಠ 3**

ಶಾಲೆಗೆ ಸತ್ಯವೇದವನ್ನು ತೆಗೆದುಕೊಂಡು ಬನ್ನಿರಿ ಮತ್ತು ಅದನ್ನು ನಿಮ್ಮ ಬ್ಯಾಗ್ ನೊಳಗೆ ಅಥವಾ ಬ್ಯಾಕ್ ಪ್ಯಾಕ್ ನೊಳಗೆ ಬಚ್ಚಿಡಬೇಡಿರಿ. ನೀವು ಏನನ್ನು ನಂಬುತ್ತೀರೋ ಆ ವಿಷಯದಲ್ಲಿ ಬಲವಾಗಿ ನಿಂತುಕೊಳ್ಳಿರಿ ಮತ್ತು ಕ್ರೈಸ್ತನಾಗಿ ಜೀವಿಸಲು ನಾಚಿಕೆಪಡಬೇಡಿರಿ.



**ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 3**

ಅಪೊ 8-10 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 3

"ನಾನು ದೃಢವಾಗಿ ನಿಲ್ಲುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 3

1. ಮಾನವನ ಜೀವಿತದಲ್ಲಿರುವ ಏಳು ಬೀಳುಗಳು ಯಾವುವು?

ಉದಾಹರಣೆಗಳು: ಒಬ್ಬ ವಿದ್ಯಾರ್ಥಿ ಒಂದು ಸೆಮೆಸ್ಟರ್ ನಲ್ಲಿ ಒಳ್ಳೆಯ ಅಂಕಗಳನ್ನು ಪಡೆಯುತ್ತಾನೆ ಮತ್ತು ಇನ್ನೊಬ್ಬನು ತುಂಬಾ ಕಡಿಮೆ ಅಂಕಗಳನ್ನು ಪಡೆಯುತ್ತಾನೆ. ಒಬ್ಬ ವ್ಯಕ್ತಿ ಒಂದು ದಿನ ಬಹಳ ಸಂತೋಷವಾಗಿರುತ್ತಾನೆ ಮಾರಣೆಯ ದಿನ ದುಃಖವಾಗಿರುತ್ತಾನೆ. ಐಶ್ವರ್ಯವಂತನಾಗಿರುವ ವ್ಯಕ್ತಿ ಅನಿರೀಕ್ಷಿತವಾಗಿ ಎಲ್ಲಾ ಕಳೆದುಕೊಳ್ಳುತ್ತಾನೆ ಮತ್ತು ಬಡವನಾಗುತ್ತಾನೆ. ಒಬ್ಬನು ನಾನು ಬಲಿಷ್ಠನಾಗಿದ್ದೇನೆ, ಪಾಪ ಮಾಡುವದಿಲ್ಲ ಎಂದು ಹೇಳುತ್ತಾನೆ ಆದರೆ ಲೈಂಗಿಕ ಪಾಪದಲ್ಲಿ ಸಿಕ್ಕಿಬೀಳುತ್ತಾನೆ.

2. ನಾವು ಸೈತಾನನಿಗೆ ವಿರುದ್ಧವಾಗಿ ಯಾವಾಗ ದೃಢವಾಗಿ ನಿಲ್ಲಬೇಕು?

ಸುಳ್ಳು ಹೇಳುವ ಶೋಧನೆ ನಮಗೆ ಎದುರಾಗುವಾಗ ನಾವು ಅದನ್ನು ವಿರೋಧಿಸಬೇಕು. ಚಿಕ್ಕ ಮಕ್ಕಳು ಹೋಗಬಾರದ ಸ್ಥಳಕ್ಕೆ ಹೋಗುವಂತೆ ಯಾರಾದರೂ ನಮ್ಮನ್ನು ಒತ್ತಾಯಪಡಿಸುವಾಗ ಅಥವಾ ನಮಗೆ ಬಹಳ ಇಷ್ಟವಾದ ಪೆನ್ ಅನ್ನು ಕಳ್ಳತನ ಮಾಡಿಯಾದರೂ ಪಡೆಯಬೇಕೆಂಬ ಶೋಧನೆ ಎದುರಾಗುವಾಗ. ನಾವು ಯಾವಾಗಲೂ ದೃಢವಾಗಿ ನಿಲ್ಲಬೇಕು ಯಾಕಂದರೆ ನಾವು ಎಡಬಿಡದೆ ನಡೆಯುತ್ತಿರುವ ಯುದ್ಧದಲ್ಲಿದ್ದೇವೆ.

3. ದೃಢವಾಗಿ ನಿಲ್ಲಲು ನಾವು ಮಾಡಬೇಕಾಗಿರುವ ಪ್ರಾಮುಖ್ಯವಾದ ಕಾರ್ಯ ಯಾವುದು?

ನಾವು ಯಾವಾಗಲೂ ಸರ್ವಾಯುಧಗಳನ್ನು ಧರಿಸಿಕೊಂಡಿದ್ದೇವೆ ಎಂಬ ಆಲೋಚನೆಯಲ್ಲಿ ಜೀವಿಸುವದನ್ನು ಕಲಿತುಕೊಳ್ಳಬೇಕು.

4. ಸುಳ್ಳು ಆರೋಪಗಳನ್ನು ಮಾಡಿದಾಗ ಯಾರ ಮುಖ ದೇವದೂತನ ಮುಖದ ಹಾಗೆ ಇತ್ತು?

ಸ್ತೆಫನನು.

5. ಅವನು ಸಾಯುವ ಮೊದಲು ಏನು ಹೇಳಿದನು?

"ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡ." ಅಪೊ 7:56 ಮತ್ತು 7:59-60

## ಆಟ: ಯುದ್ಧ – ಪಾಠ 3


ಸಾಮಗ್ರಿಗಳು

ಬಾಲ್, ಮಾಸ್ಕಿಂಗ್ ಟೇಪ್

ಸಿದ್ಧತೆ

ನೆಲ ಅಥವಾ ಮೈದಾನದಲ್ಲಿ ಆಟಗಾರರ ಸ್ಥಾನಗಳನ್ನು ಗುರುತಿಸಿರಿ.

ಆಟ ಆಡುವದು



1. ನಿಮ್ಮ ತರಗತಿಯನ್ನು ಎರಡು ಗುಂಪುಗಳಾಗಿ ವಿಭಾಗಿಸಿರಿ, ಒಂದುವೇಳೆ 20 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇರುವದಾದರೆ ನೀವು ಶಿಫ್ಟ್ ಪ್ರಕಾರ ಆಡಿಸಬಹುದು ಆದರೂ ಒಂದು ತಂಡದಲ್ಲಿ ಕೇವಲ 8 ಆಟಗಾರರು ಮಾತ್ರವೇ ಇರಬೇಕು.

2. ಮೊದಲೇ ನೆಲದ ಮೇಲೆ ಅಥವಾ ಮೈದಾನದ ಮೇಲೆ ಗುರುತು ಹಾಕಲಾಗಿರುವ ಸ್ಥಾನದಲ್ಲಿ ಆಟಗಾರರು ನಿಲ್ಲಬೇಕು ಅವರ ನಡುವೆ ಒಂದು ಮೊಣಕೈಯಷ್ಟು ಅಂತರವಿರಬೇಕು.

3. ಟೀಚರ್ ಚೆಂಡನ್ನು ನಿಧಾನವಾಗಿ ಎಸೆಯಬೇಕು. ಒಂದು ತಂಡದವರು ಚೆಂಡನ್ನು ಇನ್ನೊಂದು ಕಡೆಯಿರುವ ಗೋಲ್ ಕಡೆಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸಬೇಕು ಮತ್ತು ಇನ್ನೊಂದು ತಂಡದವರು ಚೆಂಡನ್ನು ಮತ್ತೊಂದು ಕಡೆಯಿರುವ ಗೋಲ್ ಕಡೆಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸಬೇಕು.

4. ಆಟಗಾರರು ತಮ್ಮ ಸ್ಥಾನದಿಂದ ಅಲ್ಲಾಡಬಾರದು ಮತ್ತು ಗೋಲ್ ತಲುಪಿಸುವ ತನಕ ಒಮ್ಮೆ ಒಂದು ಕಾಲನ್ನು ಮಾತ್ರವೇ ತೆಗೆದಿಡಬಹುದು.


ಆಯ್ಕೆಗಳು


ನೀವು ಒಳಗೆ ನೆಲದ ಮೇಲೆ ಆಡಬಹುದು ಮತ್ತು ಬಣ್ಣದ ಟೇಪ್ ಮೂಲಕ ಗುರುತು ಹಾಕಬಹುದು.

ಆಟಗಾರರನ್ನು ನಿಲ್ಲಿಸುವ ಬದಲು ಕುರ್ಚಿಯ ಮೇಲೆ ಕೂರಿಸಬಹುದು.

## ಒಗಟಿನ ಉತ್ತರಗಳು – ಪಾಠ 3

| | | | | | | | | |
|---|---|---|---|---|---|---|---|---|
| ರ | ಳು | ಪ | ತ | ಲ್ಲೆ | ಸು | ಪ್ರಾ | ಟ್ಟೆ | ಮಾ |
| ಪಾ | ಪ | ವಿ | ಟ್ಟ | ಮಾ | ಮ | ರ್ಥಿ | ನೆ | ಡ |
| ನೆ | ರ್ಥ | ತ್ರಾ | ತ | ಣ | ರ | ಸಿ | ದೂ | ತ |
| ಲ್ಲೆ | ಟ್ಟೆ | ತ್ಮ | ಗ | ಮ | ಸ್ತೆ | ದ | ಳು | ಸು |
| ಯೌ | ಮ | ನು | ದೂ | ಡ | ಕ | ರು | ಯೇ | ರ್ಥ |
| ಬ | ಪ | ಡ | ನು | ಲ್ಲೆ | ರ್ತ | ಗ | ರ | ತ |
| ರ | ಟ್ಟೆ | ನ | ಸ್ತೆ | ಕು | ನು | ಟ್ಟೆ | ನೆ | ಕ |
| ರ್ಥ | ಫೆ | ಗ | ಸ್ಥ | ಳು | ಮಾ | ರ್ಥ | ಲೋ | ಲ್ಲೆ |
| ಸ್ತೆ | ತ | ಟ್ಟೆ | ಳು | ನು | ಮ | ರ | ರ್ಥ | ಸೆ |
| ಟ್ಟೆ | ಲ್ಲೆ | ಡ | ಮಾ | ಸ | ಪ | ಳು | ನು | ತ |







# ಪಾಠ 4

## ಶಿರ್ಷಿಕೆ – ಪಾಠ 4

ಸತ್ಯವೆಂಬ ನಡುಕಟ್ಟು

## ಸತ್ಯವೇದ ಕಥೆ – ಪಾಠ 4


ಅನನೀಯ ಮತ್ತು ಸಫೈರಳು

ಅಪೊ 5:1-10

## ಪದಕಗಳು – ಪಾಠ 4

ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:







ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 4

ಸಿಪಾಯಿ ಗಿಗಲ್ ಸತ್ಯವಲ್ಲದ ಯಾವುದೇ ವಿಷಯವನ್ನು ಸಿಪಾಯಿಗಳ ಮನೆಯಲ್ಲಿ ಸಿಪಾಯಿ ಡ್ಯೂಟಿಗೆ ಹೇಳಿ, ತನ್ನ ನಡುಕಟ್ಟನ್ನು ಬಿಟ್ಟು ಹೋಗುತ್ತಾಳೆ. ತರಬೇತಿಯ ಸಮಯದಲ್ಲಿ ಸಿಪಾಯಿ ಗಿಗಲ್, ಸಿಪಾಯಿ ಡ್ಯೂಟಿಯ ಹತ್ತಿರ ಉಪಕರಣ ಕೊಡುವಂತೆ ಕೇಳುತ್ತಲೇ ಇರುತ್ತಾಳೆ. ಮಿಲಿಟರಿ ಅಧಿಕಾರಿ ಅಪ್ರೈಟ್ ಗಿಗಲ್ ಹತ್ತಿರ ನಿನ್ನ ನಡುಕಟ್ಟು ಎಲ್ಲಿ ಎಂದು ಕೇಳಿದಾಗ, ಅವಳು ಸುಳ್ಳು ಹೇಳುತ್ತಾಳೆ. ಅಂತಿಮವಾಗಿ, ನಾನು ನನ್ನ ನಡುಕಟ್ಟನ್ನು ಮನೆಯಲ್ಲಿಯೇ ಬಿಟ್ಟು ಬಂದಿದ್ದೇನೆ ಎಂದು ಮಿಲಿಟರಿ ಅಧಿಕಾರಿ ಎದುರು ಒಪ್ಪಿಕೊಳ್ಳುತ್ತಾಳೆ, ಸುಳ್ಳು ಹೇಳಿದ್ದಕ್ಕಾಗಿ ಡ್ಯುಟಿ ಹತ್ತಿರ ಕ್ಷಮೆ ಕೇಳುತ್ತಾಳೆ ಮತ್ತು ನಡುಕಟ್ಟು ತರಲು ಮನೆಗೆ ಹಿಂದಿರುಗುತ್ತಾಳೆ.

## ಕಂಠಪಾಠ ವಚನ – ಪಾಠ 4

"ಹಿಮ್ಮೆಟ್ಟದೆ ನಿಲ್ಲಲೇಬೇಕು. ಇದಕ್ಕಾಗಿ ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಿ. ನೀತಿಯೆಂಬ ರಕ್ಷಕವಚವನ್ನು ತೊಟ್ಟುಕೊಳ್ಳಿರಿ."

ಎಫೆಸಿಯರಿಗೆ 6:14a

## ಮುಖ್ಯ ಪಾಠ – ಪಾಠ 4

**ಅಪೊ 5:1-10**

ಎಫೆಸ 6 ನೇ ಅಧ್ಯಾಯದಲ್ಲಿ ತಿಳಿಸಲಾಗರವ ಮೊದಲನೆಯ ಸರ್ವಾಯುಧ ಸತ್ಯವೆಂಬ ನಡುಕಟ್ಟು, ಇದನ್ನು ಸಿಪಾಯಿಗಳು ತಮ್ಮ ನಡುವಿಗೆ ಬಿಗಿದುಕೊಳ್ಳುತ್ತಾರೆ, ಇದರಿಂದ ಸರ್ವಾಯುಧಗಳನ್ನು ಬಿಗಿಯಾಗಿ ಹಿಡಿದುಕೊಳ್ಳಲು ಸಾಧ್ಯವಾಗುತ್ತದೆ. ನಡುಕಟ್ಟು ಸಿಪಾಯಿಯು ಧರಿಸಿಕೊಳ್ಳುವ ಸರ್ವಾಯುಧಗಳನ್ನು ಬಿಗಿಗೊಳಿಸುತ್ತದೆ, ಕತ್ತಿಯನ್ನು ಬಿಗಿಯಾಗಿ ಇಟ್ಟುಕೊಳ್ಳಲು ಸಹಾಯ ಮಾಡುತ್ತದೆ, ಸಿಪಾಯಿಗಳು ಇದನ್ನು ತೆಗೆಯಲು ಮುಂದಾಗವದಲ್ಲ. ನಿಜವಾಗಿ ಹೇಳುವದಾದರೆ ಒಂದುವೇಳೆ ಸಿಪಾಯಿಯ ಹತ್ತಿರ ಸತ್ಯದ ನಡುಕಟ್ಟು ಇಲ್ಲವೆಂದರೆ, ಬಹುಶಃ ಅವರು ಹಾಕಿಕೊಂಡಿರುವ ವಸ್ತ್ರಗಳೂ ಬಿದ್ದು ಹೋಗುತ್ತವೆ ಮತ್ತು ಅವರು ಎಲ್ಲರ ಎದುರು ನಾಚಿಕೆಪಡಬೇಕಾಗುತ್ತದೆ!

ಸತ್ಯದ ಒಂದು ಭಾಗವು ನಮ್ಮ ಬಾಯೊಳಗಿಂದ ಬರುತ್ತದೆ. ನಾವು ನಮ್ಮ ತಂದೆತಾಯಿಗಳಿಗೆ ಅಥವಾ ದೇವರಿಗೆ ಸುಳ್ಳು ಹೇಳದೆ ಯಾವಾಗಲೂ ಸತ್ಯವನ್ನೇ ಹೇಳುವ ಕ್ರೈಸ್ತರಾಗಿ ಜೀವಿಸಬೇಕು. ಆದರೆ ಸತ್ಯವೆಂಬ ನಡುಕಟ್ಟಿನ ಮತ್ತೊಂದು ಭಾಗ ದೇವರು ಹಾಗೂ ಆತನ ವಾಕ್ಯಗಳನ್ನು ನಂಬುವ ಆಯ್ಕೆಯನ್ನು ನಾವು ಮಾಡಿಕೊಳ್ಳುವದಾಗಿದೆ. ನಿಜ ಸಂಗತಿ ಏನೆಂದರ ನಮ್ಮ ವೈರಿಯಾಗಿರುವ ಸೈತಾನನು, ಯಾವಾಗಲೂ ಸುಳ್ಳು ಹೇಳಲು ಪ್ರಯತ್ನಿಸುತ್ತಾನೆ ಮತ್ತು ಸತ್ಯವಲ್ಲದ ಕಾರ್ಯಗಳನ್ನು ನಾವು ನಂಬುವಂತೆ ನಮ್ಮನ್ನು ಪ್ರೇರೇಪಿಸುತ್ತಾನೆ.

ಇಂದಿನ ಸತ್ಯವೇದದ ಕಥೆಯಲ್ಲಿ ಬರುವ ಅನನೀಯ ಮತ್ತು ಸಫೈರಳು ಒಂದುವೇಳೆ ಶಿಷ್ಯರಿಗೆ ಪ್ರಾಮಾಣಿಕರಾಗಿದ್ದರೆ, ಪ್ರಾಮುಖ್ಯವಲ್ಲದ ಸುಳ್ಳನ್ನು ನಂಬುತ್ತಿರಲಿಲ್ಲ. ನಾವು ನಮ್ಮ ಭೂಮಿಯನ್ನು ಕಡಿಮೆ ಹಣಕ್ಕೆ ಮಾರಿದ್ದೇವೆ ಎಂಬ ರೀತಿಯಲ್ಲಿ ಅವರು ಮಾತನಾಡಿದರು, ಆದರೆ ಅವರು ನಿಜವಾಗಿಯೂ ಹೆಚ್ಚು ಹಣಕ್ಕೆ ಅದನ್ನು ಮಾರಿದ್ದರು. ದೇವರ ನಮ್ಮನ್ನು ನೋಡುವದಿಲ್ಲ ಅಥವಾ ಮಾರಾಟದ ಮಾಹಿತಿಗಳು ಆತನಿಗೆ ಗೊತ್ತಾಗುವದಿಲ್ಲ ಎಂಬದಾಗಿ ಆಲೋಚಿಸುವಂತೆ ಮಾಡಿದ ವೈರಿಯ ಮಾತುಗಳನ್ನು ಅವರು ನಂಬಿದರು. ಆದರೆ ದೇವರು ಎಲ್ಲವನ್ನೂ ನೋಡುತ್ತಾನೆ. ಶಿಷ್ಯರು ದೇವರ ಪ್ರತಿನಿಧಿಗಳಾಗಿದ್ದರು. ಅವರು ಶಿಷ್ಯರಿಗೆ ಸುಳ್ಳು ಹೇಳಿದ್ದರಿಂದ, ದೇವರಿಗೇ ಸುಳ್ಳು ಹೇಳಿದರು. ಅವರು ತಮ್ಮ ಮಾರಾಟದ ಕುರಿತಾದ ಸತ್ಯವನ್ನು ಬಚ್ಚಿಟ್ಟರು ಯಾಕಂದರೆ ತಮ್ಮ ಕಿವಿಗಳಲ್ಲಿ ಪಿಸುಗುಟ್ಟಿದ ಸೈತಾನನ ಸುಳ್ಳುಗಳನ್ನು ಅವರು ನಂಬಿದರು. ನಿಮ್ಮ ಸರ್ವಾಯುಧಗಳು ಬೀಳುವಂತೆ ನೀವು ಯಾವ ಸುಳ್ಳುಗಳನ್ನು ನಂಬುತಿದ್ದೀರಿ? ನಾವು ಯಾವಾಗಲೂ ಸತ್ಯವನ್ನು ಹೇಳುತ್ತಾ ಮತ್ತು ದೇವರು ಹಾಗೂ ಆತನ ವಾಕ್ಯಗಳ ಕುರಿತಾದ ಸತ್ಯವನ್ನು ನಂಬುತ್ತಾ ಎಲ್ಲಾ ಸಮಯಗಳಲ್ಲಿಯೂ ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಬೇಕಾದದ್ದು ಪ್ರಾಮುಖ್ಯವಾಗಿದೆ.

## ಬೂಟ್ ಕ್ಯಾಂಪ್ – ಪಾಠ 4

**ಅಸೈನ್ಮೆಂಟ್ – ಪಾಠ 4**

ನೀವು ಹೇಳಿರುವ ಸುಳ್ಳಿನ ಬಗ್ಗೆ ಆಲೋಚಿಸಿರಿ ಮತ್ತು ಅದನ್ನು ಬರೆಯಿರಿ. ಅದು ಇತ್ತೀಚಿನದಲ್ಲದಿದ್ದರೂ ಪರವಾಗಿಲ್ಲ, ನೀವು ಚಿಕ್ಕವರಾಗಿದ್ದಾಗ ಹೇಳಿರಬಹುದು. ಈಗ ಮೊದಲನೆಯ ಸುಳ್ಳನ್ನು ಮುಚ್ಚಿಡಲು ಹೇಳಿದ ಎಲ್ಲಾ ಸುಳ್ಳುಗಳನ್ನು ಬರೆಯಿರಿ. ಅ ಸುಳ್ಳಿನ ನಿಮಿತ್ತ ಯಾರಿಗೆ ತೊಂದರೆಯಾಯಿತು ಎಂಬದನ್ನೂ ಬರೆಯಿರಿ.



**ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 4**

ಅಪೊ 11-13 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 4

"ನಾನು ಪ್ರಾಮಾಣಿಕತೆಯಿಂದ ಜೀವಿಸುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 4

**1.** ಒಂದುವೇಳೆ ನೀವು ಪ್ರಾಮಾಣಿಕರಲ್ಲದಿದ್ದರೆ, ನಿಮ್ಮ ಸತ್ಯವೆಂಬ ನಡುಕಟ್ಟು ಏನಾಗುತ್ತದೆ? ಇದರಿಂದ ನಿಮ್ಮ ಇತರೆ ಸರ್ವಾಯುಧಗಳಿಗೆ ತೊಂದರೆಯಾಗುತ್ತದೆಯೇ?

ನಾವು ಸುಳ್ಳು ಹೇಳುವಾಗ ಅಥವಾ ಪ್ರಾಮಾಣಿಕರಾಗಿ ನಡೆದುಕೊಳ್ಳದೆ ಇರುವಾಗ ಸತ್ಯವೆಂಬ ನಡುಕಟ್ಟು ಬಿದ್ದು ಹೋಗುತ್ತದೆ ಮತ್ತು ಹಾಗೆಯೇ ಜೀವಿಸುವದನ್ನು ಮುಂದುವರೆಸಿದರೆ ನಮ್ಮ ಇಡೀ ಜೀವಿತ ತೊಂದರೆಗೊಳಗಾಗುತ್ತದೆ. ನಡುಕಟ್ಟು ನಿಮ್ಮ ಪಾಯಿಜಾಮ (ಪ್ಯಾಂಟ್) ಅಥವಾ ಸರ್ವಾಯುಧಗಳ ಇತರೆ ಭಾಗಗಳು ಬೀಳದಂತೆ ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಪ್ರಾಮಾಣಿಕತೆ ಇಲ್ಲದೆ ಹೋದರೆ ಜನರು ನಮ್ಮನ್ನು ನಂಬುವದಿಲ್ಲ.

**2.** ನೀವು "ಸುಳ್ಳು" ಹೇಳುವದಿಲ್ಲ ಆದರೆ "ಪ್ರಾಮಾಣಿಕರಾಗಿ" ನಡೆದುಕೊಳ್ಳಲು ಆಗದಿರುವಂಥ ನಿರ್ದಿಷ್ಟವಾದ ಪರಿಸ್ಥಿತಿ ಯಾವುದು?

ವಿದ್ಯಾರ್ಥಿಗಳು ಅಂಥ ಪರಿಸ್ಥಿತಿಯ ಬಗ್ಗೆ ಯೋಚಿಸಲಿ. ಉದಾಹರಣೆಗೆ: ನೀವು ಶಾಲೆಗೆ ಹೋಗುತ್ತೀರಿ ಆದರೆ ಸರಿಯಾಗಿ ಓದುವದಿಲ್ಲ ಅಥವಾ ಹೋಮ್ ವರ್ಕ್ ಮಾಡುವದಿಲ್ಲ. ನಾನು ಸ್ನೇಹಿತರ ಜೊತೆಯಲ್ಲಿದ್ದೆ ಎಂದು ನೀವು ನಿಮ್ಮ ತಂದೆತಾಯಿಗಳಿಗೆ ಹೇಳುತ್ತೀರಿ ಆದರೆ ಅವರೊಂದಿಗೆ ಏನು ಮಾಡಿದಿರಿ ಎಂದು ಹೇಳುವದಿಲ್ಲ. ಅಥವಾ ನೀವು ಒಳ್ಳೆ ಅಂಕಗಳೊಂದಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಿರಿ ಆದರೆ ನಾನು ನನ್ನ ಸ್ನೇಹಿತನ ಹತ್ತಿರ ನೋಡಿಕೊಂಡು ಬರೆದೆನು ಎಂದು ಹೇಳುವದಿಲ್ಲ.

**3.** ಸುಳ್ಳು ಹೇಳುವದರ ಫಲಿತಾಂಶ ಏನು?

ಭರವಸೆ ಕಳೆದುಹೋಗುತ್ತದೆ. ಉದಾಹರಣೆಗೆ: ನೀವು ನಿಮ್ಮ ತಾಯಿಗೆ ಸುಳ್ಳು ಹೇಳುವಿರಿ, ಆಕೆಗೆ ಅದು ಗೊತ್ತಾದ ಮೇಲೆ ನೀವು ಏನೇ ಹೇಳಿದರೂ ಆಕೆ ಅದನ್ನು ಸುಲಭವಾಗಿ ನಂಬುವದಿಲ್ಲ. ಮತ್ತೊಂದು ಫಲಿತಾಂಶ ಏನೆಂದರೆ ನೀವು ಸುಳ್ಳನ್ನು ನೆನಪಿನಲ್ಲಿಟ್ಟುಕೊಳ್ಳಲು ಬಹಳ ಕಷ್ಟಪಡಬೇಕು ಮತ್ತು ಎಲ್ಲಾ ಸಮಯಗಳಲ್ಲಿಯೂ ಅದೇ "ಕಥೆಯನ್ನು" ಹೇಳುತ್ತಿರಬೇಕು. ಇದು ಸುಲಭವಲ್ಲ. ಒಂದುವೇಳೆ ಸ್ವಲ್ಪದಲ್ಲಿ ನೀವು ತಪ್ಪಿದರೂ, ಸುಳ್ಳುಗಾರನೆಂಬ ಪಟ್ಟ ಉಳಿದುಕೊಳ್ಳುತ್ತದೆ.

**4.** ಅನನೀಯ ಮತ್ತು ಸಫೈರಳು ಪೇತ್ರನೊಂದಿಗೆ 3 ತಾಸುಗಳ ಅಂತರದ ನಂತರ ಮಾತನಾಡಿದರೂ ಸ್ಥಳ ಮಾರಾಟದ ಬಗ್ಗೆ ಒಂದೇ ರೀತಿಯ ಕಥೆಯನ್ನು ಹೇಗೆ ಹೇಳಿದರು?

ಅವರ ಕಥೆ ಮೊದಲೇ ಯೋಚಿಸಿಕೊಂಡಿದ್ದ ಸುಳ್ಳಾಗಿತ್ತು: ಹೀಗೇ ಹೇಳಬೇಕೆಂದು ಅವರು ಮೊದಲೇ ನಿಶ್ಚಯಿಸಿಕೊಂಡಿದ್ದರು. ಅಪೊ 5:2,9

**5.** ಅನನೀಯ ಮತ್ತು ಸಫೈರಳು ಯಾರಿಗೆ ಸುಳ್ಳು ಹೇಳಿದರು? ಜನರು ಇಂದು ಸುಳ್ಳು ಹೇಳುವಾಗ, ಯಾರಿಗೆ ಸುಳ್ಳು ಹೇಳುವವರಾಗಿದ್ದಾರೆ?

ಪೇತ್ರನಿಗ ಎಂದು ಅವರ ಅಂದುಕೊಂಡಿದ್ದರು, ಆದರೆ ದೇವರಿಗೆ ಎಂದು ಅವನು ಹೇಳಿದನು.

ಅಪೊ 5:4

## ಆಟ: ಯುದ್ಧ – ಪಾಠ 4

ಸಾಮಗ್ರಿಗಳು

ವಿಜ಼ಲ್

ಆಟ ಆಡುವದು



ವಿದ್ಯಾರ್ಥಿಗಳು ಸಾಲಿನಲ್ಲಿ ನಿಂತು ಮುಂದಕ್ಕೆ ಮುಖ ಮಾಡಿರುತ್ತಾರೆ. (ಟೀಚರ್ ಮತ್ತು ವಿದ್ಯಾರ್ಥಿಗಳ ನಡುವೆ ಸುಮಾರು 12 ಮೀಟರ್ ಅಂತರ ಇರಬೇಕು) ಟೀಚರ್ ಮತ್ತೊಂದು ಕಡೆ ತಿರುಗಿಕೊಂಡು "ರನ್" ಎಂದು ಕೂಗುವರು. ಮಕ್ಕಳು ಟೀಚರ್ ಕಡೆಗೆ ಓಡಿ ಬರಬೇಕು. ಟೀಚರ್ "ಫ್ರೋಜನ್" ಎಂದು ಹೇಳಿದ ಕೂಡಲೇ ಮಕ್ಕಳು ಫ್ರೋಜನ್ ಆಗಬೇಕು. ಮತ್ತೆ "ತಿರುಗಿಕೊಳ್ಳಿರಿ" ಎಂದು ಹೇಳುವಾಗ ಅವರು ತಿರುಗಿಕೊಳ್ಳಬೇಕು ಹಾಗೂ "ರನ್" ಎಂದು ಹೇಳುವಾಗ ಇನ್ನೊಂದು ದಿಕ್ಕಿನಲ್ಲಿ ಓಡಬೇಕು. ಬೇರೆಬೇರೆ ವಿಷಯಗಳನ್ನು ಹೇಳುತ್ತಲೇ ಇರ್ರಿ (ನಿಧಾನವಾಗಿ ಓಡಿರಿ, ಜಿಗಿಯಿರಿ, ಇತ್ಯಾದಿ). ಮೊದಲನೆಯ ವಿದ್ಯಾರ್ಥಿ ಟೀಚರ್ ಬಳಿಗೆ ಬಂದ ಮೇಲೆ, ಪ್ರಕಟಿಸುವ ಸರದಿ ಅವನದ್ದಾಗುತ್ತದೆ ಮತ್ತು ಆಟ ಮುಂದುವರೆಯುತ್ತದೆ.

ಆಯ್ಕೆಗಳು

1. ಸೂಚನೆ ಕೊಡುವ ಮೊದಲು ವಿಜ಼ಲ್ ಊದಿರಿ, ಆಗ ಮಕ್ಕಳಿಗೆ ಏನು ಮಾಡಬೇಕೆಂದು ಕೇಳಿಸಿಕೊಳ್ಳಲು ಸಾಧ್ಯವಾಗುತ್ತದೆ (ನೀವು ಜೋರಾಗಿ ಕೂಗುವದೂ ತಪ್ಪುತ್ತದೆ).
2. ಒಂದುವೇಳೆ ನಿಮಗೆ ಹೆಚ್ಚು ಸ್ಥಳ ಇಲ್ಲದಿದ್ದರೆ, ಮಕ್ಕಳು ಓಡುವ ಬದಲು ನಡೆಯಬಹುದು.

## ಒಗಟುಗಳ ಉತ್ತರಗಳು – ಪಾಠ 4

| | | | | | | | | |
|---|---|---|---|---|---|---|---|---|
| ಅ | ಪೊ | ಸ್ತ | ಲ | ರು | ಹೆಂ | ತಿ | ತ್ರ | ರ |
| ಧಿ | ನ | ತ್ರಾ | ಹೆಂ | ವಿ | ದೇ | ವೇ | ಹ | ಣ |
| ರಾ | ತ್ರ | ನೀ | ಸ್ತಿ | ಪು | ವ | ಪೊ | ಹೂ | ತ್ರಾ |
| ರ | ತಿ | ಳ್ಳು | ಯ | ತ್ರಾ | ರು | ದೇ | ಣೆ | ತಿ |
| ವಿ | ಸ | ಣ | ಧಿ | ನು | ತ್ರಾ | ಷ | ಟ್ಟ | ತ್ರ |
| ಹೃ | ಸ್ತಿ | ಧೈ | ತ್ಮ | ಣ | ಆ | ಳ್ಳು | ರು | ಹೆಂ |
| ದೇ | ದ | ತ್ರಾ | ರ | ಪೊ | ಸ್ತಿ | ಧಿ | ವಿ | ರ |
| ಣ | ವಿ | ಯ | ಸು | ಳು | ಹೆಂ | ಡ | ತಿ | ಹ |
| ಪ | ತಿ | ವಿ | ಳ್ಳು | ರ | ದೇ | ತ್ರಾ | ಹೆಂ | ಣ |

ನಿಮ್ಮ ಜೀವಿತದಲ್ಲಿರುವ ದೇವರ ಕುರಿತಾದ 5 ಸತ್ಯಗಳನ್ನು ಬರೆಯಿರಿ.

ಆಲೋಚನೆಗಳು:

ದೇವರು ನನ್ನನ್ನು ನೋಡಿಕೊಳ್ಳುತ್ತಾನೆ.

ದೇವರು ನನಗೆ ಬಲವನ್ನು ಕೊಡುತ್ತಾನೆ.

ದೇವರು ನನ್ನ ಸಹಾಯಕನು.

ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ.

ದೇವರು ನನ್ನ ಜೀವಿತದ ಎಲ್ಲಾ ಸಮಯಗಳಲ್ಲಿಯೂ ನನ್ನ ಜೊತೆ ಇರುತ್ತಾನೆ.

ನಿಮ್ಮ ಜೀವಿತದಲ್ಲಿ ಸತ್ಯವೆಂಬ ನಡುಕಟ್ಟನ್ನು ಎಲ್ಲಿ ನೀವು ಧರಿಸಕೊಳ್ಳಬಹುದು ಎಂಬದಕ್ಕೆ 5 ಉದಾಹರಣೆಗಳನ್ನು ಬರಯಿರಿ.

ಆಲೋಚನೆಗಳು:

ಸ್ನೇಹಿತನು ಮಾಡುತ್ತಿರುವ ಕೆಟ್ಟ ಕಾರ್ಯಗಳು ನನಗೆ ಗೊತ್ತಾಗುವಾಗ.


ನನ್ನ ಟೀಚರ್ಸ್ ಗಳಿಗೆ ಸತ್ಯವನ್ನು ಹೇಳುವಾಗ.

ನಾನು ಪರೀಕ್ಷೆಯಲ್ಲಿ ಮೋಸ ಮಾಡಿದ್ದೇನೆಯೇ ಎಂದು ಅವರು ನನ್ನನ್ನು ಕೇಳುವಾಗ.

ಕಥೆಗಳನ್ನು ಊಹಿಸಿಕೊಳ್ಳದಿರುವಾಗ.

ನಾನು ತಪ್ಪು ಮಾಡುವಾಗ, ನನ್ನ ಅಪರಾಧವನ್ನು ಒಪ್ಪಿಕೊಳ್ಳುವಾಗ.





ದೇವರು ನನ್ನನ್ನು ಪ್ರೀತಿಸುತ್ತಾನೆ.

ದೇವರು ನನಗೆ ಬಲವನ್ನು ಕೊಡುತ್ತಾನೆ.
ದೇವರು ನನ್ನ ಸಹಾಯಕನು.
ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ.
ದೇವರು ನನ್ನ ಜೀವಿತದ ಎಲ್ಲಾ ಸಮಯಗಳಲ್ಲಿಯೂ ನನ್ನ ಜೊತೆ ಇರುತ್ತಾನೆ.

ಸ್ನೇಹಿತನು ಮಾಡುತ್ತಿರುವ ಕೆಟ್ಟ ಕಾರ್ಯಗಳು ನನಗೆ ಗೊತ್ತಾಗುವಾಗ.

ನನ್ನ ಟೀಚರ್ಸ್ ಗಳಿಗೆ ಸತ್ಯವನ್ನು ಹೇಳುವಾಗ.
ನಾನು ಪರೀಕ್ಷೆಯಲ್ಲಿ ಮೋಸ ಮಾಡಿದ್ದೇನೆಯೇ ಎಂದು ಅವರು ನನ್ನನ್ನು ಕೇಳುವಾಗ.
ಕಥೆಗಳನ್ನು ಊಹಿಸಿಕೊಳ್ಳದಿರುವಾಗ.
ನಾನು ತಪ್ಪು ಮಾಡುವಾಗ, ನನ್ನ ಅಪರಾಧವನ್ನು ಒಪ್ಪಿಕೊಳ್ಳುವಾಗ.

# ಪಾಠ 5

## ಶೀರ್ಷಿಕೆ – ಪಾಠ 5

ನೀತಿಯೆಂಬ ವಜ್ರಕವಚ

## ಸತ್ಯವೇದ ಕಥೆ – ಪಾಠ 5

ಕೊರ್ನೇಲ್ಯನು


ಅಪೊ 10:9-23

## ಪದಕಗಳು – ಪಾಠ 5

ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:



ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 5

ಸಿಪಾಯಿಗಳಾದ ಗಿಗಲ್ ಮತ್ತು ಡ್ಯೂಟಿಗೆ ಬೆಣಚುಕಲ್ಲು ಆವೃತ್ತವಾದ ನಡುವಂಗಿಗಳನ್ನು ಕೊಡಲಾಯಿತು. ಸಿಪಾಯಿ ಗಿಗಲ್ ಸಿಪಾಯಿ ಡ್ಯುಟಿಯೊಂದಿಗೆ ಆಟವನ್ನು ಪ್ರಾರಂಭಿಸಿ, ಅವರಿಬ್ಬರು ಒಬ್ಬರನ್ನೊಬ್ಬರು ತಮ್ಮ ನಡುವಂಗಿಗಳ ಮೇಲೆ ಹೊಡೆದಾಡಿಕೊಳ್ಳಲಾರಂಭಿಸಿದರು. ನಡುವಂಗಿ ಇರುವದರಿಂದ ಅವರಿಗೆ ನೋವಾಗುತ್ತಿರಲಿಲ್ಲ. ತರಬೇತಿಯ ಸಮಯದಲ್ಲಿ, ಮಿಲಿಟರಿ ಅಧಿಕಾರಿ ಅಪ್ರೈಟ್ ಅವರಿಗೆ ಮೆತ್ತಗಿರುವ "ಬೆಣಚುಕಲ್ಲುಗಳನ್ನು" ಕೊಟ್ಟು ಅವರನ್ನು ತಂಡಗಳಾಗಿ ವಿಭಾಗಿಸಿದರು. ಗಿಗಲ್ ತನ್ನ ನಡುವಂಗಿಯನ್ನು ಮರೆತುಹೋದರು. ತರಬೇತಿ ಪ್ರಾರಂಭವಾದಾಗ, ಮೆತ್ತಗಿರುವ ಬೆಣಚುಕಲ್ಲುಗಳಿಂದ ಆಕೆಗೆ ಏಟು ತಗಲುತ್ತಲೇ ಇದ್ದವು.

## ಕಂಠಪಾಠ ವಚನ – ಪಾಠ 5

"ಹಿಮ್ಮೆಟ್ಟದೆ ನಿಲ್ಲಲೇಬೇಕು. ಇದಕ್ಕಾಗಿ ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಿ. ನೀತಿಯೆಂಬ ರಕ್ಷಕವಚವನ್ನು ತೊಟ್ಟುಕೊಳ್ಳಿರಿ."

ಎಫೆಸಿಯರಿಗೆ **6:14b**

## ಮುಖ್ಯ ಪಾಠ – ಪಾಠ 5

**ಅಪೊ 10:9-23**

ಎಫೆಸ 6 ನೇ ಅಧ್ಯಾಯದಲ್ಲಿ ಕೊಡಲಾಗಿರುವ ಎರಡನೇ ಸರ್ವಾಯುಧ ನೀತಿಯೆಂಬ ವಜ್ರಕವಚ. ನೀತಿ ಎಂದರೆ ದೇವರ ಸ್ವಭಾವವನ್ನು ತೋರಿಸುವಂಥದ್ದು ಅಥವಾ ಒಳ್ಳೆಯ, ಸರಿಯಾದ ಮತ್ತು ನಂಬಿಗಸ್ತವಾದ ಕಾರ್ಯಗಳನ್ನು ಮಾಡುವಂಥದ್ದು. ದೇವರ ದೃಷ್ಟಿಗೆ ಸರಿಯಾಗಿರುವ ಕಾರ್ಯಗಳನ್ನು ಸತತವಾಗಿ ಮಾಡುವಂಥದ್ದು ನಮ್ಮ ವಜ್ರಕವಚವನ್ನು ಸರಿಯಾದ ಸ್ಥಳದಲ್ಲಿ ಇರಿಸುತ್ತದೆ. ದೇವರು ಸತ್ಯವೇದದಲ್ಲಿ ನಮಗೆ ಬುದ್ದಿವಂತರಾಗಿರ್ರಿ ಮತ್ತು ಸರಿಯಾದ ಕಾರ್ಯಗಳನ್ನು ಮಾಡಿರಿ ಎಂದು ಹೇಳಿದ್ದಾನೆ. ಈ ಕಾರ್ಯಗಳನ್ನು ನಾವು ಮಾಡುವಾಗ, ನಾವು ವಜ್ರಕವಚವನ್ನು ಧರಿಸಿಕೊಂಡಿದ್ದೇವೆ ಎಂದು ಭರವಸೆಯಿಂದರಬಹುದು ಮತ್ತು ನಮ್ಮ ಹೃದಯಗಳು ನಾವು ಯುದ್ಧದಲ್ಲಿರುವಾಗ ಸಂಪೂರ್ಣವಾಗಿ ರಕ್ಷಿಸಲ್ಪಡುತ್ತವೆ. ವಜ್ರಕವಚದ ವಿಷಯದಲ್ಲಿ ಅತ್ಯಂತ ಪ್ರಾಮುಖ್ಯವಾದ ಮತ್ತೊಂದು ಸಂಗತಿ ಇದೆ, ಪ್ರಾಮುಖ್ಯವಾಗಿರುವ ಅಂಗವಾದ ಹೃದಯವನ್ನು ಅದು ಮುಂಭಾಗದಲ್ಲಿ ಕಾಪಾಡುತ್ತದೆ. ಇದನ್ನು ಧರಿಸಿಕೊಂಡಿರುವಾಗ, ನಾವು ಗಾಯಗೊಂಡರೂ ಎದ್ದು ಹೋರಾಟವನ್ನು ಮುಂದುವರಸಬಹುದಾಗಿದೆ. ಆದರೂ, ನಾವು ಯುದ್ಧವನ್ನು ಎದುರಿಸಲೇಬೇಕು ಯಾಕಂದರೆ ವಜ್ರಕವಚವು ಮುಂಭಾಗದಲ್ಲಿ ಮಾತ್ರ ನಮಗೆ ರಕ್ಷಣೆಯನ್ನು ಕೊಡುತ್ತದೆ. ಒಂದುವೇಳೆ ನಾವು ಹಿಂದಿರುಗಿದರೆ ಅಥವಾ ಬೆನ್ನು ಕೊಟ್ಟು ಓಡಿದರ ಇದು ನಮ್ಮನ್ನು ರಕ್ಷಿಸಲಾರದು. ದೈವೀಕ ಸ್ವಭಾವ ಮತ್ತು ನೀತಿವಂತಿಕೆ ಎಂದರೆ ಏನು? ಇವು ನಮ್ಮಲ್ಲಿದೆಯೇ ಎಂದು ನಾವು ತಿಳಿದುಕೊಳ್ಳುವದು ಹೇಗೆ? ಸತ್ಯವೇದವು ಹೇಳುವದೇನೆಂದರೆ ಕೊರ್ನೇಲ್ಯನು ಭಕ್ತನು, ದೇವರಿಗೆ ಭಯಪಡುವವನು ಮತ್ತು ಜನರಿಗೆ ಬಹಳವಾಗಿ ದಾನಧರ್ಮ ಮಾಡುವವನು ಹಾಗೂ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುವವನಾಗಿದ್ದನು. ಯೆಹೂದ್ಯರೆಲ್ಲರೂ ಅವನನ್ನು ಗೌರವಿಸುತ್ತಿದ್ದರು ಎಂಬದಾಗಿಯೂ ಸತ್ಯವೇದವು ಹೇಳುತ್ತದೆ. ನೀವು ನೀತಿವಂತರಾಗಿದ್ದರೆ ಅದು ಇತರರಿಗೆ ಗೊತ್ತಾಗುತ್ತದೆ ಯಾಕಂದರೆ ಸಮಯದೊಂದಿಗೆ ಎಲ್ಲರೂ ಅದನ್ನು ನೋಡಬಹುದಾಗಿದೆ. ಕೊರ್ನೇಲ್ಯನು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡಿದ್ದನು. ಆ ಸಮಯದಲ್ಲಿ, ಯೆಹೂದ್ಯರು ಅನ್ಯರನ್ನು ಭೇಟಿ ಮಾಡುವದು ಅಥವಾ ಅವರೊಂದಿಗೆ ಸೇರಿಕೊಳ್ಳುವದು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿತ್ತು. (ಅಪೊ 10:28) ದೇವರು ಪೇತ್ರನಿಗೆ ಒಂದು ದರ್ಶನವನ್ನು ಕೊಟ್ಟನು ಆದ್ದರಿಂದ ಅವನು ಕೊರ್ನೇಲ್ಯನ ಬಳಿಗೆ ಹೋಗಿ ಅವನಿಗೆ ಸುವಾರ್ತೆ ಸಾರಿದನು. ಕೊರ್ನೇಲ್ಯನು ದೇವರಲ್ಲಿ ಭಯಭಕ್ತಿಯುಳ್ಳವನಾದ್ದರಿಂದ, (ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿದ್ದರೂ) ಅವನನ್ನು ಮತ್ತು ಅವನ ಕುಟುಂಬದವರನ್ನು ರಕ್ಷಣೆ ಮಾರ್ಗಕ್ಕೆ ನಡೆಸಲು ದೇವರು ಅಪೊಸ್ತಲನನ್ನು ಅವನ ಮನೆಗೆ ಕಳುಹಿಸಿದನು!

## ಬೂಟ್ ಕ್ಯಾಂಪ್ – ಪಾಠ 5



**ಅಸೈನ್ಮೆಂಟ್ – ಪಾಠ 5**

ಉತ್ತಮ ಜೀವನ ಶೈಲಿ ಮತ್ತು ಇತರರೊಂದಿಗೆ ನಡೆದುಕೊಳ್ಳುವ ರೀತಿಯಿಂದ ಗೌರವಕ್ಕೆ ಪಾತ್ರರಾಗಿರುವಂಥ ಯಾರು ನಿಮಗೆ ಗೊತ್ತಿದ್ದಾರೆ? (ಇಂದಿನ ಸತ್ಯವೇದದ ಕಥೆಯಲ್ಲಿ ಬರುವ ಕೊರ್ನೇಲ್ಯನ ಹಾಗೆ) ಅವರ ಒಳ್ಳೆಯ ಜೀವನದ ಕುರಿತು ಒಂದು ವಾಕ್ಯದಲ್ಲಿ ಬರೆಯಿರಿ ಮತ್ತು ಹೋಗಿ ಅವರಿಗೆ ಅದರ ಬಗ್ಗೆ ಹೇಳಿರಿ.

**ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 5**

ಅಪೊ 14-16 ಅಧ್ಯಾಯಗಳು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 5

"ನಾನು ಯಾವಾಗಲೂ ಒಳ್ಳೆಯ ಕಾರ್ಯಗಳನ್ನು ಮಾಡುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 5

1. ನಿಮ್ಮ ಜೀವಿತದ ಯಾವ ಪರಿಸ್ಥಿತಗಳಲ್ಲಿ ನೀವು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡಿದ್ದೀರಿ ಎಂದು ತೋರಿಸಿದ್ದೀರಿ ಮತ್ತು ಯಾವ ಪರಿಸ್ತಿತಿಯಲ್ಲಿ ಇಲ್ಲ ಎಂದು ತೋರಿಸಿದ್ದೀರಿ?

ಹೌದು: ರಸ್ತೆಯನ್ನು ದಾಟಲು ನೀವು ವೃದ್ಧನಿಗೆ ಸಹಾಯ ಮಾಡುತ್ತೀರಿ. ಮನೆಯನ್ನು ಶುಚಿಯಾಗಿಡಲು ನಿಮ್ಮ ತಾಯಿಗೆ ಸತತವಾಗಿ ಸಹಾಯ ಮಾಡುತ್ತೀರಿ. ಇಲ್ಲ: ಶಾಲೆಯಲ್ಲಿ ಚಿಕ್ಕ ಮಕ್ಕಳಿಗೆ ತೊಂದರೆ ಕೊಡುತ್ತೀರಿ. ನಿಮ್ಮ ಸಹೋದರನನ್ನು ಗೇಲಿ ಮಾಡುತ್ತೀರಿ. ನಿಮ್ಮ ಜೊತೆಯಲ್ಲಿ ಓದುವವರು ಪರೀಕ್ಷೆಯಲ್ಲಿ ಚೆನ್ನಾಗಿ ಬರಯದಿರುವಂತೆ ಮಾಡುತ್ತೀರಿ.

2. ನೀತಿವಂತಿಕೆಯನ್ನು ಹೇಗೆ ನಕಲು ಮಾಡಬಹುದು ಎಂಬದನ್ನು ವಿವರಿಸಿರಿ.

ನಿಜವಾದ ಹೆಸರುಗಳನ್ನು ಉಪಯೋಗಿಸದೆ, ಸಭೆಯ ಚಟುವಟಿಕೆಗಳಲ್ಲಿ ಉತ್ತಮವಾಗಿ ಭಾಗವಹಿಸುವ ಕುಟುಂಬದ ಬಗ್ಗೆ ವಿವರಿಸಿರಿ. ಮನೆಯಲ್ಲಿ ಅವರು ಒಬ್ಬರ ಮೇಲೊಬ್ಬರು ಕೂಗಾಡಿಕೊಳ್ಳುತ್ತಿರುತ್ತಾರೆ, ಜಗಳವಾಡುತ್ತಿರುತ್ತಾರೆ. ಹಣಕಾಸಿನ ವಿಷಯಲ್ಲಿ ಯಾರಿಗಾದರೂ ಮೋಸ ಮಾಡಬೇಕೆಂದು ಕೆಲವೊಮ್ಮೆ ಯೋಚಿಸುತ್ತಿರುತ್ತಾರೆ. ಅವರು ಕೆಟ್ಟ ಮಾತುಗಳನ್ನಾಡುತ್ತಿರುತ್ತಾರೆ ಮತ್ತು ಕರ್ತನ ನಾಮವನ್ನು ಅಯೋಗ್ಯ ಕಾರ್ಯಗಳಿಗೆ ಉಪಯೋಗಿಸುತ್ತಾರೆ.

3. ಅವಮಾನಕ್ಕೆ ಒಳಗಾಗುವ ಬದಲು ಯಾವ ಪರಿಸ್ಥಿತಿಗಳಲ್ಲಿ ನೀವು ಏನೂ ಮಾಡದೆ ಸುಮ್ಮನಿರುವ ಆಯ್ಕೆಯನ್ನು ಮಾಡಿಕೊಳ್ಳುತ್ತೀರಿ?

ಒಬ್ಬನಿಗೆ ಪ್ರೋತ್ಸಾಹ ಬೇಕಾಗಿರುವಾಗ ಅವನು ಪ್ರಸಿದ್ಧನಲ್ಲವಾದ್ದರಿಂದ ನೀವು ಪ್ರೋತ್ಸಾಹ ಕೊಡಲು ಮುಂದಾಗುವದಿಲ್ಲ. ಇತರೆ ವಿದ್ಯಾರ್ಥಿಗಳು ಜೊತೆಯಲ್ಲಿರುವದರಿಂದ ನೀವು ಯಾರಿಗೂ ಪ್ರಾರ್ಥನೆ ಮಾಡಲು ಮುಂದಾಗುವದಿಲ್ಲ.

4. ಪೇತ್ರನು ಯಾರ ಮನೆಗೆ ಹೋದನು? ಯಾಕೆ ಅದು ಸಹಜವಾದ ಕಾರ್ಯವಾಗಿರಲಿಲ್ಲ?

ದೇವರು ಅವನನ್ನು ಕೊರ್ನೇಲ್ಯನ ಮನೆಗೆ ಕಳುಹಿಸಿದನು. ಅವನು ಯೆಹೂದ್ಯನಾಗಿರಲಿಲ್ಲ ಮತ್ತು ಯೆಹೂದ್ಯರು ಸಹಜವಾಗಿ ಇತರರೊಂದಿಗೆ ಬೆರೆಯುತ್ತಿರಲಿಲ್ಲ.

5. ಕೊರ್ನೇಲ್ಯನು ಆ ಸ್ಥಳದಲ್ಲಿ ಜೀವಿಸತ್ತಿದ್ದ ಇತರರಗಿಂತ ಹೇಗ ಭಿನ್ನನಾಗಿದ್ದನು?

ಕೊರ್ನೇಲ್ಯನು ಪಟಾಲಮಿನ ಶತಾಧಿಪತಿಯಾಗಿದ್ದರೂ ಒಳ್ಳೆಯವನಾಗಿದ್ದನು. ಅವನು ತನ್ನ ಕುಟುಂಬದವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಸ್ಥಳೀಯ ಯೆಹೂದ್ಯರಿಗೆ ಸಹಾಯ ಮಾಡುವ ಮೂಲಕ ಅವನು ದೇವರನ್ನು ಗೌರವಿಸುತ್ತಿದ್ದನು.


## ಆಟ: ರಕ್ಷಣೆ – ಪಾಠ 5

ಸಾಮಗ್ರಿಗಳು

ಮಾಸ್ಕಿಂಗ್ ಟೇಪ್, ಪ್ರತಿಯೊಬ್ಬ ವಿದ್ಯಾರ್ಥಿಗೆ ಉಪಯೋಗಿಸಿ ಬಿಸಾಡಬಹುದಾದ ಲೋಟ, 1-2 ಚೆಂಡುಗಳು

ಸಿದ್ಧತೆ

ಆಟದ ಮೈದಾನದ ನಡುವೆ ಟೇಪ್ ನಿಂದ ಗೆರೆ ಹಾಕುವ ಮೂಲಕ ವಿಭಾಗ ಮಾಡಿರಿ.




ಆಟ ಆಡುವದು


1. ನಿಮ್ಮ ತರಗತಿಯನ್ನು ಎರಡು ಭಾಗ ಮಾಡಿರಿ ಮತ್ತು ಗೆರೆಯ ಎರಡೂ ಕಡೆಗಳಲ್ಲಿ ಅವರನ್ನು ನಿಲ್ಲಿಸರಿ. ಪ್ರತಿಯೊಬ್ಬ ವಿದ್ಯಾರ್ಥಗಳಿಗೆ ಲೋಟವನ್ನು ಕೊಡಿರಿ. ಅವರು ತಮ್ಮ ಪಕ್ಕದಲ್ಲಿ ಲೋಟವನ್ನು ಎಲ್ಲಿಡಬೇಕೆಂದು ಆಯ್ಕೆ ಮಾಡಿಕೊಳ್ಳಲಿ. (ಗೆರೆಗಿಂತ 6 ಮೀಟರ್ ದೂರ ಹೋಗಬಾರದು). ನಂತರ ವಿದ್ಯಾರ್ಥಿಗಳು ಗೆರ ಮತ್ತ ತಮ್ಮ ಲೋಟದ ನಡುವೆ ನಿಲ್ಲಬೇಕು.
2. ಯಾವುದಾದರು ಒಂದು ತಂಡದವರ ಕೈಗೆ ಚೆಂಡನ್ನು ಕೊಡಿರಿ. ಆ ತಂಡದಲ್ಲಿ ಭಾಗಿಯಾಗಿರುವಾತನು ಗೆರೆಯ ಮತ್ತೊಂದು ಕಡೆಗೆ ಉರುಳಿಸುತ್ತಾ ಇನ್ನೊಂದು ತಂಡದವರ ಲೋಟಗಳನ್ನು ಬೀಳಿಸಲು ಪ್ರಯತ್ನಿಸಬೇಕು ಆಗ ಮತ್ತೊಂದು ಕಡೆ ಭಾಗಿಯಾಗಿರುವವರು ತಮ್ಮ ಕೈಗಳಿಂದ ಮತ್ತು ಕಾಲುಗಳಿಂದ ತಮ್ಮ ಲೋಟ ಬೀಳದಂತೆ ನೋಡಿಕೊಳ್ಳಬೇಕು. ಯಾವ ವಿದ್ಯಾರ್ಥಿಗೆ ಚೆಂಡು ದೊರೆಯುತ್ತದೆಯೋ ಅವನು ಅದನ್ನು ಬೇರೆ ದಿಕ್ಕಿಗೆ ಕಳುಹಿಸುತ್ತಾನೆ. ಪ್ರತಿಬಾರಿ ಲೋಟ ಬೀಳುವಾಗಲೂ, ಆ ವಿದ್ಯಾರ್ಥಿ ಆಟದಿಂದ ಹೊರಗೆ ಹೋಗುತ್ತಾನೆ ಮತ್ತು ತನ್ನ ಲೋಟದೊಂದಿಗೆ ಪಕ್ಕದಲ್ಲಿ ಕಾಯುತ್ತಾನೆ. ಕೆಲವು ನಿಮಿಷಗಳು ಆಟ ಆಡಿದ ನಂತರವೂ ಯಾವುದೇ ಲೋಟ ಬೀಳಲಿಲ್ಲವೆಂದರೆ, ಇನ್ನೊಂದು ಚೆಂಡು ತೆಗೆದುಕೊಳ್ಳಿರಿ ಆಗ ಒಂದೇ ಸಮಯದಲ್ಲಿ ಎರಡು ಚೆಂಡಿನೊಂದಿಗೆ ಆಡಬಹುದು. 5 ನಿಮಿಷದ ನಂತರ ಆಟವನ್ನು ಮುಗಿಸಿರಿ ಮತ್ತು ವಿದ್ಯಾರ್ಥಿಗಳು ಮತ್ತೆ ಹೊಸದಾಗಿ ಪ್ರಾರಂಭಿಸಲಿ.

ಆಯ್ಕೆ

ವಿದ್ಯಾರ್ಥಿಗಳ ಸಂಖ್ಯೆಗಿಂತಲೂ ಹೆಚ್ಚಿನ ಲೋಟಗಳನ್ನು ಉಪಯೋಗಿಸಬಹುದು ಆಗ ಅವರು ಹೆಚ್ಚಿನ ಲೋಟಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ.

## ಒಗಟಿನ ಉತ್ತರಗಳು – ಪಾಠ 5





# ಪಾಠ 6

## ಶೀರ್ಷಿಕೆ – ಪಾಠ 6


ಸಮಾಧಾನದ ವಿಷಯವಾದ ಸುವಾರ್ತೆ

## ಸತ್ಯವೇದ ಕಥೆ – ಪಾಠ 6

ಫಿಲಿಪ್ಪನು ಮತ್ತು ಐಥಿಯೊಪ್ಯದವನು

ಅಪೊ 8:26-40

## ಪದಕಗಳು – ಪಾಠ 6




ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:




ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.




## ನಾಟಕ – ಪಾಠ 6

ಇಂದ ಸಿಪಾಯಿ ಗಿಗಲ್ ಸತತವಾಗಿ ದೂರುಗಳನ್ನು ಹೇಳುತ್ತಾ, ಎಲ್ಲಾ ವಿಷಯಗಳಲ್ಲಿಯೂ ಚಿಂತಿಸುತ್ತಾ ಇದ್ದಾಳೆ. ಸಿಪಾಯಿ ಗಿಗಲ್ ಗೆ ಯುದ್ಧದ ಸಮಯದಲ್ಲಿ ಹಾಕಿಕೊಳ್ಳುವ ಬೂಟ್ ಗಳನ್ನು ಮರತು ಬಂದಿದ್ದಾಳೆ, ತರಬೇತಿಯ ಸಮಯದಲ್ಲಿ ಆಕೆಯ ಬರೀ ಕಾಲುಗಳಿಗೆ ಗಾಯವಾಗುತ್ತಿದೆ, ಆದ್ದರಿಂದ ಆಕೆ ದೂರು ಹೇಳುತ್ತಿದ್ದಾಳೆ ಮತ್ತು ಹೆಚ್ಚಾಗಿ ಚಿಂತಿಸುತ್ತಿದ್ದಾಳೆ. ಆಗ ಮಿಲಿಟರಿ ಅಧಿಕಾರಿ ಅಪ್ಪೈಟ್ ಸಿಪಾಯಿ ಗಿಗಲ್ ಗೆ ಸೇನಾಧೀಶ್ವರನಾದ ಯೇಸು ಕ್ರಿಸ್ತನು ನಿನಗಾಗಿ ಚಿಂತಿಸುತ್ತಾನೆ ಎಂದು ಹೇಳಿ ದೂರು ಹೇಳುವದನ್ನು ನಿಲ್ಲಿಸಿ ಹೋಗಿ ನಿನ್ನ ಬೂಟ್ ಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದರು.

## ಕಂಠಪಾಠ ವಚನ – ಪಾಠ 6

"ಶಾಂತಿಯ ಶುಭಸಂದೇಶವನ್ನು ಸಾರಲು ಶ್ರದ್ಧೆಯೆಂಬ ಪಾದರಕ್ಷೆಯನ್ನು ಮೆಟ್ಟುಕೊಳ್ಳಿರಿ." ಎಫೆಸಿಯರಿಗೆ 6:15

## ಮುಖ್ಯ ಪಾಠ – ಪಾಠ 6

**ಅಪೊ 8:26-40**

ಈಗ ನಾವು ನಮ್ಮ ಕೆರಗಳನ್ನು ಮೆಟ್ಟಿಕೊಳ್ಳುವ ಸಮಯವಾಗಿದೆ, ಇದರಿಂದ ಸಿದ್ಧರಾಗಿ ಹೊರಡಲು ಸಾಧ್ಯವಾಗುತ್ತದೆ! ಇದರ ಅರ್ಥ ನಾವು ಸುವಾರ್ತೆ ಸಾರಲು ಸಿದ್ಧರಾಗಿದ್ದೇವೆ, ಅಥವಾ ಯಾವುದೇ ಕ್ಷಣದಲ್ಲಾದರೂ ವಿಧೇಯರಾಗಲು ಸಿದ್ಧರಾಗಿದ್ದೇವೆ ಅಥವಾ ಒಳ್ಳೆಯ ಕಾರ್ಯಗಳನ್ನು ಮಾಡುವ ಸಲುವಾಗಿ ಹೋಗಲು ಸಿದ್ಧರಾಗಿದ್ದೇವೆ.

ನಾವು ಪಾದಗಳಿಗೆ ಏನು ಹಾಕಿಕೊಳ್ಳುತ್ತೇವೆ ಎಂಬದು ನಮ್ಮ ಸ್ಥಿರತೆ ಹಾಗೂ ಚಲನಶೀಲತೆಯನ್ನು ದೃಢಪಡಿಸುತ್ತದೆ. ನಾವು ಯಾವ ರೀತಿಯ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತೇವೆ ಎಂಬದು ಅನಾಯಾಸವಾಗಿ ಎಷ್ಟು ದೂರ ನಡೆಯಬಹುದು ಅಥವ ಓಡಬಹುದು ಎಂಬದರ ಮೇಲೆ  ಪರಿಣಾಮ ಬೀರುತ್ತದೆ. ತಪ್ಪಾದ ಪಾದರಕ್ಷೆಗಳನ್ನು ಆಯ್ಕೆಮಾಡಿಕೊಳ್ಳುವದರಿಂದ ಅವು ನಮ್ಮನ್ನು ವಿಕಲರನ್ನಾಗಿಸುತ್ತವೆ, ನಿಧಾನರನ್ನಾಗಿಸುತ್ತವೆ ಮತ್ತು ನಾವು ಹೋರಾಟದಿಂದ ಹಿಂದೆ ಸರಿಯುವಂತೆ ಮಾಡುತ್ತದೆ. ಬರೀಕಾಲುಗಳಲ್ಲಿರುವ ಸೈನಿಕನು ನಿಜವಾದ ತೊಂದರೆಗಳಿಗೆ ಒಳಗಾಗುತ್ತಾನೆ. ನಾವು ರಣರಂಗದಲ್ಲಿರುವಾಗ ಎಲ್ಲಿ ಹೆಜ್ಜೆಯನ್ನಿಡುತ್ತೇವೆ ಎಂಬದರ ಬಗ್ಗೆ ಕಡೆಯದಾಗಿ ಚಿಂತಿಸುವವರಾಗಿರಬೇಕು. ನಾವು ನಮ್ಮ ಪೂರ್ಣ ಗಮನವನ್ನು ಯುದ್ಧದ ಕಡೆಗೆ ಹರಿಸುವಾಗ ಯಾವುದೇ ಭಯವಿಲ್ಲದೆ ಸ್ವತಂತ್ರರಾಗಿ ಹೆಜ್ಜೆಯನ್ನಿಡಲು ಪಾದರಕ್ಷೆಗಳು ನಮಗೆ ಸಹಾಯ ಮಾಡುತ್ತವೆ. ದೇವರ ರಾಜ್ಯದ ಸುವಾರ್ತೆಯನ್ನು ಪ್ರಕಟಿಸುವದಕ್ಕಾಗಿ ಯೇಸು ಕ್ರಿಸ್ತನ ದೇಹವು ಕಳುಹಿಸಲ್ಪಟ್ಟಿದೆ, ಅದುವೇ ಇಡೀ ಲೋಕಕ್ಕೆ ಆತನ ಸಮಧಾನವನ್ನು ಪ್ರಚುರಪಡಿಸುತ್ತದೆ. ನಾವು ನಮ್ಮ ಪಾದರಕ್ಷೆಗಳನ್ನು ಹಾಕಿಕೊಂಡಿರುವಾಗ, ಮುಂದೆ ಸಾಗಲು ಮತ್ತು ಇತರರಿಗೆ ಸುವಾರ್ತೆಯನ್ನು ಸಾರಲು ಸಿದ್ಧರಾಗಿರುತ್ತೇವೆ.

ಅಪೊಸ್ತಲರ ಕೃತ್ಯಗಳಲ್ಲಿರುವ ಫಿಲಿಪ್ಪನ ಕಥೆ ಸುವಾರ್ತೆ ಸಾರಲು ಸಿದ್ಧರಾಗಿರಬೇಕು ಎಂಬದನ್ನು ತಿಳಿಸುತ್ತದೆ. ಎಲ್ಲಿಂದಲೋ ದೇವದೂತನು ಅವನಿಗೆ ಪಟ್ಟಣದ ಯಾವ ದಾರಿಯಲ್ಲಿ ಹೋಗಬೇಕು ಎಂಬ ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟು ಎದ್ದು ಹೊರಡು ಎಂದು ಹೇಳಿದನು. ಅವನು ಅಲ್ಲಿಗೆ ತಲುಪಿದಾಗ, ಒಂದು ವಾಹನದ ಹಿಂದೆ ಓಡು ಎಂಬದಾಗಿ ಹೇಳಿದನು. ಹಾಗೆಯೇ ಅವನು ಓಡುತ್ತಾ ವಾಹನದಳಗೆ  ಕುಳಿತುಕೊಂಡಿರವವನಿಗೆ ನೀನು ಓದತ್ತಿರುವದು ನಿನಗೆ ತಿಳಿಯುತ್ತದೋ ಎಂದು  ಕೇಳಿದನು, ಓದುತ್ತಿದ್ದವನು ಅವನನ್ನು ತನ್ನ ವಾಹನ ಹತ್ತುವಂತೆ ಹೇಳಿದನು, ಕೂಡಲೇ ಫಿಲಿಪ್ಪನು ಅವನ ಸಂಗಡ ಕುಳಿತುಕೊಂಡು ಅವನಿಗೆ ಸುವಾರ್ತೆ ಹೇಳಿದನು. ಆ ಐಥಿಯೊಪ್ಯದವನು ಯೇಸು ಕ್ರಿಸ್ತನನ್ನು ಅಂಗೀಕರಿಸಕೊಳ್ಳಲು ತೀರ್ಮಾನಿಸಿದನು ಮತ್ತು ಅಲ್ಲಿಯೇ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ತನ್ನ ವಾಹನವನ್ನು ನಿಲ್ಲಿಸಿದನು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು, ಆದರೆ ಅವರಿಬ್ಬರು ನೀರಿನಿಂದ ಹೊರಗೆ ಬಂದ ಕೂಡಲೇ ಫಿಲಿಪ್ಪನು ಕಣ್ಮರೆಯಾದನು! ಸುವಾರ್ತೆ ಸಾರುವದನ್ನು ಮುಂದುವರೆಸಲು ದೇವರಾತ್ಮನು ಫಿಲಿಪ್ಪನನ್ನು ಬೇರೊಂದು ಸ್ಥಳಕ್ಕೆ ಕರದುಕೊಂಡು ಹೋದನು. ಸುವಾರ್ತೆ ಸಾರಲು ಬಯಸುತ್ತಾ ಸಿದ್ಧನಾಗಿದ್ದವನ ಈ ನಿಜ ಕಥಯು ಅದ್ಭುತವಾದದ್ದಾಗಿದೆ!

## ಬೂಟ್ ಕ್ಯಾಂಪ್ – ಪಾಠ 6

**ಅಸೈನ್ಮೆಂಟ್ – ಪಾಠ 6**

ಇತರರಿಗೆ ಸುವಾರ್ತೆ ಹೇಳಲು ಸಿದ್ಧರಾಗದೆ ಇರುವಾಗ ಹೇಗಿರುತ್ತದೆ ಎಂಬದನ್ನು ತಿಳಿದುಕೊಳ್ಳುವ ಸಮಯ ಬಂದಿದೆ. ಮೊದಲನೆಯದಾಗಿ, ನೀವು ಚಪ್ಪಲಿ ಅಥವಾ ಶೂ ಹಾಕಿಕೊಳ್ಳದೆ ರಸ್ತೆಯಲ್ಲಿ ಓಡುವದಾದರೆ ಹೇಗಿರುವದೆಂದು ಊಹಿಸಿಕೊಳ್ಳಿರಿ. ಅಯ್ಯೋ! ನಂತರ, ಕ್ರೈಸ್ತನಾಗುವದು ಹೇಗೆ ಎಂದು ನಿಮ್ಮನ್ನು ಕೇಳುವವರಿಗ ನೀವು ಏನು ಹೇಳುವಿರಿ ಎಂಬದನ್ನು ಬರೆಯಿರಿ.



ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 6

ಅಪೊ 17-19 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 6

"ನಾನು ದೇವರೊಂದಿಗೆ ಒಳ್ಳೆಯ ಸಂಬಂಧವುಳ್ಳವನಾಗಿರುವ ಆಯ್ಕೆ ಮಾಡಿಕೊಂಡಿದ್ದೇನೆ ಮತ್ತು ಯಾವಾಗಲೂ ಆತನ ಸೇವೆ ಮಾಡಲು ಸಿದ್ಧನಾಗಿರುತ್ತೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 6

1. ಮುಂಚಿತವಾಗಿಯೇ ಸಿದ್ಧತೆಗಳನ್ನು ಮಾಡಿಕೊಳ್ಳದೆ, ಯಾವ ಪರಿಸ್ಥಿತಿಯಲ್ಲಿ ಕೂಡಲೇ ಸುವಾರ್ತೆಯನ್ನು ಹಂಚಿಕೊಳ್ಳಲು ನೀವು ಬಯಸುತ್ತೀರಿ?

ಉದಾಹರಣೆಗಳು: ರೈಲಿನಲ್ಲಿ ನಿಮ್ಮ ಪಕ್ಕ ಕುಳಿತುಕೊಂಡಿರುವ ವ್ಯಕ್ತಿ ಸತ್ಯವೇದದ ಕುರಿತು ಪ್ರಶ್ನೆಗಳನ್ನು ಕೇಳುತ್ತಾರೆ. ನಿಮ್ಮ ಸ್ನೇಹಿತನು ಬಹಳ ಬೇಸರಗೊಂಡು ಸಾಯುವ ಬಗ್ಗೆ ಯೋಚಿಸುತ್ತಿರುತ್ತಾನೆ. ಶಾಲೆಯಲ್ಲಿ ನಿಮ್ಮ ಟೀಚರ್ ದೇವರೇ ಇಲ್ಲ ಎಂದು ಹೇಳುತ್ತಾರೆ.

2. ಎಚ್ಚರಿಕೆ ಕೊಡದೆಯೇ ಒಂದುವೇಳೆ ತರಗತಿಯನ್ನು ಮುನ್ನಡೆಸಬೇಕಾದರೆ ಯಾವ ವಿಷಯವನ್ನು ಕಲಿಸುವಿರಿ?

ಸತ್ಯವೇದದ ಯಾವ ವಿಷಯಗಳನ್ನು ಕಲಿಸಲು ಬಯಸುವಿರಿ ಎಂಬದಾಗಿ ಮಕ್ಕಳನ್ನು ಕೇಳುವದು ಒಳ್ಳೆಯ ಪ್ರಶ್ನೆಯಾಗದೆ. ಚರಿತ್ರೆಯಾದ್ಯಂತ ಇತರರೊಂದಿಗೆ ಮಾತನಡುವಂತೆ ದೇವರು ಅವರ ವಯಸ್ಸನವರನ್ನೇ ಉಪಯೋಗಿಸಿದ್ದಾನೆ.

3. ಭಯದ ಸುವಾರ್ತೆಗೆ ಹೋಲಿಸಿದರೆ "ಸಮಾಧಾನದ" ಸುವಾರ್ತೆ ಏನಾಗಿದೆ?

ಸತ್ಯವಾಗಿ  ಹೇಳುವದಾದರೆ, ನರಕದ ಬೆಂಕಿಯಿಂದ ತಪ್ಪಿಸಿಕೊಳ್ಳಲು ರಕ್ಷಣೆ ಹೊಂದುವದೊಂದೇ ಮಾರ್ಗವೆಂದು ಸುವಾರ್ತೆ ಹೇಳುತ್ತದೆ. ಜನರಿಗೆ ಸಾಯುವದೆಂದರೆ ಭಯ, ಆದ್ದರಿಂದ  ಹೆದರಿಕೆಯ ನಿಮಿತ್ತ ಸುವಾರ್ತೆಯನ್ನು ಕೇಳಿಸಿಕೊಳ್ಳುತ್ತಿದ್ದಾರೆ. ಸುವಾರ್ತೆಗನುಸಾರ ಜೀವಿಸುವದೇ ಉತ್ತಮ ಎಂದು ಹೇಳುವದೂ ಸತ್ಯವಾದ ಸಂಗತಿಯಾಗಿದೆ. ನಮ್ಮ ಸುತ್ತಮುತ್ತಲು ಏನೇ ಸಂಭವಿಸಿದರೂ ನಾವು ಸಮಾಧಾನವನ್ನು ಅನುಭವಿಸಬಹುದಾಗಿದೆ. ದೇವರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯನ್ನು ನಾವು ಅನುಭವಿಸಬಹುದಾಗಿದೆ.

4. ಐಥಿಯೊಪ್ಯದವನು ಫಿಲಿಪ್ಪನಿಗೆ ಏನೆಂದು ಕೇಳಿದನು?

ತಾನು ಓದುತ್ತಿರುವ ವಾಕ್ಯಗಳ ಅರ್ಥವೇನೆಂದು ಕೇಳಿದನು.

5. ಐಥಿಯೊಪ್ಯದವನು ನೀರನ್ನು ನೋಡಿದಾಗ ಏನೆಂದು ಹೇಳಿದನು?

ದೀಕ್ಷಾಸ್ನಾನ


## ಆಟ: ರಕ್ಷಣೆ – ಪಾಠ 6

ಸಾಮಗ್ರಿಗಳು

ಮಾಸ್ಕಿಂಗ್ ಟೇಪ್ ಅಥವಾ ಸ್ಟ್ರಿಂಗ್

ಸಿದ್ಧತೆ

ಒಂದಕ್ಕಿಂತ ಒಂದು ಹೆಚ್ಚುಕಡಿಮೆ ಆರು ಮೀಟರ್ ದೂರ ಮತ್ತು ಮೂರು ಮೀಟರ್ ಅಗಲವಿರುವ ಎರಡು ಸಮಾಂತರವಿರುವ ಗೆರೆಗಳನ್ನು ಟೇಪ್ ಮೂಲಕ ಹಾಕಿರಿ.



ಆಟ ಆಡುವದು

ಇತರರು ಓಡುವಾಗ ಮಧ್ಯದಲ್ಲಿ ಯಾವ ವಿದ್ಯಾರ್ಥಿ ನಿಲ್ಲಬೇಕೆಂದು ಮೊದಲೇ ನಿಶ್ಚಯಿಸಿರಿ. ಅವನು ಯಾರನ್ನೆಲ್ಲಾ ಮುಟ್ಟುತ್ತಾನೋ ಅವರೆಲ್ಲರೂ ತಾವಿರುವ ಸ್ಥಳದಲ್ಲಿಯೇ ಫ್ರೀಜ಼ ಆಗಬೇಕು ಮತ್ತು ಅವರು ಅಲ್ಲಿ ತಮ್ಮ ತಲೆ, ಭುಜಗಳು, ಮೊಣಕಾಲುಗಳು ಮತ್ತು ಪಾದಗಳನ್ನು ಮುಟ್ಟುತ್ತಾ ನಿಂತಿರಬೇಕು. ಓಡುತ್ತಿರುವ ಮಕ್ಕಳು ಮುಟ್ಟಿಸಿಕೊಳ್ಳದಂತೆ ಹಾಗೂ ಫ್ರೋಜನ್ ಆಗದಂತೆ ಎಚ್ಚರವಾಗಿರಬೇಕು, ಆದರೆ ಈಗಾಗಲೇ ಫ್ರೋಜನ್ ಆಗಿರುವವರನ್ನು ಮುಟ್ಟಿ ತಮ್ಮನ್ನು ರಕ್ಷಿಸಿಕೊಳ್ಳಬಹುದು ಹಾಗೂ ಇತರರೊಂದಿಗೆ ಓಟವನ್ನು ಮುಂದುವರೆಸಬಹುದು.

ಅವರು ಗೆರೆಯ ಹತ್ತಿರಕ್ಕೆ ಬಂದಾಗ, ಮುಂದಿನ ಗೆರೆಯ ಹತ್ತಿರಕ್ಕೆ ಹೋಗಲು ಹೇಳುವ ತನಕ ಕಾಯಬೇಕು ಮತ್ತು ನೇಮಿಸಿರುವ ಹುಡುಗನನ್ನು ಬದಲಾಯಿಸಿ, ಮತ್ತೊಬ್ಬನನ್ನು ನೇಮಿಸಿ ಆಟವನ್ನು ಮುಂದುವರೆಸಬೇಕು.


ಆಯ್ಕೆಗಳು


ಗೆರೆಗಳ ಮಧ್ಯದಲ್ಲಿ ನಿಲ್ಲುವ ವಿದ್ಯಾರ್ಥಿಯನ್ನು ಪ್ರತಿಸಲ ಬದಲಾಯಿಸುವಾಗಲೂ, ನೇಮಕಗೊಂಡಿದ್ದ ವಿದ್ಯಾರ್ಥಿ ಪಾಲಿಸುತ್ತಿದ್ದ ಸೂಚನೆಗಳನ್ನು ನೀವು ತಿದ್ದಬಹುದು.

ಅವುಗಳಲ್ಲಿ ಒಂದು ಸಲಹೆ ಏನೆಂದರೆ ಅವನು ತನ್ನ ಬೆರಳುಗಳನ್ನು ಆಡಿಸುತ್ತಿರಬೇಕು ಅಥವಾ ತನ್ನ ಸ್ಥಳದಲ್ಲಿಯೇ ಮಾರ್ಚ್ ಮಾಡುವದನ್ನು ಮುಂದುವರೆಸಬೇಕು.

## ಒಗಟಿನ ಉತ್ತರಗಳು – ಪಾಠ 6









# ಪಾಠ 7

## ಶೀರ್ಷಿಕೆ – ಪಾಠ 7


ನಂಬಿಕೆಯೆಂಬ ಗುರಾಣಿ

## ಸತ್ಯವೇದ ಕಥೆ – ಪಾಠ 7

ಪೌಲ ಮತ್ತು ಹಡಗು ಒಡೆದುಹೋದದ್ದು


ಅಪೊ 27:21-37, 28:1

## ಪದಕಗಳು – ಪಾಠ 7



ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:







ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 7

ಇಂದು ಮಿಲಿಟರಿ ಅಧಿಕಾರಿ ಅಪ್ಪೈಟ್ ಸಿಪಾಯಿಗಳಾದ ಡ್ಯೂಟಿ ಮತ್ತು ಗಿಗಲ್ ಗೆ ಹೊಸ ಗುರಾಣಿಗಳನ್ನು ಕೊಟ್ಟರು. ತರಬೇತಿಯ ಸಮಯದಲ್ಲಿ ತಮ್ಮ ಮೇಲೆ ಸಿಡಿಸಲಾಗುವ ನೀರಿನಿಂದ ರಕ್ಷಿಸಿಕೊಳ್ಳಲು ಸಿಪಾಯಿಗಳು ಗುರಾಣಿಗಳನ್ನು ಉಪಯೋಗಿಸುತ್ತಾರೆ. ಸಿಪಾಯಿ ಡ್ಯೂಟಿ ಉತ್ತಮವಾಗಿ ಗುರಾಣಿಯನ್ನು ಉಪಯೋಗಿಸುತ್ತಾ ಹೆಚ್ಚು ಒದ್ದೆಯಾಗದೆ ಕೋರ್ಸ್ ಮುಗಿಸಿದರು. ಗಿಗಲ್ ತಮ್ಮ ಗುರಾಣಿಯನ್ನು ಮರೆತುಹೋದರು ಮತ್ತು ಸಂಪೂರ್ಣವಾಗಿ ಒದ್ದೆಯಾದರು.

## ಕಂಠಪಾಠ ವಚನ – ಪಾಠ 7

"ಸತತವೂ ವಿಶ್ವಾಸವೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ. ಹೀಗೆ ಸೈತಾನನ ಅಗ್ನಿಬಾಣಗಳನ್ನೆಲ್ಲಾ ನಂದಿಸಲು ಶಕ್ತರಾಗುವಿರಿ."

ಎಫೆಸಿಯರಿಗೆ **6:16**

## ಮುಖ್ಯ ಪಾಠ – ಪಾಠ 7

ಅಪೊ **27:21-37, 28:1**


ಇಂದು ನಾವು ನಂಬಿಕೆಯೆಂಬ ಗುರಾಣಿಯ ಬಗ್ಗೆ ಕಲಿತುಕೊಳ್ಳುವವರಾಗಿದ್ದೇವೆ, ಇದು ರಕ್ಷಣೆಯನ್ನು ಒದಗಿಸುವ ದೊಡ್ಡ ಆಯುದ್ಧವಾಗಿದೆ ಯಾಕಂದರೆ ನಾವು ಇದನ್ನು ಸುತ್ತಲೂ ಉಪಯೋಗಿಸಬಹುದು ಮತ್ತು ನಮ್ಮನ್ನು ನಿರ್ದಿಷ್ಟವಾದ ಆಕ್ರಮಣಗಳಿಂದ ರಕ್ಷಿಸಿಕೊಳ್ಳಬಹುದು. ಇದರಿಂದ ನಾವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವೆವು ಎಂದು ಸತ್ಯವೇದವು ಹೇಳುತ್ತದೆ. "ಒಂದುವೇಳೆ" ಬಾಣಗಳು ಬಂದರೆ ಎಂಬದಾಗಿ ಅಲ್ಲ ಬದಲಾಗಿ "ಅವುಗಳು" ಎದುರಾಗುವಾಗ ನಾವು ಅವುಗಳನ್ನು ಎದುರಿಸಲು ಶಕ್ತರಾಗಿರುವೆವು ಎಂದು ಹೇಳುತ್ತದೆ. ಸತ್ಯವೇನೆಂದರೆ ವೈರಿಯು ನಮ್ಮ ಮೇಲೆ ಎಡಬಿಡದೆ ಆಕ್ರಮಣ ಮಾಡುತ್ತಿದ್ದಾನೆ. ನಿಮ್ಮ ವೈರಿಯು ಅಗ್ನಿ ಬಾಣಗಳನ್ನು ನಿಮ್ಮ ಮೇಲೆ ಎಸೆಯುವ ಮೂಲಕ ನಿಮ್ಮ ಗಮನವನ್ನು ಬೇರೆ ಕಡೆಗೆ ತಿರುಗಿಸಲು ಮತ್ತು ನಿಮ್ಮನ್ನು ಆಶ್ಚರ್ಯಚಕಿತರನ್ನಾಗಿಸಲು ಬಯಸುತ್ತಾನೆ. ಆತನು ನಿಮಗಾಗಿಯೇ ತನ್ನ ಯೋಜನೆಗಳನ್ನು ರೂಪಿಸಿಕೊಂಡಿದ್ದಾನೆ. ಅವನು ನಿಮ್ಮ ಅಭ್ಯಾಸಗಳನ್ನು ತಿಳಿದುಕೊಂಡಿದ್ದಾನೆ, ನಿಮ್ಮ ಹೆದರಿಕೆಗಳು ಮತ್ತು ಬಲಹೀನತೆಗಳನ್ನು ಬಲ್ಲವನಾಗಿದ್ದಾನೆ, ಹಾಗೂ ಆ ವಿಷಯಗಳ ಮೇಲೆ ತನ್ನ ಬಾಣಗಳನ್ನು ಗುರಿಯಿಟ್ಟು ಎಸೆಯುತ್ತಾನೆ.

ಆತನ ಆತ್ಮೀಕ ರಾಜ್ಯವನ್ನು ನೋಡಲು ನಮ್ಮಿಂದ ಆಗುವದಲ್ಲವಾದರೂ, ದೇವರನ್ನು ಮತ್ತು ಆತನ ವಾಕ್ಯಗಳನ್ನು ನಂಬುವದೇ ನಂಬಿಕೆಯಾಗಿದೆ. ದೇವರನ್ನು ನೋಡಲು ನಮ್ಮಿಂದ ಆಗುವದಿಲ್ಲವಾದರೂ ದೇವರು ಇದ್ದಾನೆ ಎಂಬದು ನಮಗ ಗೊತ್ತಿದೆ, ಅದುವೇ ನಮ್ಮ ಹೃದಯದಲ್ಲಿರುವ ನಂಬಿಕೆಯಾಗಿದೆ. ನಮ್ಮಲ್ಲಿ ನಂಬಕೆಯಿದ್ದರೆ, ವೈರಿಯು ಎಸಯುವ ಬಾಣಗಳನ್ನೆಲ್ಲಾ ನಾವು ಸೋಲಿಸಬಹುದು.

ಅಪೊಸ್ತಲರ ಕೃತ್ಯಗಳ ಇಂದಿನ ಸತ್ಯವೇದದ ಕಥೆಯಲ್ಲಿ, ಪೌಲನು ಸಮುದ್ರದಲ್ಲಿ ಘೋರವಾದ ಬಿರುಗಾಳಿ ಬೀಸುತ್ತಿದ್ದ ಸಮಯದಲ್ಲಿ ಹಡಗಿನಲ್ಲಿ ಪ್ರಯಾಣಿಸುತ್ತಿದ್ದನು, ಆಗ ದೇವರು ಅವನಿಗೆ ಬಿರುಗಾಳಿಯ ನಿಮಿತ್ತ ಹಡಗಿನಲ್ಲಿರುವವರೊಳಗೆ ಒಬ್ಬನೂ ಸಾಯುವದಿಲ್ಲ ಎಂದು ಹೇಳಿದನು. ದೇವರು ನೋಡಲು ಅವನಿಂದ ಆಗಲಿಲ್ಲ ಆದರೂ ದೇವರೇ ನನ್ನ ಸಂಗಡ ಮಾತನಾಡಿದ್ದಾನೆ ಎಂಬದಾಗಿ ಪೌಲನು ನಂಬಿದನು. ನಂತರ, ದೇವರು ತನಗೆ ಹೇಳಿದ್ದನ್ನು ಪೌಲನು ಎಲ್ಲರಿಗೂ ಹೇಳಿದನು. ಇದಲ್ಲದೆ ಬಲಗೊಳ್ಳಲು ಅವರೆಲ್ಲರಿಗೂ ಊಟ ಮಾಡಿರಿ ಎಂದು ಹೇಳಿದನು. ಪೌಲನು ದೇವರ ಮಾತುಗಳನ್ನು ನಂಬಿದ್ದು ಮಾತ್ರವಲ್ಲ ಬದಲಾಗಿ, ಇತರರೊಂದಿಗೆ ಅವನು ದೇವರ ಸಂದೇಶವನ್ನು ಹಂಚಿಕೊಂಡನು ಹಾಗೂ ಅವರೆಲ್ಲರೂ ಅದರಂತೆ ನಡೆದುಕೊಂಡರು! ಒಂದುವೇಳೆ ಹಡಗು ಒಡೆತದಿಂದ ಯಾರಾದರೂ ಮೃತಪಟ್ಟಿದ್ದರೆ ಅವನು ಬಹಳವಾಗಿ ನೊಂದುಕೊಂಡಿರುತ್ತಿದ್ದನು. ಕೆಲವೊಮ್ಮೆ ನಾವು ಮನುಷ್ಯರ ಮಾತುಗಳನ್ನು ಕೇಳದೆ ದೇವರ ಮಾತುಗಳನ್ನು ಕೇಳುವವರಾಗಿರಬೇಕು. ನಿಮ್ಮ ಕಣ್ಣಿಗೆ ಕಾಣದಿದ್ದರೂ ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳಲು ನೀವು ಸಿದ್ಧರಾಗಿರುವಿರೋ? ಹೀಗೆ ನೀವು ವೈರಿಯ ವಿರುದ್ಧ ಗೆಲ್ಲಬಹುದು ಮತ್ತು ಅವನ ಅಗ್ನಿಬಾಣಗಳನ್ನು ಆರಿಸಬಹುದು!

## ಬೂಟ್ ಕ್ಯಾಂಪ್ – ಪಾಠ 7

**ಅಸೈನ್ಮೆಂಟ್ – ಪಾಠ 7**



ಸತ್ಯವೇದದಲ್ಲಿ ಬರೆಯಲ್ಪಟ್ಟಿರವ ವಿಷಯಗಳು ನಿಮ್ಮ ಕಣ್ಣುಗಳಿಗೆ ಕಾಣಿಸದಿದ್ದರೂ, ನೀವು ಅವುಗಳನ್ನು ನಂಬುತ್ತಿರವದಾದರೆ ಅವುಗಳು ಯಾವುವು ಎಂಬದನ್ನು ಈ ವಾರ ಬರೆಯಿರಿ. ನೀವು ಬರೆದಿರುವ ವಿಷಯಗಳಲ್ಲಿ ವೈರಿಯು ಯಾವುದರಿಂದ ನಿಮ್ಮ ಮೇಲೆ ಹೆಚ್ಚು ಆಕ್ರಮಣ ಮಾಡಿದ್ದಾನೆ?

**ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 7**

ಅಪೊ 20-22 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 7

"ನಾನು ದೇವರಲ್ಲಿ ನಂಬಿಕೆಯಿಟ್ಟು, ಆತನಲ್ಲಿ ಭರವಸೆಯುಳ್ಳವನಾಗಿರುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠಾ 7

1. ನಿಜವಾದ ಜೀವನದಲ್ಲಿ "ದುರಾತ್ಮನು ಎಸೆಯುವ ಅಗ್ನಿಬಾಣಗಳು" ಯಾವುವು?
   ಉದಾಹರಣೆಗಳು: ಮಾನವನು ಮಂಗನಿಂದ ಬಂದಿದ್ದಾನೆ ಮತ್ತು ಎಲ್ಲವುಗಳ ಸೃಷ್ಟಿಕರ್ತನು ದೇವರಲ್ಲ ಎಂದು ಶಾಲೆಯಲ್ಲಿ ನಿಮ್ಮ ಟೀಚರ್ ಹೇಳುತ್ತಾರೆ. ಯೇಸು ಕ್ರಿಸ್ತನು ಕೇವಲ ಒಳ್ಳೆಯ ಮನುಷ್ಯನು ಅಥವಾ ಗುರು ಅಷ್ಟೆ, ಆತನು ದೇವರಲ್ಲಿ ಎಂದು ಕೆಲವರು ಹೇಳುತ್ತಾರೆ. ನಿಮ್ಮ ತಂದೆತಾಯಿಗಳ ಜೀವಿತಗಳನ್ನು ಬದಲಾಯಿಸಲು ದೇವರಿಂದ ಆಗುವದಿಲ್ಲ ಎಂಬದು ನಿಮ್ಮ ಹೆದರಿಕೆಯಾಗಿದೆ.

2. ಸಹಜವಾದ ಜೀವಿತದಲ್ಲಿ ನಿಮ್ಮ ನಂಬಿಕೆಯೆಂಬ ಗುರಾಣಿಯ ಮೂಲಕ ನೀವು ಯಾವ ರೀತಿ ಕೆಡುಕನ ಅಗ್ನಿಬಾಣಗಳನ್ನು ಆರಿಸುವಿರಿ ಎಂಬದಕ್ಕೆ ನಿರ್ದಿಷ್ಟವಾದ ಉದಾಹರಣೆಯನ್ನು ಕೊಡಿರಿ?
   ದೇವರು ಲೋಕವನ್ನು ಉಂಟುಮಾಡಲಿಲ್ಲ ಎಂಬದನ್ನು ನೀವು ಕೇಳಿಸಿಕೊಳ್ಳುವಾಗ, ನಿಜವಾಗಿಯೂ ಏನು ಸಂಭವಿಸಿತು ಎಂಬದನ್ನು ತಿಳಿಯಲು ನಿಮ್ಮ ಸತ್ಯವೇದವನ್ನು ತೆರೆಯಿರಿ ಮತ್ತು ಆದಿಕಾಂಡ 1 ಮತ್ತು 2 ಅಧ್ಯಾಯಗಳನ್ನು ಓದಿರಿ.

3. ನೀವು ಮನೆಯಿಂದ ಹೊರಗೆ ಹೋಗುವಾಗ ನಂಬಿಕೆಯನ್ನು ಬಿಟ್ಟುಹೋಗದಿರುವದನ್ನು ದೃಢಪಡಿಸಿಕೊಳ್ಳಲು ಏನು ಮಾಡುವಿರಿ?
   ದೇವರ ವಾಕ್ಯವನ್ನು ಕೇಳಿಸಿಕೊಳ್ಳುವದರಿಂದ ನಂಬಿಕೆ ಬರುತ್ತದೆ ಎಂದು ಸತ್ಯವೇದ ಹೇಳುತ್ತದೆ. ನಾವು ದೇವರ ವಾಕ್ಯಗಳನ್ನು ಓದಬೇಕು ಮತ್ತು ವಾಕ್ಯಗಳನ್ನು ಸತತವಾಗಿ ಕಂಠಪಾಠ ಮಾಡಬೇಕು, ಈ ರೀತಿ ನಾವು ನಂಬಿಕೆಯೆಂಬ ಗುರಾಣಿಯನ್ನು ಯಾವಾಗಲೂ ಹಿಡಿದುಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಇತರರ ಮಾತುಗಳನ್ನು ಕೇಳದೆ ದೇವರ ಮಾತುಗಳನ್ನು ನಂಬುವ ಆಯ್ಕೆ ಮಾಡಿಕೊಳ್ಳುವಾಗ, ನಂಬಿಕೆಯನ್ನು ಪ್ರದರ್ಶಿಸುವವರಾಗಿದ್ದೀರಿ.

4. ಇಂದಿನ ಸತ್ಯವೇದದ ಕಥೆಯ ಪ್ರಕಾರ ಪೌಲನು ಹಡಗಿನಲ್ಲಿ ಎಲ್ಲಿಗೆ ಹೋಗುತ್ತಿದ್ದನು? ಆ ಹಡಗಿನಲ್ಲಿ ಎಷ್ಟು ಜನ ಪ್ರಯಾಣಿಸುತ್ತಿದ್ದರು?
   (276) ಇತಾಲ್ಯ. ಈ ಪ್ರಯಾಣದ ಸಮಯದಲ್ಲಿ ಅವನು ಭೇಟಿ ಮಾಡಿದ ಪಟ್ಟಣಗಳು ಮತ್ತ ಬಂದರಗಳನ್ನು ನಕ್ಷೆಯಲ್ಲಿ ತೋರಿಸರಿ. (ಸಿದೋನ್, ಪತಾರ, ಸೈದಸ್, ಲಾಸಿಯಾ, ಕ್ರೇತ, ಕ್ಲೌದ್ಯ ಮತ್ತು ಮಾಲ್ಟಾ)

5. ಹಡಗು ನಾಶವಾಗುತ್ತದೆ ಆದರೆ ಬಿರುಗಾಳಿಯ ನಿಮಿತ್ತ ಯಾರೂ ಸಾಯುವದಿಲ್ಲ ಎಂಬದನ್ನು ಪೌಲನು ಹೇಗೆ ತಿಳಿದುಕೊಂಡನು?
   ದೇವದೂತನು ಬಂದು ಅವನಿಗೆ ಇದನ್ನು ಹೇಳಿದನು. ಅಪೊ 27:23-25


## ಆಟ: ಗುರಾಣಿಗಳು – ಪಾಠ 7

ಸಾಮಗ್ರಿಗಳು

ಮಾಸ್ಕಿಂಗ್ ಟೇಪ್, ಕಾರ್ಡ್ ಬೋರ್ಡ್ ಬಾಕ್ಸ್ ಮತ್ತು ಬಣ್ಣದ ಹಾಳೆ

**ಸಿದ್ಧತೆ**


ನೆಲದ ಮೇಲೆ ನಾಲ್ಕೂ ಕಡೆ ಒಂದೂವರೆ ಮೀಟರ್ ಅಳತೆಯ ಚೌಕವನ್ನು ಮಾಸ್ಕಿಂಗ್ ಮೂಲಕ ಮಾಡಿರಿ ಮತ್ತು ಡಬ್ಬಿಯನ್ನು (ಬಾಕ್ಸ್) ಅದರ ಮಧ್ಯದಲ್ಲಿ ಇಡಿರಿ.




**ಆಟ ಆಡುವದು**

ನಿಮ್ಮ ಗುಂಪನ್ನು ನಾಲ್ಕು ತಂಡಗಳಾಗಿ ವಿಭಾಗಿಸಿ ವಿವಿಧ ಬಣ್ಣದ ಹಾಳೆಗಳಿಂದ ಪೇಪರ್ ಬಾಲ್ ಮಾಡಿರಿ. ಮಕ್ಕಳು ದೊಡ್ಡ ಚೌಕದ ಹೊರಗೆ ನಿಂತು ಚೆಂಡನ್ನು ಡಬ್ಬಿಯೊಳಗೆ ಹಾಕಲು ಪ್ರಯತ್ನಿಸಬೇಕು. ದೊಡ್ಡ ಚೌಕದೊಳಗೆ ಓಡಾಡಲು ಪ್ರತಿಯೊಂದು ತಂಡವು ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು, ಅವರು ತಮ್ಮ ಎದುರಾಳಿ ತಂಡದವರು ಎಸೆಯುವ ಚೆಂಡು ಡಬ್ಬಿಯೊಳಗೆ ಬೀಳುವದನ್ನು ತಪ್ಪಿಸಲು ಪ್ರಯತ್ನಿಸಬೇಕು. ಕಡೆಯಲ್ಲಿ ಡಬ್ಬಿಯೊಳಗಿರುವ ಚೆಂಡುಗಳನ್ನು ಹೊರಗೆ ತಗದು ಬಣ್ಣದನುಸಾರವಾಗಿ ವಿದ್ಯಾರ್ಥಿಯು ಲೆಕ್ಕ ಮಾಡಬೇಕು. ಯಾವ ತಂಡದವರು ಹೆಚ್ಚು ಹಾಕಿರುತ್ತಾರೋ ಅವರು ಗೆಲ್ಲುತ್ತಾರೆ.

## ಒಗಟುಗಳ ಉತ್ತರ – ಪಾಠ 7





# ಪಾಠ 8

## ಶೀರ್ಷಿಕೆ – ಪಾಠ 8

ರಕ್ಷಣೆಯೆಂಬ ಶಿರಸ್ತ್ರಾಣ

## ಸತ್ಯವೇದ  ಕಥೆ – ಪಾಠ 8

ಸೌಲನ ಮಾನಸಾಂತರ


ಅಪೊ 9:1-19

## ಪದಕಗಳು – ಪಾಠ 8




ಇಂದಿನ ಹಾಜರಾತಿಯ  ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:




ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 8

ಸಿಪಾಯಿ ಗಿಗಲ್ ಶಿರಸ್ತ್ರಾಣವನ್ನು ಬಿಟ್ಟು ಉಳಿದೆಲ್ಲಾ ಆಯುಧಗಳನ್ನು ಧರಿಸಿಕೊಂಡು ಬಂದಳು. ಚಿಂತೆಗೊಳಗಾದ ಸಿಪಾಯಿ ಡ್ಯೂಟಿ ಗಿಗಲ್ ನಿನ್ನ ಶಿರಸ್ತ್ರಾಣ ಎಲ್ಲಿ ಎಂದು ಕೇಳಿದಳು. ಇಷ್ಟೆಲ್ಲಾ ಆಯುಧಗಳು ಇರುವಾಗ ನನಗೆ ಯಾವ ತೊಂದರೆಯೂ ಆಗುವದಿಲ್ಲ, ಆದ್ದರಿಂದ ನನಗೆ ಶಿರಸ್ತ್ರಾಣ ಬೇಡ ಎಂದು ಗಿಗಲ್ ಹೇಳಿದಳು. ತರಬೇತಿಯ ಸಮಯದಲ್ಲಿ ಆಕೆಯ ತಲೆಗೆ ಏಟುಗಳು ಬೀಳುತ್ತಲೇ ಇದ್ದವು. ಮಿಲಿಟರಿ ಅಧಿಕಾರಿ ಅಪ್ರೈಟ್ ಅವಳಿಗೆ ಉಳಿದ ಆಯುಧಗಳು ಇದ್ದರೆ ಸಾಲದು – ಶಿರಸ್ತ್ರಾಣ ಇರಲೇಬೇಕು ಎಂದು ಹೇಳಿದರು!

## ಕಂಠಪಾಠ ವಚನ – ಪಾಠ 8

"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿ; ಪವಿತ್ರಾತ್ಮರ ಕೊಡುಗೆಯಾದ ದೇವರ ವಾಕ್ಯವು ನಿಮಗೆ ಖಡ್ಗವಾಗಿರಲಿ."

ಎಫೆಸಿಯರಿಗೆ **6:17a**

## ಮುಖ್ಯ ಪಾಠ – ಪಾಠ 8

**ಅಪೊ 9:1-19**

ನಾವು ನಮ್ಮ ಶಿರಸ್ತ್ರಾಣಗಳನ್ನು ಧರಿಸಿಕೊಳ್ಳಬೇಕಾದದ್ದು ಪ್ರಾಮುಖ್ಯವಾಗಿದೆ ಯಾಕಂದರೆ ಒಂದುವೇಳೆ ನಮ್ಮ ತಲೆಗೆ ಏಟು ತಗುಲಿದರೆ ಅದರಿಂದ ಗಂಭೀರವಾದ ಪರಿಣಾಮಗಳು ಎದುರಾಗುವವು. ನಾವು ಶಿರಸ್ತ್ರಾಣವನ್ನು ಹಾಕಿಕೊಂಡಿದ್ದೇವೆ ಎಂಬದನ್ನು ದೃಢಪಡಿಸಿಕೊಳ್ಳುವದು ಹೇಗೆ? ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮುಗಿಸಿದ ಕೆಲಸದ ಮೇಲೆಯೇ ನಮ್ಮ ರಕ್ಷಣೆಯು ಆಧಾರವಾಗಿದೆ ಎಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ. ಆತನು ನಮ್ಮ ಪಾಪಗಳಿಗಾಗಿ ಮೃತಪಟ್ಟಾಗ, ಕ್ರಯವನ್ನು ಪಾವತಿಸಿ ನಮ್ಮ ರಕ್ಷಣೆಯನ್ನು ಕೊಂಡುಕೊಂಡನು! ನಾವು ಒಳ್ಳೆಯ ಕಾರ್ಯಗಳ ಮೂಲಕ ಪರಲೋಕದ ಬಾಧ್ಯಸ್ಥಿಕೆಯನ್ನು ಖರೀದಿಸಲಾರೆವು, ಬದಲಾಗಿ ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟಿರುವದರಿಂದಲೇ ರಕ್ಷಣೆ ಹೊಂದಿದ್ದೇವೆ. ರಕ್ಷಣೆಯ ಶಿರಸ್ತ್ರಾಣವನ್ನು ಧರಸಕೊಳ್ಳಲು ನಾವು ಪ್ರತಿದಿನ ನಮ್ಮ ಮನೆಯಲ್ಲಿ ಜ್ಞಾಪಕಾರ್ಥಕ ಪ್ರಾರ್ಥನೆಯನ್ನು ನಡೆಸುವ ಅವಶ್ಯಕತೆಯಿಲ್ಲ. ನಾವು ನಮ್ಮ ರಕ್ಷಣೆಗಾಗಿ ಕರ್ತನಾದ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಟ್ಟಿರುವದಾದರೆ, ನಮ್ಮ ಶಿರಸ್ತ್ರಾಣವನ್ನು ಧರಸಿಕೊಂಡವರಾಗಿದ್ದೇವೆ! ಅಪೊಸ್ತಲರ ಕೃತ್ಯಗಳಲ್ಲಿರುವ ಇಂದಿನ ಸತ್ಯವೇದದ ಕಥೆಯಲ್ಲಿ ದೇವರು ಅದ್ಭುತ ರೀತಿಯಲ್ಲಿ ಸೌಲನಿಗೆ ಕಾಣಿಸಿಕೊಂಡನು. ನಂತರದಲ್ಲಿ ಪೌಲನಾದ, ಸೌಲನು ಕ್ರೈಸ್ತರನ್ನು ಗೇಲಿ ಮಾಡುತ್ತಿದ್ದನು ಮತ್ತು ಹಿಂಸೆಪಡಿಸುತ್ತಿದ್ದನು. ಒಂದುದಿನ ದಮಸ್ಕದ ದಾರಿಯಲ್ಲಿ, ಯೇಸು ಕ್ರಿಸ್ತನು ಸೌಲನಿಗೆ  ಪರಲೋಕದ ಬೆಳಕಿನ ಮೂಲಕ ಕಾಣಿಸಿಕೊಂಡನು ಮತ್ತು ಸೌಲನು ಕುರುಡನಾಗಿ ನೆಲಕ್ಕೆ ಬಿದ್ದನು. ಮೂರು ದಿನಗಳ  ನಂತರ ದೇವರು ಅವನನ್ನು ಗುಣಪಡಿಸಲು ಮತ್ತು ಕ್ರಿಸ್ತನ ಕಡೆಗೆ ನಡೆಸಲು ಒಬ್ಬ ಕ್ರೈಸ್ತನನ್ನು ಅವನ ಬಳಿಗೆ ಕಳುಹಿಸಿದನು. ಆ ವಾರದಲ್ಲಿಯೇ ಸೌಲನು ಯೇಸು ಕ್ರಿಸ್ತನನ್ನು ನಂಬಿದನು ಮತ್ತು ರಕ್ಷಣೆ ಹೊಂದಿದನು!  ಒಂದುವೇಳೆ ನೀವು ಪ್ರಾರ್ಥಿಸುತ್ತಾ ನಿಮ್ಮ ರಕ್ಷಣೆಗಾಗಿ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದಾದರೆ, ಪೌಲನ ಹಾಗೆ ಇಂದೇ ರಕ್ಷಣೆಯ ಶಿರಸ್ತ್ರಾಣವನ್ನು ಹಾಕಿಕೊಳ್ಳಬಹುದು.

ನನ್ನೊಂದಿಗೆ ಪ್ರಾರ್ಥನೆ ಮಾಡಿರಿ, "ಪ್ರೀತಿಯ ಯೇಸುವೇ, ನಾನು ಪಾಪಿಯಾಗಿದ್ದೇನೆ, ಅನೇಕ ತಪ್ಪುಗಳನ್ನು ಮಾಡಿದ್ದೇನೆ ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ಪಾಪಗಳಿಗಾಗಿ ನೀನು ಶಿಲುಬೆಯ ಮೇಲೆ ಪ್ರಾಣ ಕೊಟ್ಟಿರುವೆ ಮತ್ತು ನೀನು ಸತ್ಯವಂತನು ಎಂದು ನಾನು ನಂಬುತ್ತೇನೆ. ಇಂದೇ ನನ್ನ ಹೃದಯದಲ್ಲಿ ನಾನು ನಿನ್ನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುತ್ತೇನೆ. ನನ್ನನ್ನು ಅಂಗೀಕರಿಸಿಕೊಂಡದ್ದಕ್ಕಾಗಿ, ಪ್ರೀತಿಸಿದ್ದಕ್ಕಾಗಿ ಮತ್ತು ಪರಲೋಕದಲ್ಲಿ ನಿನ್ನೊಂದಿಗೆ ನಿತ್ಯಜೀವವನ್ನು ಕೊಟ್ಟಿದ್ದಕ್ಕಾಗಿ ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.!"

## ಬೂಟ್ ಕ್ಯಾಂಪ್ – ಪಾಠ 8

**ಅಸೈನ್ಮೆಂಟ್ – ಪಾಠ 8**

ನೀವು ರಕ್ಷಣೆಗಾಗಿ ಎಲ್ಲಿ ಮತ್ತು ಯಾವಾಗ ಪ್ರಾರ್ಥನೆ ಮಾಡಿದಿರೆಂಬದನ್ನು ನಿಮ್ಮ ಸತ್ಯವೇದದ ಮೊದಲನೆಯ ಪುಟದ ಮೇಲೆ ಬರೆಯಿರಿ. ಒಂದುವೇಳೆ ನಿಮಗೆ ನೆನಪಿಲ್ಲವೆಂದರೆ, ಈಗ ಅದನ್ನು ಮಾಡಬಹುದು! ವಿಶೇಷವಾದ ಸ್ಥಳಕ್ಕೆ ಹೋಗಿರಿ (ನಿಮ್ಮ ಮಲಗುವ ಕೋಣೆ, ಮನೆಯ ಹಿಂದೆ ಅಥವಾ ಸಭೆ) ಮತ್ತು ನಿಮ್ಮನ್ನು ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳಿರಿ. ತನ್ನ ಪ್ರಾಣವನ್ನು ನಿಮ್ಮ ಪಾಪಗಳಿಗೆ  ಕ್ರಯವಾಗಿ ಕೊಟ್ಟದ್ದಕ್ಕಾಗಿ ಯೇಸು ಕ್ರಿಸ್ತನಿಗೆ ಕೃತಜ್ಞತೆ ಸಲ್ಲಿಸಿರಿ ಮತ್ತು ಆತನಿಗೆ  ನಿಮ್ಮ ಒಡೆಯನು ಹಾಗೂ ಯಜಮಾನನು ಆಗಿರುವಂತೆ ಬೇಡಿಕೊಳ್ಳಿರಿ. ನಾನು ನಿನಗಾಗಿ ಜೀವಿಸಲು ಬಯಸುತ್ತೇನೆ ಎಂದು ಆತನಿಗೆ ಹೇಳಿರಿ. ಸಮಯ ಮತ್ತು ಸ್ಥಳವನ್ನು ನಿಮ್ಮ ಸತ್ಯವೇದದ ಮೊದಲ ಪುಟ ಅಥವಾ ನಿಮ್ಮ ವಿದ್ಯಾರ್ಥಿ ಪುಸ್ತಕದಲ್ಲಿ ಬರೆಯಿರಿ.

ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 8

ಅಪೊ 23-25 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 8

"ನನ್ನ ರಕ್ಷಣೆಗಾಗಿ ನಾನು ಕರ್ತನಾದ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 8

**1. ನಿಮ್ಮ ರಕ್ಷಣೆಯ ದೃಢತೆ ನಿಮಗಿದೆಯೇ?**

ಪ್ರತಿಯೊಬ್ಬ ವಿದ್ಯಾರ್ಥಿಯು ಈ ಪ್ರಶ್ನೆಗೆ ಉತ್ತರಿಸಬೇಕು ಮತ್ತು ಯಾಕೆ ಎಂಬದಕ್ಕೆ ಕಾರಣ ಕೊಡಬೇಕು. ಒಂದುವೇಳೆ ಅವರು ಯೇಸು ಕ್ರಿಸ್ತನಿಗೆ ತಮ್ಮ ಹೃದಯವನ್ನು ತೆರೆದಿದ್ದರೆ ಮತ್ತು ಆತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಕೊಂಡಿದ್ದರೆ, ಈಗಾಗಲೇ ಅವರು ರಕ್ಷಣೆ ಹೊಂದಿದ್ದಾರೆ, ಅದನ್ನು ದೃಢಪಡಿಸಿಕೊಳ್ಳಲು ಇದು ಸಹಾಯ ಮಾಡತ್ತದೆ.

**2. ನಾನು ನನ್ನ ರಕ್ಷಣೆಯನ್ನು ಕಳೆದುಕೊಳ್ಳಬಹುದು ಎಂದು ನಿಮಗೆ ಅನ್ನಿಸುತ್ತದೆಯೇ?**

ಹಲವಾರು ಅಭಿಪ್ರಾಯಗಳಿವೆ, ಕೆಲವರು ಹೌದು, ರಕ್ಷಣೆಯನ್ನು ಕಳೆದುಕೊಳ್ಳಬಹುದು ಎಂದು ಹೇಳುತ್ತಾರೆ ಮತ್ತು ಕೆಲವರು ಇಲ್ಲ ಎಂದು ಹೇಳುತ್ತಾರೆ. ವಿದ್ಯಾರ್ಥಿಗಳ ಪ್ರತಿಕ್ರಿಯೆಯ ಬಗ್ಗೆ ಚರ್ಚಿಸಲು ಇದು ಸಹಾಯ ಮಾಡುತ್ತದೆ.

**3. ಸೌಲನು ಕುದುರೆಯ ಮೇಲೆ ದಮಸ್ಕದ ದಾರಿಯಲ್ಲಿ ಪ್ರಯಾಣಿಸುತ್ತಿರುವಾಗ ಏನಾಯಿತು?**

ಪರಲೋಕದಿಂದ ದೊಡ್ಡ ಬೆಳಕು ಅವನಿಗೆ ಬಡಿಯಿತು, ಅವನು ನೆಲಕ್ಕೆ ಬಿದ್ದನು, ಅವನಿಗೆ ಕಣ್ಣು ಕಾಣಿಸದಂತಾಯಿತು. ದೇವರು ನೇರವಾಗಿ ಅವನ ಸಂಗಡ ಮಾತನಾಡಿದನು. (ಅಪೊ 9)

**4. ದೇವರು ದಮಸ್ಕದ ಅನನೀಯನಿಗೆ ಏನೆಂದು ಹೇಳಿದನು?**

ನೀನು ಸೌಲನಿಗಾಗಿ ಪ್ರಾರ್ಥನೆ ಮಾಡು ಎಂದು ದೇವರು ಹೇಳಿದನು. ಸೌಲನು ಎಲ್ಲಿದ್ದಾನೆ ಎಂಬದನ್ನು ತಿಳಿದುಕೋ ಮತ್ತು ಅವನಿಗೆ ಸ್ವಸ್ಥತೆಯ ಅವಶ್ಯಕತೆಯಿದೆ ಎಂದು ಹೇಳಿದನು.

**5. ಆನನೀಯನು ದೇವರಿಗೆ ಏನೆಂದು ಹೇಳಿದನು? ನಾವು ದೇವರ ಹತ್ತಿರ ದೂರಗಳನ್ನು ಹೇಳುವಾಗ ಏನಾಗುತ್ತದೆ?**

ಅನನೀಯನು ಹೇಳಿದ್ದೇನೆಂದರೆ, "ಸೌಲನು ಕ್ರೈಸ್ತರಿಗೆ ನೀಡಿರುವ ಹಿಂಸೆಯ ಬಗ್ಗೆ ನಾನು ಕೇಳಿದ್ದೇನೆ. ನಮ್ಮನ್ನು ಸೆರೆಮನೆಗೆ ಹಾಕಲು ಅವನು ಈ ಪಟ್ಟಣದಲ್ಲಿಯೂ ಅಧಿಕಾರ ಪಡೆದುಕೊಂಡಿದ್ದಾನೆ." ಆದರೆ ದೇವರು ಅನನೀಯನ ವಿಷಯದಲ್ಲಿ ತಾಳ್ಮೆಯುಳ್ಳವನಾಗಿದ್ದನು.

## ಆಟ: ಯೋಜನೆ – ಪಾಠ 8

ಆಟ ಆಡುವದು


ಒಬ್ಬ ವಿದ್ಯಾರ್ಥಿಯನ್ನು ಪ್ರಕಟಿಸುವವನನ್ನಾಗಿ ಆಯ್ಕೆ ಮಾಡಿರಿ. ಆಟವನ್ನು ಪ್ರಾರಂಭಿಸಲು, ವಿದ್ಯಾರ್ಥಿಗಳು ಕೋಣೆಯೊಳಗೆ ನಡೆದಾಡುತ್ತಿರಬೇಕು. ಪ್ರಕಟಿಸುವವನು, "ರಕ್ಷಣೆ" ಎಂದು ಹೇಳಿದ ಕೂಡಲೇ, ವಿದ್ಯಾರ್ಥಗಳು ನಡೆದಾಡುತ್ತಿರುವದನ್ನು


ನಿಲ್ಲಿಸಬೇಕು, ತಾವಿರುವ ಸ್ಥಳದಲ್ಲಿಯೇ ಒಂದು ಸುತ್ತು ಸುತ್ತಬೇಕು ಮತ್ತು ಸಾಧ್ಯವಾದಷ್ಟು ಬೇಗ ಕುಳಿತುಕೊಳ್ಳಬೇಕು. ಯಾವ ವಿದ್ಯಾರ್ಥಿ ಮೊದಲು ಕುಳುತುಕೊಳ್ಳುತ್ತಾನೋ ಅವನು ಯೇಸು ಕ್ರಿಸ್ತನ ಬಗ್ಗೆ ಏನಾದರೂ ಹೇಳಬೇಕು ಮತ್ತು ಹೇಳಿದ ನಂತರ ಅವನು ಪ್ರಕಟಿಸುವವನಾಗುವನು. (ಒಂದುವೇಳೆ ಗೆಲ್ಲುವ ವಿದ್ಯಾರ್ಥಿ ಮೊದಲೇ ಪ್ರಕಟಿಸುವವನಾಗಿದ್ದರೆ, ಇನ್ನೂ ಗೆಲ್ಲದಿರುವವನನ್ನು ಪ್ರಕಟಿಸುವವನನ್ನಾಗಿ ಅವನೇ ಆಯ್ಕೆ ಮಾಡಬೇಕು)

ಆಯ್ಕೆಗಳು

1. ಪ್ರತಿ ಬಾರಿ ನೀವು ಇದನ್ನು ಆಡುವಾಗಲೂ, ವಿದ್ಯಾರ್ಥಿಗಳಿಗೆ ಕೊಡಲಾಗುವ ಸೂಚನೆಗಳನ್ನು ಬದಲಾಯಿಸಬಹುದು. (ಉದಾಹರಣೆಗೆ, 2 ಸಲ ಸುತ್ತುವಾಗ ನಿಮ್ಮ ತಲೆಯ ಮೇಲೆ ಕೈಯನ್ನು ಇಟ್ಟುಕೊಳ್ಳಿರಿ, ಒಂದೇ ಕಾಲಿನಲ್ಲಿ ನಿಂತು ಎರಡು ಸಲ ಜಿಗಿಯಿರಿ, ಹತ್ತಿರದಲ್ಲಿರುವ ಗೋಡೆಯ ಹತ್ತಿರ ಓಡಿರಿ, ಇತ್ಯಾದಿ)
2. ಯಾವ ಮಗು ಗೆದ್ದಿದೆ ಎಂಬದನ್ನು ತಿಳಿಯಲು ಕಷ್ಟವಾದರೆ, ಪ್ರಕಟಿಸುವವನನ್ನು ಆಯ್ಕೆ ಮಾಡಲು ಬೇರೆ ಮಾಹಿತಿಯನ್ನು ಉಪಯೋಗಿಸಬಹುದು – ನೀಲಿ ಬಟ್ಟೆಯನ್ನು ಹಾಕಿಕೊಂಡಿರುವ ವಿದ್ಯಾರ್ಥಿ, ಚಿಕ್ಕವನಾಗಿರುವ ವಿದ್ಯಾರ್ಥಿ, ಕುಟುಂಬದ ದೊಡ್ಡ ಹೆಸರು ಇರುವ ವಿದ್ಯಾರ್ಥಿ, ಇತ್ಯಾದಿ.
3. ಪ್ರಕಟಿಸುವವನು ಚಪ್ಪಾಳೆ ತಟ್ಟುತ್ತಾ ಅಥವಾ ಶಿಳ್ಳೆ ಹೊಡೆದು, ಅಥವಾ ಹಾಡನ್ನು ಹಾಕಿ ನಿಲ್ಲಿಸುವ ಮೂಲಕವೂ "ರಕ್ಷಣೆ" ಎಂದು ಕೂಗಬಹುದು.

## ಒಗಟಿನ ಉತ್ತರಗಳು – ಪಾಠ 8



| | | | | | | | | |
|---|---|---|---|---|---|---|---|---|
| ಡ | ಅ | ಸ್ಕ | ಯೇ | ತ್ಮ | ವ | ತ್ರಾ | ಣ್ಣ | ನು |
| ಳು | ಮ | ನ | ತ್ಮ | ಸು | ರ | ಕ್ಷ | ಣೆ | ಕೈ |
| ದ | ಆ | ತ್ಮ | ನೀ | ರಿ | ಲೋ | ರು | ಯಾ | ಗ |
| ಣೆ | ರಿ | ವ | ರ | ಯ | ಕ | ಣ್ಣ | ಗ | ಳು |
| ಷ್ಯ | ಸ | ನೀ | ವಿ | ಜ | ನು | ತ್ಮ | ಶಿ | ಪ |
| ಣ್ಣ | ಲ್ಪ | ದ | ಯಾ | ತ್ರಾ | ಣೆ | ಕು | ಷ್ಯ | ರಿ |
| ತ್ರಾ | ಟ್ಟ | ಬ | ಲ | ರಿ | ತ್ಮ | ನೀ | ರು | ಯಾ |
| ಯಾ | ವ | ಡ | ಪ | ಸೌ | ಲ | ನು | ಷ್ಯ | ಡ |
| ಕ್ಷ | ರು | ದ | ಣೆ | ಕೈ | ರ | ಸ್ಕ | ಟ್ಟ | ಆ |

# ಪಾಟ 9

## ಶೀರ್ಷಿಕೆ – ಪಾಠ 9

ದೇವರ ವಾಕ್ಯವೆಂಬ ಕತ್ತಿ

## ಸತ್ಯವೇದ ಕಥೆ - ಪಾಠ 9


ಪೇತ್ರನು ಜನಸಮೂಹದವರನ್ನುದ್ದೇಶಿಸಿ ಮಾತನಾಡಿದನು


ಅಪೊ 2:12-17, 22-30, 34-41

## ಪದಕಗಳು – ಪಾಠ 9

ಇಂದಿನ ಹಾಜರಾತಿಯ ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:




ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

## ನಾಟಕ – ಪಾಠ 8

ಡ್ಯೂಟಿ ತನ್ನ ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಗಿಗಲ್ ಹತ್ತಿರ ಹೇಳಿಕೊಂಡಾಗ, ಆಕೆ ಡ್ಯೂಟಿಗೆ ಕೆಲವು ಸಲಹೆಗಳನ್ನು ನೀಡಿದಳು. ಡ್ಯೂಟಿ ಗಿಗಲ್ ಗೆ ಈ ಆಲೋಚನೆ ನಿನಗೆ ಎಲ್ಲಿಂದ ಬಂದಿತು ಎಂದು ಕೇಳಿದಳು. ಗಿಗಲ್ ತನ್ನ ಮೊಬೈಲ್ ತೆಗೆದುಕೊಂಡು, ಈ ಆಲೋಚನೆ ಸಾಮಾಜಿಕ ಜಾಲತಣದಿಂದ ದೊರೆಯಿತು ಎಂದು ಹೇಳಿದಳು. ಆ ಸಮಯದಲ್ಲಿ ಮಿಲಿಟರಿ ಅಧಿಕಾರಿ ಅಪ್ರೈಟ್ ಬಂದು, ಅವರೊಂದಿಗೆ ಮಾತನಾಡುತ್ತಾ ನಿಮ್ಮ ಗಮನವನ್ನು ಸಾಮಾಜಿಕ ಜಾಲತಾಣದ ಕಡೆಗಲ್ಲ ಬದಲಾಗಿ ಸತ್ಯವೇದದ ಕಡೆಗೆ ಹರಿಸಿರಿ ಎಂದು ಹೇಳಿದರು. ಸಿಪಾಯಿಗಳಾದ ಡ್ಯೂಟಿ ಮತ್ತು ಗಿಗಲ್ ತಮ್ಮ ಸತ್ಯವೇದಗಳನ್ನು ಓದಲು ಪ್ರಾರಂಭಿಸಿದರು ಮತ್ತು ಇಬ್ಬರೂ ಅದರಿಂದ ಕತ್ತಿಯನ್ನು ಪಡೆದುಕೊಂಡರು!

## ಕಂಠಪಾಠ ವಚನ – ಪಾಠ 9

"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿ; ಪವಿತ್ರಾತ್ಮರ ಕೊಡುಗೆಯಾದ ದೇವರ ವಾಕ್ಯವು ನಿಮಗೆ ಖಡ್ಗವಾಗಿರಲಿ."

ಎಫೆಸಿಯರಿಗೆ **6:17b**

## ಮುಖ್ಯ ಪಾಠ – ಪಾಠ 9

**ಅಪೊ 2:12-17, 22-30, 34-41**

ಪವಿತ್ರಾತ್ಮನು ಕೊಡುವ ಕತ್ತಿ, ರಕ್ಷಣೆಗಾಗಿ ಉಪಯೋಗಿಸುವ ಸಾಧನವಲ್ಲ ಬದಲಾಗಿ ಸರ್ವಾಯುಧಗಳಲ್ಲಿರುವ ಮೊದಲನೆಯ ಆಯುಧವಾಗಿದೆ. "ಪವಿತ್ರಾತ್ಮನು ಕೊಡುವ ಕತ್ತಿ" ಸತ್ಯವೇದವಾಗಿದೆ, ಅಥವಾ ದೇವರ ವಾಕ್ಯವಾಗಿದೆ. ನೀವು ನಿಮ್ಮ ಕತ್ತಿಯನ್ನು ಯುದ್ಧದಲ್ಲಿ ಉಪಯೋಗಿಸಬೇಕೆಂದರೆ, ಸತ್ಯವೇದವನ್ನು ನೀವು ತಿಳಿದಿರಬೇಕು.

ಇದರ ಅರ್ಥ ನೀವು ನಿಮ್ಮ ಸತ್ಯವೇದವನ್ನು ಮತ್ತೆಮತ್ತೆ ಓದುವದು ಮತ್ತು ವಾಕ್ಯಗಳನ್ನು ಕಂಠಪಾಠ ಮಾಡುವದು. ಅಪೊಸ್ತಲರ ಕೃತ್ಯಗಳಿಂದ ತೆಗೆದುಕೊಳ್ಳಲಾಗಿರುವ ಇಂದಿನ ಸತ್ಯಕಥೆಯಲ್ಲಿ ಪೇತ್ರನು ಜನಸಮೂಹದವರೊಂದಿಗೆ ಮಾತನಾಡುವಾಗ ದೇವರ ವಾಕ್ಯಗಳನ್ನು ಉಪಯೋಗಿಸಿದ್ದಾನೆ. ಅಲ್ಲಿ ಕೆಲವರು ದೇವರಲ್ಲಿ ನಂಬಿಕೆಯಿಲ್ಲದವರಿದ್ದರು, ಅವರು ಅವನನ್ನು ಗೇಲಿ ಮಾಡುತ್ತಿದ್ದರು. ಗೇಲಿ ಮಾಡುವವರೊಂದಿಗೆ ಮಾತನಾಡಲು ಪೇತ್ರನು ಎದ್ದು ನಿಂತುಕೊಂಡನು; ಅವನು ಹಾಗೇ ಸುಮ್ಮನೆ ಅವರಿಗೆ ಬೋಧನೆ ಮಾಡಲಿಲ್ಲ, ಬದಲಾಗಿ ಯುದ್ಧದಲ್ಲಿ ಹೋರಾಡಲು ವಾಕ್ಯಗಳನ್ನು ಉಪಯೋಗಿಸಿದನು. ನಾವು ವಾಕ್ಯಗಳನ್ನು ಕಂಠಪಾಠ ಮಾಡಿರುವಾಗ, ಅವಶ್ಯವಿರುವ ಸಮಯದಲ್ಲಿ ಅವುಗಳನ್ನು ಉಪಯೋಗಿಸಬಹುದು. ಆ ದಿನ ಪೇತ್ರನು ದೇವರ ವಾಕ್ಯಗಳ ಮೂಲಕ ಬೋಧನೆ ಮಾಡಿದ್ದರ ನಿಮಿತ್ತ ಮೂರು ಸಾವಿರ ಜನರು ರಕ್ಷಣೆ ಹೊಂದಿದರು ಮತ್ತು ಸಭೆಗ ಸೇರಿದರು! ಎಂಥಾ ಆಶೀರ್ವಾದ! ಪೇತ್ರನು ತನ್ನ ಕತ್ತಿಯನ್ನು ಕೌಶಲ್ಯದಿಂದ ಉಪಯೋಗಿಸಿದನು ಯಾಕಂದರ ಆ ಪರಸ್ಥಿತಿಗೆ ಅನುಗುಣವಾದ ವಚನಭಾಗವನ್ನು ಅವನು ಕಂಠಪಾಠ ಮಾಡಿದ್ದನು. ಅವರು ಕೌಶಲ್ಯದಿಂದ ವೈರಿಯೊಂದಿಗೆ ಹೋರಾಡಿದನು ಮತ್ತು 3000 ಜನರನ್ನು ಕರ್ತನಿಗಾಗಿ ಗೆದ್ದನು. ನೀವು ದೇವರ ವಾಕ್ಯಗಳು ಎಷ್ಟು ಹೆಚ್ಚಾಗಿ ಗೊತ್ತಿರುತ್ತದೆಯೋ ಅಷ್ಟು ಹೆಚ್ಚಾಗಿ ನೀವು ನಿಮ್ಮ ಕತ್ತಿಯನ್ನು ಉಪಯೋಗಿಸುವಿರಿ. ನಾವು ದೇವರ ವಾಕ್ಯಗಳನ್ನು ಓದಿ ಕಂಠಪಾಠ ಮಾಡಿರುವಾಗ, ಅವಶ್ಯವಿರುವ ಸಮಯದಲ್ಲಿ ದೇವರು ಅದನ್ನು ನಮ್ಮ ನೆನಪಿಗೆ ಬರಮಾಡುವನು. ನೀವು ನಿಮ್ಮ ಕತ್ತಿಯ ವಿಷಯದಲ್ಲಿ ಹೇಗಿದ್ದೀರಿ?

## ಬೂಟ್ ಕ್ಯಾಂಪ್ – ಪಾಠ 9

**ಅಸೈನ್ಮೆಂಟ್ – ಪಾಠ 9**

ನೀವು ಸತತವಾಗಿ ಹೋರಾಡುತ್ತಿರುವ ರಣರಂಗದಲ್ಲಿ ನಿಮಗೆ ಅನ್ವಯಿಸುವ ಸತ್ಯವೇದ ವಾಕ್ಯವನ್ನು ಕಂಠಪಾಠ ಮಾಡಿರಿ ಮತ್ತು ಮುಂದಿನ ವಾರ ಅದನ್ನು ನಿಮ್ಮ ಟೀಚರ್ ಗೆ ಹೇಳಿರಿ. ನೀವು ನಿಮ್ಮ ತೋರಿಕೆ, ಆಸ್ತಿ, ಇನ್ನೂ ಹೆಚ್ಚು ಬೇಕು, ಆತ್ಮೀಕ ಭದ್ರತೆ ಅಥವಾ ಭವಿಷ್ಯದ ವಿಷಯದಲ್ಲಿ ಹೆದರಿಕೆಗಳನ್ನು ಅನುಭವಿಸುತ್ತಿದ್ದೀರೋ.



**ಹೋಮ್ ವರ್ಕ್ (ದೊಡ್ಡ ವಿದ್ಯಾರ್ಥಿಗಳಿಗೆ) – ಪಾಠ 9**

ಅಪೊ 26-28 ಅಧ್ಯಾಯಗಳನ್ನು ಓದಿರಿ

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 9

"ನಾನು ದೇವರ ವಾಕ್ಯವನ್ನು ಕಲಿತುಕೊಳ್ಳಲು ಮತ್ತು ನನ್ನ ಅನುದಿನದ ಜೀವಿತದಲ್ಲಿ ಉಪಯೋಗಿಸಿಕೊಳ್ಳುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 9

1. ನೀವು ವೈರಿಯ ವಿರುದ್ಧವಾಗಿ ಯಾವಾಗ ರಕ್ಷಣಾತ್ಮಕವಾಗಿರುವಿರಿ?
ಇತರರ ರಕ್ಷಣೆಗಾಗಿ ಪ್ರಾರ್ಥನೆ ಮಾಡುವದು, ಸತ್ಯವೇದದ ವಾಗ್ದಾನಗಳನ್ನು ಪ್ರಕಟಿಸುವದು, ದೇವರನ್ನು ಸ್ತುತಿಸುವದು, ಇತ್ಯಾದಿ.

2. ನಿಜವಾದ ಜೀವಿತದಲ್ಲಿ ನಿಮ್ಮ ಕತ್ತಿಯನ್ನು ನೀವು ಉಪಯೋಗಿಸಿಕೊಂಡ ಮಾದರಿಯನ್ನು ತಿಳಿಸಿರಿ?
ಉದಾಹರಣೆ: ನೀವು ಸೈತಾನನು ಹೇಳುವ ಸುಳ್ಳನ್ನು ಕೇಳಿಸಿಕೊಳ್ಳುವಿರಿ (ನೀವು ಚೆನ್ನಾಗಿಲ್ಲ ಎಂದು ಯಾರೋ ಹೇಳುತ್ತಾರೆ) ಮತ್ತು ಕೂಡಲೇ ನೀವು ದೇವರ ಸೃಷ್ಟಿ, ಆತನಿಗೆ ವಿಶೇಷವಾದವರು ಎಂದು ಹೇಳುವ ವಾಕ್ಯವು ನಿಮ್ಮ ನನಪಿಗೆ ಬರುತ್ತದೆ.

3. ಪವಿತ್ರಾತ್ಮನು ಕೊಡುವ ಕತ್ತಿ ಹೇಗೆ ದುರುಪಯೋಗವಾಗುತ್ತದೆ?
ಅರುಹು ಹುಟ್ಟಿಸುವದು ಪವಿತ್ರಾತ್ಮನ ಕಾರ್ಯವಾಗಿದೆ ಎಂಬದನ್ನು ಕ್ರೈಸ್ತರು ಮರೆತುಹೋಗುವಾಗ ಮತ್ತು ಇತರೆ ಕ್ರೈಸ್ತರ ಮೇಲೆ ಆಕ್ರಮಣ ಮಾಡಲು ಸತ್ಯವೇದದ ವಾಕ್ಯಗಳನ್ನು ಉಪಯೋಗಿಸುವಾಗ ದುರುಪಯೋಗವಾಗುತ್ತದೆ.
ಪವಿತ್ರಾತ್ಮನು ಪಾಪದ ಅರುಹನ್ನು ನಮ್ಮಲ್ಲಿ ಹುಟ್ಟಿಸುವಾಗ, ನಮಗೆ ಬಲ ಮತ್ತು ಶಕ್ತಿಯನ್ನು ಕೊಡುತ್ತಾನೆ ಹಾಗೂ ಆತನ ಮೆಚ್ಚಿಕೆಗೆ ತಕ್ಕ ಹಾಗೆ ಜೀವಿಸಲು ಸಹಾಯ ಮಾಡುತ್ತಾನೆ.

4. ಪಂಚಾಶತ್ತಮ ದಿನದಂದು ಪೇತ್ರನು ಯೆರೂಸಲೇಮಿನ ಹೇಳಿದ ವಿಷಯಗಳನ್ನು ಕೇಳಿ ಎಷ್ಟು ಜನರು ಕ್ರೈಸ್ತರಾದರು?
ಸುಮಾರು 3000 ಜನರು


5. ನಾವು ಯೇಸು ಕ್ರಿಸ್ತನನ್ನು ಹಿಂಬಾಲಿಸುವವರಾಗಿದ್ದೇವೆ ಎಂಬದನ್ನು ತೋರಿಸಲು ಈ ಹೊಸ ಕ್ರೈಸ್ತರು ಏನು ಮಾಡಿದರು?
ದೀಕ್ಷಾಸ್ನಾನ ಮಾಡಿಸಿಕೊಂಡರು.

## ಆಟ: ಕೊಡ್ – ಪಾಠ 9

ಸಾಮಗ್ರಿಗಳು

ಒಣಗಿದ ಐಸ್ ನ ಕೆಲವು ತುಂಡುಗಳು, ಉಪಯೋಗಿಸಿ ಬಿಸಾಡಬಹುದಾದ ತಟ್ಟೆಗಳು

ಆಟ ಆಡುವದ




"ನಿಮ್ಮ ಕೈಯನ್ನು ಉಪಯೋಗಿಸದೆ ಒಳಗಿರುವ ಐಸ್ ಅನ್ನು ಪಕ್ಕದ ಕೋಣೆಗೆ ಸರಿಸಲು ಏನು ಮಾಡಬೇಕು ಎಂಬದಾಗಿ ನಿಮಗೆ ಅನ್ನಿಸುತ್ತದೆ? ಪ್ರತಿದಿನ ನಾವು ಉತ್ತಮವಾದ ಕಾರ್ಯಗಳನ್ನು ಮಾಡುವ ಮತ್ತು ಹೇಳುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಈ ತೀರ್ಮಾನಗಳಲ್ಲಿ ನಮಗೆ ಸಹಾಯ ಮಾಡುವದಾಗಿ ದೇವರು ಸಹ ವಾಗ್ದಾನ ಮಾಡಿದ್ದಾನೆ. – ವಾಕ್ಯಗಳನ್ನು ಕಂಠಪಾಠ ಮಾಡುವದು ಮತ್ತು ಅಭ್ಯಾಸ ಮಾಡುವದು ನಮಗೆ ಸಹಾಯ ಮಾಡುತ್ತದೆ."

1. ಕೈಗಳನ್ನು ಉಪಯೋಗಿಸದೆ ತಟ್ಟೆ ಅಥವ ಫ್ಯಾನ್ ಸಹಾಯದಿಂದ ಮಾತ್ರವೇ ಒಣಗಿರುವ ಐಸ್ ಅನ್ನು ಪಕ್ಕದ ಕೋಣೆಗೆ ಸರಿಸಲು ಸಹಾಯವಾಗುವ ವಿವಿಧ ವಿಧಾನಗಳನ್ನು ತೋರಿಸಿರಿ (ಅಥವಾ ತೋರಿಸುವಂತೆ

ಸಹಾಯಕರಿಗೆ ಹೇಳಿರಿ). (ಸಣ್ಣ ಮತ್ತು ವೇಗವಾದ ಕಾರ್ಯಗಳನ್ನು ಅಥವಾ ದೊಡ್ಡ ಚಲನೆಗಳನ್ನು ಉಪಯೋಗಿಸಿರಿ, ಇತ್ಯಾದಿ)

2. ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಜಿಸಿರಿ, ಪ್ರತಿಯೊಂದು ಗುಂಪಿನಲ್ಲಿ 6 ವಿದ್ಯಾರ್ಥಿಗಳು ಮಾತ್ರವೇ ಇರಬೇಕು. ಗುಂಪುಗಳನ್ನು ಆಟವಾಡಲು ಸ್ಥಳದ ಒಂದು ಕಡೆ ಸಾಲಾಗಿ ನಿಲ್ಲಿಸಬೇಕು. ಪ್ರತಿಯೊಂದು ಸಾಲಿನಲ್ಲಿ ನಿಂತಿರುವ ಮೊದಲನೆಯ ಮಗುವಿನ ಕೈಗೆ ತಟ್ಟೆ ಮತ್ತು ಒಣಗಿರುವ ಐಸ್ ತುಂಡನ್ನು ಕೊಡಿರಿ.
3. ಟೀಚರ್ ಹೇಳುವಾಗ, ಮೊದಲು ನಿಂತಿರುವ ಮಗು ತನ್ನ ಕೈಗಳನ್ನು ಉಪಯೋಗಿಸದೆ ಒಣಗಿರುವ ಐಸ್ ಗಡ್ಡೆಯನ್ನು ಪಕ್ಕದ ಕೋಣೆಗೆ ಸರಿಸಿಕೊಂಡು ಹೋಗಬೇಕು. ಅವರು ಪಕ್ಕದಲ್ಲಿರುವ ಗೋಡೆಯ ಹತ್ತಿರಕ್ಕೆ ಬರುವಾಗ, ಒಣಗರುವ ಐಸ್ ಗಡ್ಡೆಯನ್ನು ಕೈಗಳಲ್ಲಿ ಎತ್ತುಕೊಳ್ಳಬೇಕು ಮತ್ತು ಹಿಂದಿನ ವಿದ್ಯಾರ್ಥಿಗೆ ತಟ್ಟೆಯನ್ನು ಕೊಡಲು ಓಡಬೇಕು.

## ಒಗಟಿನ ಉತ್ತರಗಳು – ಪಾಠ 9



| | | | | | | | | | |
|---|---|---|---|---|---|---|---|---|---|
| ಪು | ನು | ಪೇ | ವಿ | ಯೆ | ತ್ರಾ | ನ್ನ | ದ | ಯೆ | ರು |
| ನ್ನ | ನ | ತ್ರ | ಕ್ಷೆ | ಸ | ಹೂ | ಳು | ವಿ | ರೂ | ಷ |
| ತ್ರಾ | ವಿ | ರು | ಲೇ | ನ್ನ | ಗ | ದ್ಯ | ಲೇ | ಸ | ರೂ |
| ಸಂ | ತೋ | ಷ | ತ್ಥಾ | ರ್ಯ | ವಿ | ನು | ರು | ಲೇ | ತ್ರ |
| ಕ್ಷೆ | ವಿ | ಸ | ಕಾ | ನ | ಹೃ | ದ | ಯ | ಮ್ | ಪ್ರ |
| ರು | ತ್ರಾ | ತ | ವ | ನ್ನ | ಹೊಂ | ಕ್ಷೆ | ವಿ | ಪ | ಸ |
| ದೇ | ದ್ಭು | ಜೀ | ಷ | ತ್ರ | ರೀ | ದಿ | ತ್ರ | ಲೇ | ನ್ನ |
| ಅ | ವ | ತ್ರಾ | ರು | ನಿ | ರೂ | ನ್ನ | ದ | ಕ್ಷೆ | ತೆ |
| ನು | ನ್ನ | ರು | ಸ | ಪ | ವಿ | ತ್ರಾ | ತೃ | ನು | ರು |

# ಪಾಠ – 10

## ಶೀರ್ಷಿಕೆ – ಪಾಠ 10

ಎಡಬಿಡದೆ ಪ್ರರ್ಥನೆ ಮಾಡುವದು

## ಸತ್ಯವೇದ ಕಥೆ – ಪಾಠ 10

ಪೇತ್ರನು ಸೆರೆಮನೆಯಿಂದ ಬಿಡುಗಡೆಯಾದನು


ಅಪೊ 12:1-19

## ಪದಕಗಳು – ಪಾಠ 10

ಇಂದಿನ ಹಾಜರಾತಿಯ  ಪದಕ:

ಕಳೆದ ವಾರದ "ಬೂಟ್ ಕ್ಯಾಂಪ್" ಅಸೈನ್ಮೆಂಟ್ ಮಾಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ "ರಿಬ್ಬನ್" ಸಿಗುತ್ತದೆ:




ಅಪೊಸ್ತಲರ ಕೃತ್ಯಗಳಿಂದ ಓದುವ ಕಳೆದ ವಾರದ ಅಸೈನ್ಮೆಂಟ್ ಮುಗಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಕಳೆದ ವಾರದ ಕಂಠಪಾಠ ವಚನಕ ಹೇಳಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸ್ಟಾರ್ ಕೊಡಲಾಗುತ್ತದೆ.

ಈ ಅಂತಿಮ ವಾರದಲ್ಲಿ, ಪ್ರತಿಯೊಬ್ಬ ವಿದ್ಯಾರ್ಥಿಯು ಹೋಮ್ ವರ್ಕ್ ಮಾಡುವ ಮತ್ತು ಅಂದು ಪ್ರಾರ್ಥನೆ ಮಾಡುವ ತೀರ್ಮಾನ ತೆಗೆದುಕೊಳ್ಳುವ ಮೂಲಕ 10ನೆ ಹೋಮ್ ವರ್ಕ್ ರಿಬ್ಬನ್ ಪಡೆದುಕೊಳ್ಳಬಹುದು. ಒಂದುವೇಳೆ ಅವರು ಓದುವ ಎಲ್ಲಾ 9 ಅಸೈನ್ಮೆಂಟ್ ಪೂರ್ಣಗೊಳಿಸಿರುವದಾದರೆ, ಅವರು ತಮ್ಮ ಓದಿಗಾಗಿ 10ನೇ ಸ್ಟಾರ್ ಪಡೆಯುವರು. ಇಂದಿನ ವಾಕ್ಯವನ್ನೂ ಸೇರಿ ಅವರು ಎಲ್ಲಾ ಕಂಠಪಾಠ ವಾಕ್ಯಗಳನ್ನು ಒಟ್ಟಾಗಿ ಹೇಳುವದಾದರೆ, 10ನೇ ಕಂಠಪಾಠದ ಸ್ಟಾರ್ ಸಹ ಪಡೆಯಬಹುದು.




## ನಾಟಕ – ಪಾಠ 10

ಮಿಲಿಟರಿ ಅಧಿಕಾರಿ ಅಪ್ಪೈಟ್ ಸಿಪಾಯಿಗಳಾದ ಗಿಗಲ್ ಮತ್ತು ಡ್ಯೂಟಿಗೆ ವಾಕಿ-ಟಾಕಿಗಳನ್ನು ಕೊಟ್ಟರು. ಹೆಚ್ಚು ಪ್ರಗತಿಯುಳ್ಳ ತರಬೇತಿಯ ಮಧ್ಯದಲ್ಲಿ, ಗಿಗಲ್ ಮತ್ತು ಡ್ಯೂಟಿ ಹಳ್ಳದೊಳಗೆ ಸಿಕ್ಕಿಕೊಂಡರು. ಸಹಾಯಕ್ಕಾಗಿ ವಾಕಿ-ಟಾಕಿ ಉಪಯೋಗಿಸೋಣ ಎಂದು ಡ್ಯೂಟಿ ಹೇಳಿದಳು. ಪ್ರಾರಂಭದಲ್ಲಿ ಗಿಗಲ್ ಒಪ್ಪಿಕೊಳ್ಳಲಿಲ್ಲ, ನಾವೇ ಹೇಗಾದರೂ ಹೊರಗೆ ಹೋಗಲು ಪ್ರಯತ್ನಸೋಣ

ಎಂದು ಹೇಳಿದಳು. ಕೆಲವ ಸಮಯದ ನಂತರ ಅವರು ವಾಕಿ-ಟಾಕಿ ತೆಗೆದು ಸಹಾಯಕ್ಕಾಗಿ ದೇವರನ್ನು ಬೇಡಿಕೊಂಡರು. ಮಿಲಿಟರಿ ಅಧಿಕಾರಿ ಕೂಡಲೇ ಅಲ್ಲಿಗೆ ಬಂದರು ಮತ್ತು ವೈರಿಗಳನ್ನು ಓಡಿಸಿದರು.

## ಕಂಠಪಾಠ ವಚನ – ಪಾಠ 10

"ಪವಿತ್ರಾತ್ಮರಿಂದ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲೂ ಪ್ರಾರ್ಥಿಸಿರಿ. ನಿಮ್ಮ ಕೋರಿಕೆ, ಬೇಡಿಕೆಗಳನ್ನು ದೇವರಿಗೆ ಅರ್ಪಿಸಿರಿ. ಎಚ್ಚರವಾಗಿದ್ದು ಎಲ್ಲಾ ದೇವಜನರಿಗಾಗಿ ಎಡೆಬಿಡದೆ ಪ್ರಾರ್ಥಿಸಿರಿ." ಎಫೆಸಿಯರಿಗೆ **6:18**

## ಮುಖ್ಯ ಪಾಠ – ಪಾಠ 10

**ಅಪೊ 12:1-19**

ಪ್ರಾರ್ಥನೆಯು ಎರಡನೆಯ ಆಯುಧವಾಗಿದ್ದು ವೈರಿಗೆ ವಿರುದ್ಧವಾಗಿ ನಮ್ಮನ್ನು ರಕ್ಷಿಸಿಕೊಳ್ಳಲು ಇದನ್ನು ನಾವು ಉಪಯೋಗಿಸಬಹುದಾಗಿದೆ. ಇದನ್ನು ನಾವು ರಕ್ಷಣೆಯಾಗಿಯೂ ಉಪಯೋಗಿಸಿಕೊಳ್ಳಬಹುದು. ಪ್ರಾರ್ಥನೆಯ ಮೂಲಕ ನಾವು ಯುದ್ಧಗಳನ್ನು ಗೆಲ್ಲಬಹುದು, ಹೇಗೆ ಮುಂದುವರೆಯಬೇಕು ಎಂಬ ವಿಷಯದಲ್ಲಿ ದೇವರಿಂದ ಜ್ಞಾನವನ್ನು ಪಡೆಯಬಹುದು, ನಮಗಾಗಿ ಯುದ್ಧಮಾಡಲು ಪರಲೋಕದಿಂದ ದೇವದೂತರನ್ನು ಕರೆಸಬಹುದು ಮತ್ತು ನಾವು ಯಾವುದರ ವಿರುದ್ಧ ಹೋರಾಡುತ್ತಿದ್ದೇವೆ ಎಂಬದನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು.

ಇಂದಿನ ಸತ್ಯವೇದದ ಕಥೆಯಲ್ಲಿ, ಪೇತ್ರನು ಸೆರೆಮನೆಯಲ್ಲಿರುವಾಗ ಇಡೀ ಸಭೆ ಅವನಿಗಾಗಿ ಪ್ರಾರ್ಥನೆ ಮಾಡುವದನ್ನು ನಾವು ನೋಡುತ್ತೇವೆ. ಅವರು ಪ್ರಾರ್ಥನೆ ಮಾಡುತ್ತಿರುವಾಗ, ದೇವರು ಪೇತ್ರನನ್ನು ಸೆರೆಮನೆಯಿಂದ ಬಿಡುಗಡೆ ಮಾಡಲು ದೇವದೂತನನ್ನು ಕಳುಹಿಸಿದನು. ದೇವದೂತನು ಅವನನ್ನು ಸೆರೆಮನೆಯಿಂದ ಹೊರಗೆ ಕರೆದುಕೊಂಡು ಬಂದು ಬಿಟ್ಟನು ಮತ್ತು ಪೇತ್ರನು ಕ್ರಿಸ್ತನಲ್ಲಿರುವ ಸಹೋದರ ಸಹೋದರಿಯರು ಪ್ರಾರ್ಥನೆ ಮಾಡುತ್ತಿದ್ದ ಸ್ಥಳಕ್ಕೆ ಹೋದನು. ಅವನು ಬಾಗಿಲು ಬಡಿಯುವಾಗ ಅವರು ಬಾಗಲನ್ನೂ ತೆರೆಯಲಿಲ್ಲ ಯಾಕಂದರೆ ಪೇತ್ರನು ಬಂದಿದ್ದಾನೆಂದು ನಂಬಲು ಅವರಿಂದ ಆಗಲಿಲ್ಲ. ಅವರು ಅವನ ಬಿಡುಗಡೆಗಾಗಿ ಪ್ರಾರ್ಥನೆ ಮಾಡುತ್ತಿದ್ದರು, ಆದರೆ ಅವನಿಗೆ ಬಿಡುಗಡೆಯಾದದ್ದನ್ನು ಕಂಡು ಆಶ್ಚರ್ಯಪಟ್ಟರು. ಅನೇಕ ಸಲ ನಾನು ಮತ್ತು ನೀವು ಪ್ರಾರ್ಥನೆ ಮಾಡುತ್ತೇವೆ, ಆದರೆ ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸಿ ನಮ್ಮ ಸಹಾಯಕ್ಕೆ ಬರುವಾಗ ಆಶ್ಚರ್ಯಪಡುತ್ತೇವೆ. ನಾವು ಪ್ರಾರ್ಥನೆ ಮಾಡಬೇಕೆಂದು ಆತನು ಹೇಳಿದ್ದಾನೆ ಮತ್ತು ನಮಗೆ ಸಹಾಯ ಮಾಡುವದಾಗಿ ವಾಗ್ದಾನ ಮಾಡಿದ್ದಾನೆ. ಒಂದುವೇಳೆ ಇದನ್ನು ನೀವು ಪ್ರತಿದಿನ ಉಪಯೋಗಿಸಬೇಕೆಂದು ಬಯಸುವದಾದರೆ, ಸರ್ವಾಯುಧಗಳಲ್ಲಿರುವ ಇದನ್ನು ಪ್ರತಿದಿನ ತಪ್ಪದೆ ಮಾಡಬೇಕು. ಪ್ರಾರ್ಥನೆ ಪರಿಸ್ಥಿತಿಗಳನ್ನು ಬದಲಾಯಿಸುತ್ತದೆ! ನಿಮ್ಮ ಹೋರಾಟದಲ್ಲಿ ಸತತವಾಗಿ ಪ್ರಾರ್ಥನೆ ಮಾಡಿರಿ ಯಾಕಂದರೆ ಹಿಂದೆಂದಿಗಿಂತಲೂ ಈಗ ನಮಗೆ ಇದರ ಅವಶ್ಯಕತೆ ಹೆಚ್ಚಾಗಿದೆ.

## ಬೂಟ್ ಕ್ಯಾಂಪ್ – ಪಾಠ 10

**ಅಸೈನ್ಮೆಂಟ್ – ಪಾಠ 10**

ನಾವು ನಮ್ಮ ಅಭ್ಯಾಸಗಳನ್ನು ಸತತವಾಗಿ 21 ದಿನ ತಪ್ಪದೆ ಮಾಡಿದರೆ, ಅವುಗಳನ್ನು ಹಾಗೆಯೇ ಮುಂದುವರೆಯುತ್ತವೆ. ನೀವು ಪ್ರತಿದಿನ ಮುಂಜಾನೆ ಹಾಸಿಗೆಯಿಂದ ಏಳುವಾಗ ಪ್ರಾರ್ಥನೆ ಮಾಡಿರಿ. ಸ್ವಲ್ಪ ಹೊತ್ತು ಮಾಡಿದರು ಪರವಾಗಿಲ್ಲ, ಆದರೆ ಒಂದುದಿನವೂ ತಪ್ಪಿಸಬಾರದು. ಒಂದುವೇಳೆ ಒಂದುದಿನವೇನಾದರು ತಪ್ಪಿಸಿದರೆ ಮಾರಣೆಯ ದಿನ ಎರಡೂ ದಿನದ ಪ್ರಾರ್ಥನೆ ಮಾಡಿರಿ. ನಿಮ್ಮ ಹಾಸಿಗೆಯನ್ನೇ ಪ್ರಾರ್ಥನೆಯ ಸ್ಥಳವನ್ನಾಗಿ



ಬದಲಾಯಿಸಿಕೊಳ್ಳಿರಿ. 21 ದಿನ ಸತತವಾಗಿ ಪ್ರಾರ್ಥನೆ ಮಾಡುವ ಮೂಲಕ ನಿಮಗೆ ನೀವೇ ಬಹುಮಾನ ಪಡೆದುಕೊಳ್ಳಿರಿ.

**ಹೋಮ್ ವರ್ಕ್ (ಹಿರಿಯ ವಿದ್ಯಾರ್ಥಿಗಳಿಗೆ) – ಪಾಠ 10**

**ಈ ವಾರ ಓದುವ ಅಸೈನ್ಮೆಂಟ್ ಇಲ್ಲ**

## ☑ ಪವರ್ ಪಾಯಿಂಟ್/ತೀರ್ಮಾನ – ಪಾಠ 10

"ನಾನು ಆತ್ಮೀಕ ಹೋರಾಟದಲ್ಲಿದ್ದೇನೆಂದು ತಿಳಿದು ಯಾವಾಗಲೂ ಪ್ರಾರ್ಥನೆ ಮಾಡುವ ಆಯ್ಕೆ ಮಾಡಿಕೊಂಡಿದ್ದೇನೆ."

## ಪ್ರಶ್ನೆಗಳು ಮತ್ತು ಉತ್ತರಗಳು – ಪಾಠ 10

**1. "ದೇವರು ದಯಪಾಲಿಸುವ ಸರ್ವಾಯುಧಗಳಲ್ಲಿ" ಪ್ರಾರ್ಥನೆಯನ್ನು ಯಾಕೆ ಸೇರಿಸಲಾಗಿದೆ?**

ಪ್ರಾರ್ಥನೆ ನಿಮ್ಮನ್ನು ಅಥವಾ ನಿಮ್ಮ ಸ್ನೇಹಿತರನ್ನು ಬಲಪಡಿಸುತ್ತದೆ ಮತ್ತು ಪ್ರಾರ್ಥನೆ ದೇವರ ಹಾಗೂ ನಿಮ್ಮ ವೈರಿಗಳ ಮನಸ್ಸನ್ನು ಬದಲಾಯಿಸುತ್ತದೆ.

**2. ವೈರಿಯನ್ನು ಎದುರಿಸಲು ಮಾಡುವ ಪ್ರಾರ್ಥನೆ ಮತ್ತು ವೈರಿಗೆ ವಿರುದ್ಧವಾಗಿ ಹೋರಾಡಲು ರಕ್ಷಣಾತ್ಮಕವಾಗಿ ಮಾಡುವ ಪ್ರಾರ್ಥನೆಯ ಉದಾಹರಣೆಗಳು ಯಾವುವು?**

ರಕ್ಷಣೆ: ಧೈರ್ಯವುಳ್ಳವರಾಗಿರಲು ಅಥವಾ ಸಹಾಯಕ್ಕಾಗಿ ಪ್ರಾರ್ಥನೆ ಮಾಡುವಂಥ ಮನವಿಗಳು. ಹಾಗೆಯೇ ನಿಮಗೆ ವಿರುದ್ಧವಾಗಿ ಹೇಳಲಾಗುವ ಸುಳ್ಳು ಅಥವಾ ಮಾಡಲಾಗುವ ಅವಮಾನ ಆತ್ಮೀಕ ಶಕ್ತಿಗಳ ಆಕ್ರಮಣ ಎಂಬದನ್ನು ಮನವರಿಕೆ ಮಾಡಿಕೊಳ್ಳಿರಿ. ಯೇಸು ಕ್ರಿಸ್ತನ ನಾಮದಲ್ಲಿ ಅವುಗಳನ್ನು ತಿರಸ್ಕರಿಸುವ ಮೂಲಕ ಎದುರಿಸಿರಿ.

ಎದುರಿಸುವಿಕೆ: ಇತರರ ರಕ್ಷಣೆಗಾಗಿ ಪ್ರಾರ್ಥಿಸುವದು, ಯಾವುದಾದರು ಪಟ್ಟಣದವರು ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವಂತೆ ಪ್ರಾರ್ಥನೆ ಮಾಡುವದು ಅಥವಾ ನಿಮ್ಮ ಪ್ರದೇಶದಲ್ಲಿರುವ ಯಾವುದಾದರು ವಿಗ್ರಹ ಅಥವಾ ದೇವತೆಗೆ ವಿರುದ್ಧವಾಗಿ ಪ್ರಾರ್ಥಿಸುವದು.

**3. ಒಂದುವೇಳೆ ದೇವರು ಎಲ್ಲವುಗಳನ್ನು ನಿಯಂತ್ರಿಸುವವನಾದರೆ, ಏನಾಗುತ್ತದೆ ಎಂಬದು ಆತನಿಗೆ ಮೊದಲೇ ತಿಳಿದಿರುವಾಗ ನನ್ನನ್ನು ಬೇಡಿಕೊಳ್ಳಿರಿ ಎಂದು ಆತನು ಯಾಕೆ ಹೇಳಿದ್ದಾನೆ?**

ಯಾಕಂದರ ಆತನ ಸಹಾಯವು ಏನಾಗುವದೆಂದು ದೃಢಪಡಿಸತ್ತದೆ. ನಿಮ್ಮ ಪ್ರಾರ್ಥನೆ ನಿಮ್ಮ ಹಾಗೂ ನಿಮ್ಮ ಸುತ್ತಮುತ್ತಲಿನಲ್ಲಿರುವವರ ಜೀವಿತದಲ್ಲಿ ಬದಲಾವಣೆಗಳನ್ನು ಉಂಟುಮಾಡುತ್ತದೆ.

**4. ಎದುರಿಸಲು ನಾವು ಉಪಯೋಗಿಸಬಹುದಾದ ಎರಡು ಆಯುಧಗಳು ಯಾವುವು?**

ಪ್ರಾರ್ಥನೆ ಮತ್ತು ದೇವರ ವಾಕ್ಯವಾಗಿರುವ ಪವಿತ್ರಾತ್ಮನು ಕೊಡುವ ಕತ್ತಿ.

**5. ಪೇತ್ರನು ಮರಿಯಳ ಮನೆಯ ಬಾಗಿಲನ್ನು ಬಡಿದಾಗ ಬಾಗಿಲ ಬಳಿಗೆ ಬಂದವರು ಯಾರು?**

ಚಾಕರಿಯವಳಾದ ರೋಧ.

## ಆಟ: ಸಂಚು – ಪಾಠ 10

ಪರಿಚಯ

ನಾವು ಪ್ರಾರ್ಥನೆಯನ್ನು ರಕ್ಷಿಸಿಕೊಳ್ಳಲು ಹಾಗೂ ಎದುರಿಸಲು ಉಪಯೋಗಿಸುತ್ತೇವೆ. ಹಾಗೆಯೇ ಈ ಆಟದಲ್ಲಿ ನಾವು ಹಾಳೆಗಳನ್ನು ಸಂಗ್ರಹಿಸಲು ಮುಂದಕ್ಕೆ ಹೋಗಬೇಕು ಮತ್ತು ಅದೇ ಸಮಯದಲ್ಲಿ ನಮ್ಮ ಬೆನ್ನಿನ ಬಗ್ಗೆಯೂ ಯೋಚಿಸಬೇಕು.



ಸಾಮಗ್ರಿಗಳು

ಹಾಳೆ (ಲೆಟರ್ ಅಳತೆಯ ಹಾಳೆಗಳನ್ನು 4 ಚೌಕಾಕಾರದಲ್ಲಿ ಕತ್ತರಿಸಬೇಕು – ಒಂದೊಂದನ್ನು ನಿಮ್ಮ ತರಗತಿಯಲ್ಲಿಯೂ ವಿದ್ಯಾರ್ಥಿಗಳಿಗೆ ಕೊಡಬೇಕು), ಟೇಪ್.

ಆಟ ಆಡುವದು

1. ಪ್ರತಿಯೊಬ್ಬ ವಿದ್ಯಾರ್ಥಿಯ ಬೆನ್ನಿಗೆ ಪೇಪರ್ ಹಾಳೆಯನ್ನು ಅಂಟಿಸಿರಿ.
2. ಟೀಚರ್ ಹೇಳುವಾಗ, ವಿದ್ಯಾರ್ಥಿಗಳು ಇತರೆ ವಿದ್ಯಾರ್ಥಿಗಳ ಬೆನ್ನಿಗೆ ಅಂಟಿಸಲಾಗಿರು ಹಾಳೆಯನ್ನು ಕೀಳಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳು ತಮ್ಮ ಬೆನ್ನ ಮೇಲಿರುವ ಹಾಳೆಯನ್ನು ಕಾಪಾಡಿಕೊಳ್ಳಲು ಮುಟ್ಟುವಂತಿಲ್ಲ. ಆದರೆ ಯಾರೂ ತಮ್ಮ ಬೆನ್ನ ಹಿಂದಿರುವ ಹಾಳೆಯನ್ನು ಕೀಳದಂತೆ ನೋಡಿಕೊಳ್ಳಬೇಕು.
3. ಯಾರಾದರೋ ವಿದ್ಯಾರ್ಥಿಯ ಬೆನ್ನಿಗೆ ಅಂಟಿಸಿರುವ ಹಾಳೆಯನ್ನು ಕೀಳುವದಾದರೆ, ಆ ವಿದ್ಯಾರ್ಥಿಯು ತಾನು ಸಂಗ್ರಹಿಸಿರುವ ಹಾಳೆಯನ್ನೆಲ್ಲಾ ಅವನಿಗೆ ಕೊಡಬೇಋು ಮತ್ತು ಗೋಡೆಯ ಬಳಿಗೆ ಹೋಗಿ ಮತ್ತೆ ಹೊಸದಾಗಿ ಪ್ರಾರಂಭಿಸಬೇಕು.
4. ಹಾಳೆಗಳೊಂದಿಗೆ ಮಧ್ಯದಲ್ಲಿ ಒಬ್ಬ ವಿದ್ಯಾರ್ಥಿ ಉಳಿಯುವ ತನಕ ಮುಂದುವರೆಸಿರಿ. ಹಾಳೆಗಳನ್ನು ಮತ್ತೆ ವಿತರಿಸಿರಿ ಮತ್ತು ಆಟವನ್ನು ಪುನಃ ಪ್ರಾರಂಭಿಸಿರಿ.

ಆಯ್ಕೆ

ಪೇಪರ್ ಮತ್ತು ಟೇಪ್ ಬದಲಾಗಿ, ನೀವು ಉದ್ದ ಹಾಗೂ ತೆಳ್ಳಗಿರುವ ಬಟ್ಟೆಯ ತುಂಡನ್ನು ಉಪಯೋಗಿಸಬಹುದು ಮತ್ತು ಮಕ್ಕಳು ಅವುಗಳನ್ನು ತಮ್ಮ ಬೆಲ್ಟ್ ಗಳಲ್ಲಿ ಸಿಕ್ಕಿಸಿಕೊಳ್ಳಬಹುದು.


## ಒಗಟಿನ ಉತ್ತರಗಳು – ಪಾಠ 10

ಕೆಳಗೆ ಕೊಡಲಾಗಿರುವವುಗಳು ಆಲೋಚನೆಗಳಾಗಿವೆ. ವಿವಿಧ ರೀತಿಯ ಉತ್ತರಗಳನ್ನು ಅಂಗೀಕರಿಸಿಕೊಳ್ಳಿರಿ.

ಪ್ರಾರ್ಥಿಸಿರಿ: ಕುಟುಂಬ, ಆಹಾರ, ಸಭೆ, ಅನಾರೋಗ್ಯ, ಜ್ಞಾನ.

ಮಾದರಿ ಪ್ರಾರ್ಥನೆ: ತಂದೆಯಾದ ದೇವರು ಮತ್ತೊಂದು ದಿನವನ್ನು ಕೊಟ್ಟಿರುವದಕ್ಕಾಗಿ ಮತ್ತು ನನ್ನ ಇಡೀ ಕುಟುಂಬಕ್ಕಾಗಿ ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ದಯವಿಟ್ಟು ನನ್ನ ತಂದೆಗೆ ಸಹಾಯಮಾಡು. (ವವಿಧ ಉತ್ತರಗಳನ್ನು ಅಂಗೀಕರಿಸಿಕೊಳ್ಳಿರಿ)


ಪ್ರಾರ್ಥನೆ ಮಾಡದಂತೆ ಅಡ್ಡಿಪಡಿಸುವ ಕಾರ್ಯಗಳು: ನಿದ್ದೆ ಬರುವಂತಾಗುತ್ತದೆ, ಸ್ನೇಹಿತರೊಂದಿಗೆ ಸಮಯ ವ್ಯರ್ಥ ಮಾಡುವದು, ತಡವಾಗಿ ಏಳುವದು, ಹೋಮ್ ವರ್ಕ್ ಅಥವಾ ಬೇರೆ ಕೆಲಸ ಮಾಡುವದು.







| | | | | | | | | | |
|---|---|---|---|---|---|---|---|---|---|
| ಯ | ಗ | ನೆ | ರ್ಥ | ನು | ಹೆ | ರ್ಶ | ಬಾ | ತ್ರ | ರ್ಥ |
| ಅ | ರ | ನ | ನು | ದೇ | ರೋ | ಪೇ | ಯ | ಗಿ | ದ್ಯ |
| ಯೆ | ನು | ಭೆ | ರ | ಪೇ | ದ | ಳಿ | ಸಿ | ದ್ಯ | ಉ |
| ಹೂ | ರ್ಶ | ಗ | ಣ | ಪ | ನು | ತ್ರ | ಪಾ | ಯ | ಳಿ |
| ದ್ಯ | ರ್ಥ | ಟ್ರ | ಉ | ತ | ಳಿ | ರ್ಶ | ಯಿ | ನು | ಗ |
| ಸೆ | ಪ | ಗ | ದೂ | ರ್ಶ | ದೇ | ಗ | ಗ | ಪೇ | ನ |
| ತ್ರ | ರೆ | ವ | ಪ್ರಾ | ಳಿ | ವ | ಹ | ಳು | ರ್ಶ | ದ್ಯ |
| ಯ | ದೇ | ಮ | ರ್ಥ | ಗ | ರು | ಉ | ದ | ನು | ಪೇ |
| ನು | ಗ | ಪೇ | ನೆ | ಯೂ | ದಾ | ಯ | ದ್ಯ | ಳಿ | ತ್ರ |



# ನನ್ನ ತರಗತಿಯ ಚಾರ್ಟ್

## ಪದಕಗಳು ಮತ್ತು ನಿರ್ದಿಷ್ಟತೆಗಳು

| | ವಾರ 1 | ವಾರ 2 | ವಾರ 3 | ವಾರ 4 | ವಾರ | ವಾರ 6 | ವಾರ 7 | ವಾರ 8 | ವಾರ 9 | ವಾರ 10 | |
|---|---|---|---|---|---|---|---|---|---|---|---|
| ವಿದ್ಯಾರ್ಥಿ: | | | | | | | | | | | |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |
| ವಿದ್ಯಾರ್ಥಿ: | | | | | | | | | | | ಹಾಜರಾತಿ |
| | | | | | | | | | | | ಓದುವದು |
| | | | | | | | | | | | ಕಂಠಪಾಠ ಮಾಡುವದು |
| | | | | | | | | | | | ಹೋಮ್ ವರ್ಕ್ |

ಒಂದುವೇಳೆ ನಿಮಗೆ 10ಕ್ಕಿಂತ ಹೆಚ್ಚು ವಿದ್ಯರ್ಥಿಗಳಿರುವದಾದರೆ ಈ ಹಾಳೆಯ ಫೋಟೋ ಕಾಪಿಗಳನ್ನು ತೆಗೆಸಿಕೊಳ್ಳಿರಿ